ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## (ಪರಿಷ್ಕೃತ – 2023)

## ಭಾಗ – 2

# 6

## ಆರನೆಯ ತರಗತಿ

@KTBS
NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6£Ã Cqg¸, ªÀ¯Ã±gÀ, ¨AU¼ÆgÀ - 560 003

# ಪರಿವಿಡಿ

Q3K8Y5


| ಅಧ್ಯಾಯದ ಸಂಖ್ಯೆ | ಇತಿಹಾಸ | ಪುಟ ಸಂಖ್ಯೆ |
|---|---|---|
| 12 | ಉತ್ತರ ಭಾರತದ ಕೆಲವು ರಾಜವಂಶಗಳು | 1 |
| 13 | ದೆಹಲಿಯ ಸುಲ್ತಾನರು | 13 |
| 14 | ಭಾರತೀಯ ವೈಚಾರಿಕತೆ ಹಾಗೂ ಭಕ್ತಿಪಂಥ | 22 |
| 15 | ವಿಜಯನಗರ ಸಾಮ್ರಾಜ್ಯ ಹಾಗೂ ಬಹಮನಿ ರಾಜ್ಯ | 32 |
| 16 | ಮೊಘಲರು ಹಾಗೂ ಮರಾಠರು | 50 |
| | **ಪೌರನೀತಿ** | |
| 17 | ರಾಜ್ಯ ನಿರ್ದೇಶಕ ತತ್ವಗಳು | 65 |
| 18 | ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು | 70 |
| 19 | ರಾಷ್ಟ್ರೀಯ ಭಾವೈಕ್ಯ | 78 |
| 20 | ರಾಷ್ಟ್ರೀಯ ಚಿಹ್ನೆಗಳು | 82 |
| | **ಭೂಗೋಳ** | |
| 21 | ಏಷ್ಯಾ ಖಂಡ | 90 |
| 22 | ಯೂರೋಪ್ ಖಂಡ | 112 |
| 23 | ಆಫ್ರಿಕ ಖಂಡ | 130 |


@KTBS NOT TO BE REPUBLISHED

# ಇತಿಹಾಸ

## ಅಧ್ಯಾಯ 12 — ಉತ್ತರ ಭಾರತದ ಕೆಲವು ರಾಜವಂಶಗಳು

M4F1S6

**ಪಾಠದ ಪರಿಚಯ**

650 ರಿಂದ 1200ರ ಕಾಲಾವಧಿಯಲ್ಲಿ ಕಾರ್ಕೋಟರು, ರಜಪೂತರು ಹಾಗೂ ಅಹೋಮ್ ವಂಶಗಳು ಭಾರತದ ಇತಿಹಾಸದಲ್ಲಿ ಬಹುಮುಖ್ಯ ಪಾತ್ರ ವಹಿಸಿದವು. ಈ ಪಾಠದಲ್ಲಿ ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ಅವುಗಳ ಕೊಡುಗೆ; ಆ ಕಾಲದ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ನಿರೂಪಿಸಲಾಗಿದೆ. ಹಾಗೆಯೇ ಇದು ರಜಪೂತ ವಂಶದ ಪ್ರಮುಖವಾದ ವಂಶಗಳಾದ ಗುರ್ಜರ ಪ್ರತಿಹಾರ, ಪಾಲ, ಚೌಹಾಣ ಮತ್ತು ಗುಹಿಲರ ಬಗ್ಗೆಯೂ ತಿಳಿಸುತ್ತದೆ.

**ಸಾಮರ್ಥ್ಯಗಳು**

1 ಕಾರ್ಕೋಟ ರಾಜವಂಶದ ಸಾಧನೆಗಳನ್ನು ತಿಳಿದುಕೊಳ್ಳುವುದು.
2 ರಜಪೂತ ವಂಶಗಳು ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಪ್ರಶಂಸಿಸುವುದು.
3 ಕೆಲವು ರಜಪೂತ ವಂಶಗಳ ಮುಖ್ಯ ಸಾಧನೆಗಳನ್ನು ತಿಳಿದುಕೊಳ್ಳುವುದು.
4 ರಜಪೂತರ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.
5 ಅಹೋಮ್ ರಾಜವಂಶದ ದೊರೆಗಳ ಸಾಧನೆಗಳನ್ನು ಮೆಚ್ಚುವುದಲ್ಲದೆ ಕಲೆಗೆ ಅವರ ಕೊಡುಗೆಗಳನ್ನು ಮೆಚ್ಚುತ್ತಾರೆ.

NOT TO BE REPUBLISHED @KTBS

## ಕಾಶ್ಮೀರದ ಕಾರ್ಕೋಟ ಸಾಮ್ರಾಜ್ಯ

ವಿಶ್ವವೇ ಬೆರಗಾಗುವಂತೆ ಆಡಳಿತವನ್ನು ನಡೆಸಿದ, ಮಾದರಿ ರಾಜ್ಯವನ್ನು ಕಟ್ಟಿದ ಮತ್ತು ಅಸಾಧ್ಯವಾದುದನ್ನು ಸಾಧಿಸಿದ ಭಾರತದ ರಾಜವಂಶಗಳಲ್ಲಿ ಕಾಶ್ಮೀರದ ಕಾರ್ಕೋಟ ವಂಶಸ್ಥರು ಒಬ್ಬರು. 625ರಲ್ಲಿ ರಾಜಾ ದುರ್ಲಭವರ್ಧನನಿಂದ ಸ್ಥಾಪಿತವಾದ ಕಾರ್ಕೋಟ ಮನೆತನ ಆ ಕಾಲದ ಭಾರತದ ಬಲಿಷ್ಠ ಸಂಸ್ಥಾನಗಳಲ್ಲಿ ಒಂದಾಗಿತ್ತು. 230 ವರ್ಷ (625 – 855) ಅಸ್ತಿತ್ವದಲ್ಲಿದ್ದ ಕಾರ್ಕೋಟ ಸಾಮ್ರಾಜ್ಯ ಹಿಮಾಲಯ ಮತ್ತು ಅದರ ತಪ್ಪಲಿನ ಪ್ರದೇಶಗಳಲ್ಲಿ ತನ್ನ ಪ್ರಭಾವವನ್ನು ಬೀರಿದ್ದು ಮಾತ್ರವಲ್ಲದೆ ಮಧ್ಯ ಏಷ್ಯಾದವರೆಗೂ ವಿಸ್ತರಿಸಿತ್ತು. ಪಾರಸ್ಪೋರ್ ಅಥವಾ ಪರಿಹಾಸಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಕಾರ್ಕೋಟರು ಸೂರ್ಯೋಪಾಸಕರಾಗಿದ್ದರು. ಕಾಶ್ಮೀರದ ಗತವೈಭವವನ್ನು ಸಾರುವ ಹೆಸರಾಂತ ಮಾರ್ತಾಂಡ ಸೂರ್ಯ ದೇವಸ್ಥಾನ ಇವರ ಕೊಡುಗೆ.


ಲಲಿತಾದಿತ್ಯ

ಕಾರ್ಕೋಟ ವಂಶದಲ್ಲಿ ಗಮನ ಸೆಳೆಯುವ ಮತ್ತು ಅತ್ಯಂತ ಪ್ರಭಾವಿ ರಾಜನಾಗಿದ್ದವನೆಂದರೆ 724ರಲ್ಲಿ ಪಟ್ಟಕ್ಕೆ ಬಂದ ಲಲಿತಾದಿತ್ಯ. ಆತನ 36 ವರ್ಷಗಳ ಆಳ್ವಿಕೆಯಲ್ಲಿ ಸಾಮ್ರಾಜ್ಯವು ಇಂದಿನ ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಬಿಹಾರದವರೆಗೆ ಹಬ್ಬಿತ್ತು. ಈತನ ಕಾಲವನ್ನು ಕಾರ್ಕೋಟ ವಂಶದ ಚಿನ್ನದ ಯುಗ ಎನ್ನಬಹುದು. ಏಕೆಂದರೆ ಲಲಿತಾದಿತ್ಯನು ಕಲೆ, ಸಂಸ್ಕೃತಿಗಳಿಗೆ ಯಥೇಚ್ಛವಾದ ಪ್ರೋತ್ಸಾಹವನ್ನು ಕೊಟ್ಟನು.

ಕಾಶ್ಮೀರದ ಶೈವಸಿದ್ಧಾಂತದ ಅತ್ಯಂತ ವೈಭವದ ಕಾಲಘಟ್ಟವೆಂದು ಕಾರ್ಕೋಟರ ಕಾಲವನ್ನು ಹೇಳಲಾಗುತ್ತದೆ. ವಸುಗುಪ್ತನ ಶೈವಸೂತ್ರ ಈ ಅವಧಿಯಲ್ಲಿ ರಚನೆಯಾಯಿತು. ಖ್ಯಾತ ತತ್ತ್ವಶಾಸ್ತ್ರಜ್ಞ, ಕವಿ ಅಭಿನವಗುಪ್ತ ಕಾರ್ಕೋಟಕರ ಕಾಲದವನಾಗಿದ್ದ. ಶೈವಸೂತ್ರಗಳ ತ್ರಿಕ ಮತ್ತು ಕೌಲ ಸಂಪ್ರದಾಯಗಳು ಈ ಅವಧಿಯಲ್ಲಿ ಉಚ್ಛ್ರಾಯಸ್ಥಿತಿಯನ್ನು ತಲುಪಿದವು. ಹೆಸರಾಂತ ಕವಿಯಾದ ಕಲ್ಹಣನು ಲಲಿತಾಧಿತ್ಯನ ಆಸ್ಥಾನದಲ್ಲಿದ್ದನು.

## ರಜಪೂತರು

ರಜಪೂತರು ಸಾಹಸ, ಪರಾಕ್ರಮಗಳಿಗೆ ಹೆಸರಾದವರು. ಅವರು ತಮ್ಮನ್ನು ಕ್ಷತ್ರಿಯರು, ತಮ್ಮದು ಸೂರ್ಯವಂಶ ಮತ್ತು ಚಂದ್ರವಂಶ ಎಂದು ಗುರುತಿಸಿಕೊಳ್ಳುತ್ತಾರೆ. ರಜಪೂತ ವಂಶಗಳು ಉತ್ತರ ಭಾರತದಲ್ಲಿ ಸುಮಾರು 500 ವರ್ಷಗಳ ಕಾಲ ಆಳ್ವಿಕೆ ನಡೆಸಿದವು. ಅದೊಂದು ಭವ್ಯವಾದ ಕಾಲವಾಗಿತ್ತು. ಆಕ್ರಮಣಕಾರರಾಗಿ ಭಾರತಕ್ಕೆ ಬಂದಿದ್ದ ಅರಬ್ಬರು, ಟರ್ಕರು, ಅಫ್‌ಘನರು ಮತ್ತು ಮೊಗಲರನ್ನು ಎದುರಿಸಿ, ಅವರೊಡನೆ ದಿಟ್ಟತನದಿಂದ ಹೋರಾಡಿದವರು ಇವರೇ.

### ರಜಪೂತರ ಗುಣಧರ್ಮಗಳು

ಭಾರತದ ಇತಿಹಾಸದಲ್ಲಿ ರಜಪೂತರಿಗೆ ವಿಶಿಷ್ಟ ಸ್ಥಾನವಿದೆ. ಗೋವುಗಳು, ಅನಾಥರು, ದುರ್ಬಲರು ಮತ್ತು ಸ್ತ್ರೀಯರ ರಕ್ಷಣೆ ಮಾಡುವುದು ತಮ್ಮ ಧರ್ಮವೆಂದು ಅವರು ಭಾವಿಸಿದ್ದರು. ಶರಣಾಗತರಾದವರನ್ನು ರಕ್ಷಿಸುತ್ತಿದ್ದರು. ತಮ್ಮ ಪೂರ್ವಜರ ಪರಾಕ್ರಮಗಳ ಬಗ್ಗೆ ಕಥನಗಳನ್ನು ಹಾಡಿ ಸ್ಫೂರ್ತಿ ಪಡೆದುಕೊಳ್ಳುತ್ತಿದ್ದರು.

ರಜಪೂತ ಸ್ತ್ರೀಯರು ಅತಿ ಧೈರ್ಯಶಾಲಿಗಳಾಗಿದ್ದರು. ಸ್ತ್ರೀಯರು ತಮ್ಮ ಪತಿಯನ್ನು ಯುದ್ಧದಲ್ಲಿ ಕಳೆದುಕೊಂಡಾಗ, ಅವಮಾನಿತರಾಗಿ ಬಾಳುವುದಕ್ಕಿಂತ ಮರಣವೇ ಲೇಸೆಂದು ಭಾವಿಸಿ ಸಾಮೂಹಿಕ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರು. ಈ ರೂಢಿಯನ್ನು 'ಜೋಹಾರ್' ಎನ್ನುವರು.

### ಕಲೆ ಮತ್ತು ವಾಸ್ತುಶಿಲ್ಪ

ರಜಪೂತ ಕಾಲದ ವಾಸ್ತುಶಿಲ್ಪ, ಸಾಹಿತ್ಯ ಮತ್ತು ಕಲೆಗಳು ಶ್ರೀಮಂತವಾಗಿವೆ. ಅವರ ಕಲಾತ್ಮಕ ದೇವಾಲಯಗಳು, ಸುಂದರ ಅರಮನೆಗಳು ಮತ್ತು ಬಲಿಷ್ಠ ಕೋಟೆಗಳನ್ನು ನಾವು ಇಂದಿಗೂ ಕಾಣಬಹುದು. ಅಂತಹ ಕೆಲವು ವಾಸ್ತುಕೃತಿಗಳು ಇಲ್ಲಿವೆ.



*ಖಂಡರಾಯ ಮಹಾದೇವ ಮಂದಿರ, ಖಜುರಾಹೊ*

**ಖಜುರಾಹೊ (ಮಧ್ಯ ಪ್ರದೇಶ):** ಖಜುರಾಹೊ ಎಂಬಲ್ಲಿನ ವಿಶ್ವವಿಖ್ಯಾತ ಖಂಡರಾಯ ಮಹಾದೇವ ಮಂದಿರ. ಇಲ್ಲಿ 85 ಮಂದಿರಗಳಿದ್ದುವು. ಅವುಗಳಲ್ಲಿ ಈಗ 22 ಉಳಿದಿವೆ.

NOT TO BE REPUBLISHED @KTBS

**ದಿಲ್‌ವಾರಾ (ರಾಜಸ್ಥಾನ):** ಅಬು ಪರ್ವತದ ಮೇಲಿನ ದಿಲ್‌ವಾರಾ ಎಂಬಲ್ಲಿನ ಅಮೃತ ಶಿಲಾಮಂದಿರ. ಇಲ್ಲಿನ ಸೂಕ್ಷ್ಮ ಕೆತ್ತನೆಯ ಮೋಹಕ ಕೃತಿಗಳು ಜಗತ್ಪ್ರಸಿದ್ಧವಾಗಿವೆ.



*ದಿಲ್‌ವಾರಾ ಮಂದಿರ, ಅಬು ಪರ್ವತ*

**ಕೋನಾರ್ಕ್ (ಒಡಿಶ):** ಕೋನಾರ್ಕ್ ಎಂಬಲ್ಲಿನ ಅಪೂರ್ವ ಸೂರ್ಯ ದೇವಸ್ಥಾನ ಸೂರ್ಯದೇವನ ರಥದಂತೆ ಇರುವ ಭಾರತದ ಭವ್ಯ ಹಾಗೂ ಬೃಹತ್ ದೇವಾಲಯಗಳಲ್ಲಿ ಒಂದಾಗಿದೆ. ರಥದ 24 ಗಾಲಿಗಳನ್ನು ಸುಂದರವಾಗಿ ಕೊರೆಯಲಾಗಿದೆ.



*ಸೂರ್ಯ ಮಂದಿರ, ಕೋನಾರ್ಕ್.*

@KTBS NOT TO BE REPUBLISHED

**ಭುಬನೇಶ್ವರ (ಒಡಿಶ):** ಭುಬನೇಶ್ವರ ಎಂಬಲ್ಲಿನ ಲಿಂಗರಾಜ ದೇವಾಲಯ. ಒಂದು ಸಾವಿರ ವರ್ಷಗಳಷ್ಟು ಹಳೆಯದು. ಇದರ ಶಿಖರವು 180 ಅಡಿ ಎತ್ತರವಿದೆ.



*ಲಿಂಗರಾಜ ದೇವಾಲಯ, ಭುಬನೇಶ್ವರ*



*ಗ್ವಾಲಿಯರ್ ಕೋಟೆ*

**ಗ್ವಾಲಿಯರ್ (ಮಧ್ಯ ಪ್ರದೇಶ):** ಬೃಹದಾಕಾರದ ಗ್ವಾಲಿಯರ್ ಕೋಟೆಯನ್ನು 'ಭಾರತದ ಕೋಟೆಗಳ ಕೊರಳ ಹಾರದ ಮುತ್ತು' ಎಂದು ಕರೆದಿದ್ದಾರೆ. ಇಲ್ಲಿ ರಾಜಾ ಮಾನಸಿಂಗನು ತನ್ನ ನೆಚ್ಚಿನ ರಾಣಿ ಮೃಗನಯನೆಗಾಗಿ ಕಟ್ಟಿಸಿದ ಎರಡಂತಸ್ತಿನ ಅರಮನೆಯಿದೆ. ಹೊರಭಾಗದ ಬಂಡೆಗೋಡೆಗಳಲ್ಲಿ ಕೊರೆಯಲಾದ ಹಲವಾರು ಮೂರ್ತಿಗಳಲ್ಲಿ ಜೈನಮತದ ಪ್ರಥಮ ತೀರ್ಥಂಕರ ವೃಷಭನಾಥ (ಆದಿನಾಥ) ಮೂರ್ತಿ ಭಾರಿ ಎತ್ತರವಾಗಿದೆ.

**ಜೈಪುರ (ರಾಜಸ್ಥಾನ):** ಜೈಪುರವನ್ನು 'ಗುಲಾಬಿ ನಗರ' ಎನ್ನುವರು. ಏಕೆಂದರೆ ಇಲ್ಲಿನ ಕಟ್ಟಡಗಳ ಬಣ್ಣ ಗುಲಾಬಿ. ಜೈಪುರ ಪ್ರಪಂಚದ ಸುಂದರ ನಗರಗಳಲ್ಲೊಂದು ಎಂಬ ಹೊಗಳಿಕೆಗೆ ಪಾತ್ರವಾಗಿದೆ. ಐದು ಅಂತಸ್ತುಗಳುಳ್ಳ ಹವಾಮಹಲ್ ಜೈಪುರದ ಒಂದು ಆಕರ್ಷಕ ಕಟ್ಟಡ.

© KTBS NOT TO BE REPUBLISHED



*ಹವಾಮಹಲ್, ಜೈಪುರ*

**ಉದಯಪುರ (ರಾಜಸ್ಥಾನ):** ಭಾರತದ ರಮಣೀಯ ನಗರವಾದ ಉದಯಪುರದಲ್ಲಿನ ಅರಮನೆ ರಾಜಸ್ಥಾನದಲ್ಲೇ ದೊಡ್ಡದು.



*ಅರಮನೆ, ಉದಯಪುರ*

**ಚಿಕಿಣಿ ಚಿತ್ರಗಳು:** ರಜಪೂತರು ಭಿತ್ತಿ ಮತ್ತು ಚಿಕಿಣಿ ವರ್ಣಚಿತ್ರಗಳನ್ನು ಪ್ರೋತ್ಸಾಹಿಸಿದರು. (ಚಿಕಿಣಿ ಚಿತ್ರವೆಂದರೆ ನಾಜೂಕಾಗಿ ಚಿತ್ರಿಸಿದ ಕಿರುಚಿತ್ರ). ದೇವಾಲಯ, ಅರಮನೆ, ಗೋಡೆಗಳು ಹಾಗೂ ಪುಸ್ತಕಗಳಲ್ಲಿ ಅಲಂಕಾರ ಚಿತ್ರಗಳನ್ನು ಕಲಾವಿದರು ರಚಿಸಿದರು.



*ರಜಪೂತ ಚಿಕಿಣಿ ಚಿತ್ರ*

**ಸಾಹಿತ್ಯ:** ರಜಪೂತರ ಕಾಲದಲ್ಲಿ ಸಂಸ್ಕೃತ ಸಾಹಿತ್ಯ ಹುಲುಸಾಗಿ ಬೆಳೆಯಿತು. ಗುಜರಾತಿ, ಹಿಂದಿ, ರಾಜಸ್ಥಾನಿ ಭಾಷೆಗಳು ಅಭಿವೃದ್ಧಿ ಹೊಂದಿದವು. ಚಾಂದ್ ಬರ್ದಾಯಿಯ 'ಪೃಥ್ವೀರಾಜ ರಾಸೊ' ಈ ಕಾಲದ ಪ್ರಸಿದ್ಧ ಹಿಂದಿ ಕೃತಿ. ರಜಪೂತ ದೊರೆಗಳಲ್ಲಿ ಅನೇಕ ಮಂದಿ ಸ್ವತಃ ವಿದ್ವಾಂಸರಾಗಿದ್ದರು. ಕವಿಗಳಿಗೆ ಆಶ್ರಯ ನೀಡಿದರು. 'ಗೀತಗೋವಿಂದ' ಬರೆದ ಜಯದೇವ ಕವಿ ಸೇನರ ಆಸ್ಥಾನದಲ್ಲಿದ್ದನು. ನಲಂದಾ, ಕಾಶಿ, ವಿಕ್ರಮಶೀಲ, ಉಜ್ಜಯಿನಿ ಮುಂತಾದ ಪ್ರಾಚೀನ ವಿದ್ಯಾಕೇಂದ್ರಗಳಿಗೆ ರಜಪೂತರು ಬೆಂಬಲ ನೀಡಿದರು.




©KTBS NOT TO BE REPUBLISHED

**ಚಟುವಟಿಕೆ:** ಭಾರತದ ಪ್ರಾಚೀನ ವಿದ್ಯಾಕೇಂದ್ರಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಅಂತರಜಾಲದಿಂದ ಸಂಗ್ರಹಿಸಿ ಒಂದು ವರದಿ ಸಿದ್ಧಪಡಿಸಿ.

## ರಜಪೂತ ಮನೆತನಗಳು

ಭಾರತದ ಇತಿಹಾಸದಲ್ಲಿ ಅನೇಕ ರಜಪೂತ ಮನೆತನಗಳು ಪ್ರಮುಖ ಪಾತ್ರ ವಹಿಸಿದವು. ಅವುಗಳ ಪೈಕಿ ಗುರ್ಜರ ಪ್ರತಿಹಾರರು, ಪಾಲರು, ಚೌಹಾಣರು ಮತ್ತು ಗುಹಿಲರು ಇವರ ಸಾಧನೆಗಳನ್ನು ಇಲ್ಲಿ ನಿರೂಪಿಸಲಾಗಿದೆ.

**ಗುರ್ಜರ ಪ್ರತಿಹಾರರು:** ಗುರ್ಜರ ಪ್ರತಿಹಾರ ದೊರೆಗಳು ಮಧ್ಯಪ್ರದೇಶದ ಆವಂತಿಯಿಂದ (ಉಜ್ಜಯಿನಿ) ಆಳ್ವಿಕೆ ನಡೆಸುತ್ತಿದ್ದರು. **ನಾಗಭಟನು** ಈ ವಂಶದ ಪ್ರಸಿದ್ಧ ರಾಜ. ಅರಬ್ಬರ ದಂಡಯಾತ್ರೆಯಿಂದ ಭಾರತವನ್ನು ರಕ್ಷಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಈತನು ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದ.

ಇದೇ ವಂಶದ **ಭೋಜನು** ಓರ್ವ ಶ್ರೇಷ್ಠ ದೊರೆ ಹಾಗೂ ಸಾಹಿತಿಯಾಗಿದ್ದನು. ಆ ಕಾಲದ ಭಾರತದ ಪ್ರತಿಷ್ಠಿತ ನಗರವಾದ ಕನೌಜವನ್ನು ಈತನು ವಶಪಡಿಸಿಕೊಂಡನು. ಬಂಗಾಲದ ಪಾಲರನ್ನೂ ಇವನು ಸೋಲಿಸಿದನು. ಇವನ ರಾಜ್ಯವನ್ನು ಸಂದರ್ಶಿಸಿದ ಅರಬ್ ಪ್ರವಾಸಿ ಸುಲೇಮಾನ್, **"ಈತನು ಘನವಂತ ದೊರೆ, ಅರಬ್ಬರ ಶತ್ರು, ಒಳ್ಳೆಯ ಅಶ್ವದಳ ಉಳ್ಳವನು"**, ಎಂದಿದ್ದಾನೆ.

- **ಪಾಲರು:** ಪಾಲರು ಸುಮಾರು ನಾಲ್ಕು ಶತಮಾನಗಳ ಕಾಲ ಆಳಿದರು. ಧರ್ಮಪಾಲನು ಪಾಲ ವಂಶದ ಶ್ರೇಷ್ಠ ದೊರೆ. ಇವನ ಕಾಲದಲ್ಲಿ ಪಾಲ ರಾಜ್ಯವು ಉತ್ತರ ಭಾರತದ ಗಣ್ಯ ರಾಜ್ಯಗಳಲ್ಲಿ ಒಂದಾಗಿತ್ತು. ಪ್ರಸಿದ್ಧ ನಗರ ಕನೌಜವನ್ನು ಗೆದ್ದುದು ಈತನ ವಿಶೇಷ ಸಾಧನೆಯಾಗಿದೆ. ಕರ್ನಾಟಕ ಮೂಲದ ವಿಜಯಸೇನನೆಂಬ ದೊರೆ ಪಾಲರ ಆಡಳಿತವನ್ನು ಕೊನೆಗಾಣಿಸಿ ಸೇನವಂಶದ ಆಳ್ವಿಕೆಯನ್ನು ಆರಂಭಿಸಿದ.

ಪಾಲರು ಬೌದ್ಧಮತದ ಅನುಯಾಯಿಗಳು. ಹಿಂದೂ ಧರ್ಮಕ್ಕೆ ಪ್ರೋತ್ಸಾಹ ನೀಡಿದರು. ವಿದ್ಯಾಪ್ರಸಾರ ಕಾರ್ಯದಲ್ಲಿ ವಿಶೇಷ ಆಸಕ್ತಿ ತೋರಿಸಿದರು. ಉದ್ದಂಡಪುರ, ವಿಕ್ರಮಶಿಲ ವಿದ್ಯಾಕೇಂದ್ರಗಳು ಇವರ ಕಾಲದಲ್ಲಿ ಸ್ಥಾಪಿತವಾದವು.

- **ಚೌಹಾಣರು:** ಚೌಹಾಣರಲ್ಲಿ ಮೂರನೇ ಪೃಥ್ವೀರಾಜನು ಪ್ರಸಿದ್ಧ ಅರಸು. ದಿಲ್ಲಿ ಅವನ ರಾಜಧಾನಿ.

ಪೃಥ್ವೀರಾಜ ಚೌಹಾಣನು ಕನೌಜದ ರಾಜ ಜಯಚಂದ್ರನ ಮಗಳು ಸಂಯುಕ್ತೆಯನ್ನು ವರಿಸಿದ ಸ್ವಾರಸ್ಯಕರ ಘಟನೆ ಅನೇಕ ಗ್ರಂಥಗಳಲ್ಲಿ ವಿವರಿಸಲಾಗಿದೆ. ಸಂಯುಕ್ತೆ ಬಲು ಚೆಲುವೆ. ಜಯಚಂದ್ರ ಮತ್ತು ಅವನ ಬಂಧು ಪೃಥ್ವೀರಾಜನ ನಡುವೆ ವೈರಭಾವವಿತ್ತು. ಮಗಳ ಸ್ವಯಂವರಕ್ಕೆ ಜಯಚಂದ್ರ ಪೃಥ್ವೀರಾಜನನ್ನು ಆಹ್ವಾನಿಸಿರಲಿಲ್ಲ. ಆತನನ್ನು ಅವಮಾನಗೊಳಿಸಬೇಕೆಂದು ಆತನ ಪ್ರತಿಮೆಯನ್ನು ಮಾಡಿಸಿ ಕಾವಲುಗಾರನಂತೆ ಬಾಗಿಲಿನಲ್ಲಿ ಇರಿಸಿದ.

ಪೃಥ್ವೀರಾಜನಲ್ಲಿ ಅನುರಕ್ತಳಾಗಿದ್ದ ಸಂಯುಕ್ತೆ ಅಲ್ಲಿ ಸೇರಿದ್ದ ರಾಜಪುತ್ರರನ್ನು ಬಿಟ್ಟು, ಪೃಥ್ವೀರಾಜನ ಪ್ರತಿಮೆಗೆ ಹಾರ ಹಾಕಿದಳು. ಅಲ್ಲೇ ಹತ್ತಿರದಲ್ಲಿ ಅಡಗಿಕೊಂಡಿದ್ದ ಪೃಥ್ವೀರಾಜ ಸಂಯುಕ್ತೆಯನ್ನು ಒಡನೆಯೇ ಅಶ್ವದ ಮೇಲೆ ಎತ್ತಿಕೊಂಡು ಹೋಗಿ, ತನ್ನ ಅರಮನೆಯಲ್ಲಿ ಮದುವೆ ಮಾಡಿಕೊಂಡ. ಈ ಘಟನೆಯಿಂದ ಎರಡು ಮನೆತನಗಳೊಳಗೆ ಇದ್ದ ವೈರತ್ವ ಮೊದಲಿಗಿಂತ ಇನ್ನಷ್ಟು ಹೆಚ್ಚಿತು.

© KTBS NOT TO BE REPUBLISHED

ಪೃಥ್ವೀರಾಜನು ಮಹಮದ್ ಘೋರಿಯ ಆಕ್ರಮಣಗಳನ್ನು ವಿರೋಧಿಸಿದನು. ಅನೇಕ ರಜಪೂತ ಅರಸರನ್ನು ಒಗ್ಗೂಡಿಸಿದನು. ಆದರೆ ಕನೌಜದ ರಾಜನಾದ ಜಯಚಂದ್ರನು ಇವನೊಂದಿಗೆ ಸೇರಲಿಲ್ಲ. ಪೃಥ್ವೀರಾಜನು ಮಹಮದನನ್ನು ಕದನದಲ್ಲಿ ಸೋಲಿಸಿದನಾದರೂ ಆತನಿಗೆ ಕ್ಷಮಾದಾನ ಮಾಡಿದನು. ಮುಂದಿನ ವರ್ಷವೇ ಇವರೊಳಗೆ ನಡೆದ ಯುದ್ಧದಲ್ಲಿ ಪೃಥ್ವೀರಾಜನು ಪರಾಭವಗೊಂಡನು. ವಿಪತ್ತಿನ ಸಮಯದಲ್ಲಿ ಪೃಥ್ವೀರಾಜ ತಾನು ಕುದುರೆಯನ್ನೇರಿ ತಪ್ಪಿಸಿಕೊಳ್ಳಲು ಯತ್ನಿಸಿದ. ಆದರೆ ಶತ್ರು ಸೈನಿಕರಿಗೆ ಸೆರೆಸಿಕ್ಕಿದ. ಮಹಮದ್ ಘೋರಿ ಇವನನ್ನು ಕೊಲ್ಲಿಸಿದ. ದೆಹಲಿಯು ಮಹಮದ್ ಘೋರಿಯ ವಶವಾಯಿತು. ಇದು ದಿಲ್ಲಿ ಸುಲ್ತಾನರ ಆಳ್ವಿಕೆಗೆ ನಾಂದಿಯಾಯಿತು.

ಪೃಥ್ವೀರಾಜ ಶೌರ್ಯ ಮತ್ತು ಧೀರತನಕ್ಕೆ ಹೆಸರಾಗಿದ್ದನು. "ಪೃಥ್ವೀರಾಜರಾಸೋ" ಎಂಬ ಹಿಂದಿ ಮಹಾಕಾವ್ಯದಲ್ಲಿ ಚಾಂದ್ ಬರ್ದಾಯಿ ಎಂಬ ಕವಿ ಈತನ ಪರಾಕ್ರಮವನ್ನು ವರ್ಣಿಸಿದ್ದಾನೆ.

• **ಗುಹಿಲರು:** ರಜಪೂತರಲ್ಲಿ ಗುಹಿಲರು (ಗುಹಿಲೋಟರು) ವೀರಪರಂಪರೆಯ ವಂಶದವರು. ಈ ವಂಶದ ದೊರೆ ಖೊಮ್ಮಾಣನು ಅರಬ್ಬರ ದಾಳಿಯಿಂದ ತನ್ನ ರಾಜ್ಯವನ್ನು ರಕ್ಷಿಸಿ ಬಪ್ಪಾರಾವಲ್ ಎಂಬ ಬಿರುದನ್ನು ಧರಿಸಿದನು. ಈ ಮನೆತನದ ರಾಣಾ ಕುಂಭನು ದಿಲ್ಲಿ ಸುಲ್ತಾನರ ವಿರುದ್ಧ ಹೋರಾಡಿ ರಾಜ್ಯವನ್ನು ರಕ್ಷಿಸಿದ ಪರಾಕ್ರಮಿ. ರಾಜ್ಯದ ಭದ್ರತೆಗಾಗಿ 32 ಕೋಟೆಗಳನ್ನು ಕಟ್ಟಿಸಿದನು. ಚಿತ್ತೋಡಗಡದ ಪ್ರಖ್ಯಾತ ವಿಜಯಸ್ತಂಭವು ಈತನ ರಚನೆ.


*ವಿಜಯಸ್ತಂಭ, ಚಿತ್ತೋಡಗಡ*

ರಾಣಾ ಸಂಗ ಅಥವಾ ರಾಣಾ ಸಂಗ್ರಾಮ ಸಿಂಹನು ಗುಹಿಲ ವಂಶದ ಇನ್ನೊಬ್ಬ ಖ್ಯಾತ ದೊರೆ. ನೂರು ಕದನಗಳ ವೀರ. ಈತನ ದೇಹದಲ್ಲಿ ಯುದ್ಧದ ಎಂಬತ್ತು ಗಾಯಗಳ ಕಲೆಗಳಿದ್ದವು. ಇವನು ದೆಹಲಿಯ ಸುಲ್ತಾನರ ವಿರುದ್ಧ ಸತತ ಹೋರಾಡಿದನು.

## ಆರ್ಥಿಕ ಸ್ಥಿತಿ

• ಗುಪ್ತರ ಕಾಲದಿಂದಲೂ ಸರ್ಕಾರದಲ್ಲಿ ಸೇವೆ ಸಲ್ಲಿಸುವವರಿಗೆ ಜಮೀನನ್ನು ಉಂಬಳಿಯಾಗಿ ನೀಡಲಾಗಿತ್ತು. ಇದು ಜಮೀನ್ದಾರಿ ಪದ್ಧತಿಯಾಗಿ ಪರಿವರ್ತನೆಗೊಂಡಿತು. ಈ ಪದ್ಧತಿ ಸಾಮಾನ್ಯ ರೈತರಿಗೆ ಕಷ್ಟ ನೀಡಿತು.

• ಪಟ್ಟಣಗಳಲ್ಲಿ ವ್ಯಾಪಾರಿಗಳೂ ಕುಶಲಕರ್ಮಿಗಳೂ ನೆಲೆಸಿದ್ದು, ವೈಶ್ಯರು ವ್ಯಾಪಾರ, ಹಣಕಾಸು ಲೇವಾದೇವಿ ಮಾಡುತ್ತಿದ್ದರು.

• ವಿದೇಶಿ ವ್ಯಾಪಾರ ನಡೆಯುತ್ತಿತ್ತು. ಹೆಚ್ಚಾಗಿ ಅರಬ್ ವರ್ತಕರು ಭಾರತದೊಂದಿಗೆ ವ್ಯಾಪಾರ ಮಾಡುತ್ತಿದ್ದರು. ಸಾಂಬಾರ ಪದಾರ್ಥ, ಹತ್ತಿ ಮತ್ತು ರೇಷ್ಮೆ ವಸ್ತ್ರಗಳು, ಸುಗಂಧ ದ್ರವ್ಯಗಳು ಮತ್ತು ವಜ್ರಗಳು ಭಾರತದಿಂದ ರಫ್ತಾಗುತ್ತಿದ್ದವು. ಕುದುರೆಗಳನ್ನು ಮಧ್ಯ ಏಷ್ಯಾ, ಅರೇಬಿಯಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು.

• ರಜಪೂತರು ಕಂದಾಯದ ಆದಾಯದಲ್ಲಿ ಹೆಚ್ಚಿನ ಹಣವನ್ನು ಕೋಟೆ, ದೇವಾಲಯ ನಿರ್ಮಾಣಗಳಿಗಾಗಿ ವಿನಿಯೋಗಿಸುತ್ತಿದ್ದರು. ಇದರಿಂದ ಜನರಿಗೆ ಉದ್ಯೋಗ ಸಿಗುತ್ತಿತ್ತು.

## ಸಾಮಾಜಿಕ ಸ್ಥಿತಿ

• ರಜಪೂತರ ಕಾಲದಲ್ಲಿ ವೃತ್ತಿಗೆ ಅನುಗುಣವಾಗಿ ವಿವಿಧ ವರ್ಗಗಳಿದ್ದವು. • ಸಮಾಜದಲ್ಲಿ ಸ್ತ್ರೀಯರಿಗೆ ಗೌರವದ ಸ್ಥಾನವಿತ್ತು. ಸ್ತ್ರೀಯರು ಸಾಹಿತ್ಯ, ನೃತ್ಯ, ಸಂಗೀತ, ಚಿತ್ರಕಲೆ, ಕಸೂತಿಕಲೆಗಳಲ್ಲಿ ಪರಿಣಿತರಾಗಿದ್ದರು. • ರಜಪೂತರು ಪುಣ್ಯಕ್ಷೇತ್ರಗಳಲ್ಲಿ ಸ್ನಾನ ಮಾಡುವುದು ಪವಿತ್ರವೆಂದು ತಿಳಿದಿದ್ದರು. ಬ್ರಹ್ಮನ ಆವಾಸವೆನಿಸಿದ ಪುಷ್ಕರ (ಅಜ್ಮೀರ್ ಸಮೀಪ) ಗಣ್ಯ ಯಾತ್ರಾಸ್ಥಳವೆನಿಸಿತು. ಪ್ರತಿ ವರ್ಷ ಇಲ್ಲಿ ನಡೆಯುತ್ತಿದ್ದ ದೊಡ್ಡ ಜಾತ್ರೆಯು ಈಗಲೂ ಪ್ರಸಿದ್ಧವಾಗಿದೆ.

@KTBS
TO BE REPUBLISHED



*ಒಂಟೆ ಜಾತ್ರೆ, ಪುಷ್ಕರ*

# ಅಹೋಮ್ ರಾಜವಂಶ



ಅಹೋಮ್ ರಾಜ ಲಾಂಛನ

ಅಹೋಮ್ ರಾಜವಂಶವು ಭಾರತದ ಈಗಿನ ಅಸ್ಸಾಂ ಪ್ರದೇಶದಲ್ಲಿ ಸುಮಾರು 598 ವರ್ಷಗಳ ಕಾಲ (1228–1826) ಆಳ್ವಿಕೆ ನಡೆಸಿತ್ತು. ಈ ರಾಜಮನೆತನದ ಆಳ್ವಿಕೆ ಪ್ರಾರಂಭಿಸಿದವನು ಷಾನ್ ರಾಜಕುಮಾರ ಸುಕಾಪಾ. ಈತನ ವಂಶಜರು ಪಟ್‌ಕಾಯ್ ಬೆಟ್ಟಗಳನ್ನು ದಾಟಿ ಅಸ್ಸಾಂ ಭಾಗದಲ್ಲಿ ಬಂದು ನೆಲೆಸಿದರು. ರಾಜನನ್ನು ಆಸಾಮ್ ರಾಜ ಎಂತಲೂ ಪ್ರಜೆಗಳನ್ನು ಕವೋಫ ಎಂದೂ ಕರೆಯುತ್ತಿದ್ದರು. ರಾಜನನ್ನು ಪತ್ರಮಂತ್ರಿಗಳ (ಮಂತ್ರಿಮಂಡಲದಲ್ಲಿದ್ದ ವಿವಿಧ ಹುದ್ದೆಗಳು – ಬುರ್ಹಗೋಹೇನ್, ಬೋರ್ಗೋಹೇನ್, ಬೋರ್ಬರುವಾ, ಬೋರ್ಫುಕಾನ್ ಹಾಗೂ ಬೋರ್ಪಾಟ್ರೋಗೊಹೆನ್) ಒಪ್ಪಿಗೆಯಿಂದ ನೇಮಕ ಮಾಡುತ್ತಿದ್ದರು. ಮಂತ್ರಿಮಂಡಲವು ರಾಜನನ್ನು ತೆಗೆದುಹಾಕುವ ಅಧಿಕಾರವನ್ನೂ ಹೊಂದಿತ್ತು. 14ನೇ ಶತಮಾನದಲ್ಲಿ 3 ಸಂದರ್ಭಗಳಲ್ಲಿ ಸೂಕ್ತ ಅಭ್ಯರ್ಥಿಗಳಿಲ್ಲದ ಕಾರಣ ರಾಜ್ಯಕ್ಕೆ ರಾಜರು ಇರಲಿಲ್ಲ. ಆಗ ಮಂತ್ರಿಮಂಡಲವೇ ರಾಜ್ಯವನ್ನು ಮುನ್ನಡೆಸುವ ಹೊಣೆಗಾರಿಕೆಯನ್ನು ಹೊತ್ತಿತ್ತು.



ಸುಕಾಪಾ

ಅಹೋಮ್ ರಾಜರನ್ನು ದೈವದತ್ತರೆಂದು ಭಾವಿಸಲಾಗಿತ್ತು. ಅಹೋಮ್ ವಂಶದ ಸುಕಾಪಾ ರಾಜನು ಕುನ್ಲುಂಗ್ ವಂಶಕ್ಕೆ ಸೇರಿದವನು. ಸ್ವರ್ಗದ ರಾಜನಾದ ಲ್ಯುಂಗಡಾನ್‌ನ ಮೊಮ್ಮಗನಾದ ಈತನು ಮಾಂಗ್ರಿಮಾಂಗ್ರಾಮ್‌ನ್ನು ಆಳಲು ಭೂಮಿಗೆ ಬಂದನು. ಅವರನ್ನು ಇಂದ್ರವಂಶ ಕ್ಷತ್ರಿಯರೆಂದು ಕರೆಯಲಾಗಿತ್ತು. ಸುಹುಂಗಮುಂಗ್ (1497–1539) ಎಂಬ ಅಹೋಮ್ ರಾಜನಿಗೆ ಸ್ವರ್ಗನಾರಾಯಣ ಎಂಬ ಬಿರುದಿತ್ತು. ಈತನ ಆಳ್ವಿಕೆಯಲ್ಲಿ ಬರೆದ "ಬುರುಂಜಿ" ಮಹಾಕಾವ್ಯದಲ್ಲಿ, "ಶ್ರೀ ಸ್ವರ್ಗನಾರಾಯಣ ಮಹಾರಾಜೋರ್ ಜೋನ್ಮಕೊಥಾ" ಎಂಬ ಕಾವ್ಯಭಾಗದಲ್ಲಿ ಅಹೋಮ್ ರಾಜರು ಹಿಂದೂ ದೇವರ ವಂಶಸ್ಥರೆಂದು ಗುರುತಿಸಲಾಗಿದೆ.

ಸಿಂಹಾಸನ ಏರಿದ ನಂತರ ರಾಜನು ಅಹೋಮ್ ಹೆಸರನ್ನು ಪಡೆಯುತ್ತಿದ್ದನು. ಈ ಹೆಸರನ್ನು ಅಹೋಮ್ ಪುರೋಹಿತರು ನಿರ್ಧರಿಸುತ್ತಿದ್ದರು. ನಂತರದ ರಾಜರು ತಮ್ಮ ಹೆಸರಿನ ಮುಂದೆ ಸಿಂಘ (ಸಿಂಹ) ಎಂದು ಸೇರಿಸಿಕೊಳ್ಳುತ್ತಿದ್ದರು. ರಾಜ್ಯ, ರಾಜ, ಹಾಗೂ ರಾಜಧಾನಿಯನ್ನು ಕಾಪಾಡಲು ಭಿತರೂಲ್ ಫುಕನ್ ಎಂಬ ಸೈನ್ಯಪಡೆ ಯಾವಾಗಲೂ ಸಜ್ಜಾಗಿದ್ದಿತು.

© KTBS NOT TO BE REPUBLISHED

ಅಹೋಮ್ ಆಳ್ವಿಕೆಯ 600 ವರ್ಷಗಳ ಅವಧಿಯಲ್ಲಿ, ಮೂವರನ್ನು ಪ್ರಮುಖವಾಗಿ ಗುರುತಿಸಲಾಗಿದೆ. ಸುಕಾಪಾ – ಅಹೋಮ್ ರಾಜ್ಯಸ್ಥಾಪಕ. ಸುಹುಂಗ್ ಮುಂಗ್ – ರಾಜ್ಯ ವಿಸ್ತರಣೆ ಮಾಡಿದವನು ಹಾಗೂ ಸುಪಾತ್ಫಾ – ರಾಜ್ಯವನ್ನು ಉನ್ನತ ಸ್ಥಿತಿಗೆ ತಂದವನು. ಇವರಲ್ಲದೆ ಅಹೋಮ್ ಸಾಮ್ರಾಜ್ಯದ ಪ್ರಸಿದ್ಧ ಸೇನಾಪತಿಯಾಗಿದ್ದ ಲಸಿತ್ ಬೋರ್ಫುಕಾನ್, ಮಹಾಪರಾಕ್ರಮಿ ಎಂದು ಹೆಸರಾಗಿದ್ದಾನೆ.

**ಅಹೋಮ್ ರಾಣಿಯರು:** ಅಹೋಮ್ ರಾಜರಂತೆ, ಅವರ ರಾಣಿಯರೂ ಕೂಡ ರಾಜ್ಯಭಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಮಹಾರಾಣಿಗೆ ಬೋರ್ ಕುವರಿ, ಇತರ ರಾಣಿಯರಿಗೆ ಪಾರ್ವತಿಯಾ ಕುವರಿ, ರಾಜದಂಗಿಯ ಕುವರಿ, ತಮುಲಿ ಕುವರಿ ಎನ್ನುತ್ತಿದ್ದರು. ಸಾಮಾನ್ಯವಾಗಿ ರಾಣಿಯರು ಅಹೋಮ್ ಕುಲೀನ ಮನೆತನದವರಾಗಿರುತ್ತಿದ್ದರು. ರಾಜನ ಮರಣದ ನಂತರವೂ ರಾಣಿಯರು ರಾಜ್ಯಭಾರದ ಹೊಣೆ ತಾವೇ ಹೊರುತ್ತಿದ್ದರು. ನಾಣ್ಯಗಳ ಎರಡು ಮುಖಗಳಲ್ಲಿ ಕ್ರಮವಾಗಿ ರಾಜ ಹಾಗೂ ರಾಣಿಯರ ಹೆಸರನ್ನು ಮುದ್ರಿಸುತ್ತಿದ್ದರು.

**ಮೊಘಲರೊಂದಿಗೆ ಹಣಾಹಣಿ:** ಭಾರತದಲ್ಲಿ ಮೊಘಲರು ಪ್ರಬಲರಾಗಿದ್ದಾಗ, ಈಶಾನ್ಯ ಭಾಗದಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಲಾಗದಿದ್ದುದಕ್ಕೆ ಕಾರಣವೇ ಅಹೋಮ್ ರಾಜಮನೆತನ. ಈ ಪ್ರದೇಶವು ಅತ್ಯಂತ ಫಲವತ್ತಾಗಿದ್ದುದರಿಂದ ಮೊಘಲರಿಗೆ ಈಶಾನ್ಯಭಾಗವನ್ನು ವಶಪಡಿಸಿಕೊಳ್ಳಬೇಕೆಂಬ ಮಹದಾಸೆ ಇತ್ತು. ಆ ಕಾಲದಲ್ಲಿ ಕೆಳ ಅಸ್ಸಾಂನ್ನು ಆಳುತ್ತಿದ್ದವರು ಅಹೋಮ್‌ನ ಐದು ಮಂತ್ರಿಗಳಲ್ಲಿ ಒಬ್ಬನಾದ ಲಸಿತ್ ಬೊರ್ಫುಕಾನ್. ಮೊಘಲರು 1615ರಿಂದ 1682ರವರೆಗೆ 17 ಬಾರಿ ಅಹೋಮ್ ರಾಜ್ಯದ ಮೇಲೆ ದಾಳಿ ಮಾಡಿದರು. ಗುವಾಹಟಿಯನ್ನು (ಪ್ರಾಗ್ಜ್ಯೋತಿಷಪುರ) ವಶಪಡಿಸಿಕೊಂಡರು. ರಾಜ ಚಕ್ರಧ್ವಜ ಸಿಂಘನು ಲಸಿತ್ ಬೋರ್ಫುಕಾನ್‌ನ ನಾಯಕತ್ವದಲ್ಲಿ ಮೊಘಲರ ಮೇಲೆ ಆಕ್ರಮಣ ಮಾಡಿ ಸೋಲಿಸಿ, ಗುವಾಹಟಿಯನ್ನು ಮರಳಿ ತನ್ನ ತೆಕ್ಕೆಗೆ ಸೇರಿಸಿಕೊಂಡನು. ಮೊಘಲರು ಪುನಃ ದಾಳಿಮಾಡಿದಾಗ, ಲಸಿತ್ ಬೋರ್ಫುಕಾನ್ ನದಿನೌಕಾದಳವನ್ನು ಸುಸಜ್ಜಿತಗೊಳಿಸಿ 70,000 ಸೈನಿಕರನ್ನು ಹೊಂದಿದ್ದ ಮೊಘಲರನ್ನು ಎದುರಿಸಿ ಸೋಲಿಸಿದನು. ಮೊಘಲರಿಗೆ ಅಹೋಮ್ ಸಾಮ್ರಾಜ್ಯವನ್ನು ಪೂರ್ಣವಾಗಿ ಎಂದೂ ವಶಮಾಡಿಕೊಳ್ಳಲು ಸಾಧ್ಯವಾಗಲಿಲ್ಲ.

**ಅಹೋಮರ ನೌಕಾಬಲ:** ಅಹೋಮ್‌ರು ಯುದ್ಧದಲ್ಲಿ ತಮ್ಮ ನೌಕಾಸೈನ್ಯವನ್ನು ಬ್ರಹ್ಮಪುತ್ರ ನದಿಯ ಪಶ್ಚಿಮ ದಿಕ್ಕಿನಲ್ಲಿ ಇಟ್ಟು ಶತ್ರುಗಳನ್ನು ಹಿಮ್ಮೆಟಿಸುತ್ತಿದ್ದರು. ನದಿ ನೌಕಾಯುದ್ಧದಲ್ಲಿ ಅವರು ಅಪ್ರತಿಮರಾಗಿದ್ದರು. ಯುದ್ಧನೌಕೆ ಕಟ್ಟುವುದರಲ್ಲಿ ನಿಸ್ಸೀಮರಾಗಿದ್ದರು. ಗೆರಿಲ್ಲಾ ಯುದ್ಧತಂತ್ರಗಳು ಅವರಿಗೆ ತಿಳಿದಿತ್ತು. ಆದುದರಿಂದ ಮುಸಲ್ಮಾನ ರಾಜರು ಇವರನ್ನು ಸುಲಭವಾಗಿ ಗೆಲ್ಲಲು ಸಾಧ್ಯವಾಗಲಿಲ್ಲ.

© KTBS NOT TO BE REPUBLISHED

## ಕಾಲಗಣನೆ (ಕ್ರಿ.ಶ.)

| | | |
|---|---|---|
| ಕಾರ್ಕೋಟ ರಾಜವಂಶ | – | 625 – 855 |
| ರಜಪೂತರ ಕಾಲ | – | 650–1200 |
| ಅಹೋಮ್ ರಾಜವಂಶ | – | 1228 – 1826 |

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ಕಾರ್ಕೋಟ ರಾಜವಂಶದ ಪ್ರಭಾವಿ ದೊರೆ ಯಾರು?
2 ರಜಪೂತರ ಗುಣಧರ್ಮಗಳು ಯಾವುವು?
3 ರಜಪೂತರ ಮೂರು ಪ್ರಸಿದ್ಧ ವಾಸ್ತುಶಿಲ್ಪಗಳನ್ನು ಹೆಸರಿಸಿ. ಅವು ಎಲ್ಲಿವೆ?
4 'ಪೃಥ್ವೀರಾಜರಾಸೋ' ಮತ್ತು 'ಗೀತಗೋವಿಂದ' ಬರೆದ ಕವಿಗಳು ಯಾರು?
5 ಪೃಥ್ವೀರಾಜ ಚೌಹಾಣ್ ಕುರಿತು ಟಿಪ್ಪಣಿ ಬರೆಯಿರಿ.
6 ಬಪ್ಪಾರಾವಲ್ ಎಂದರೆ ಯಾರು?
7 ರಾಣಾ ಸಂಗ್ರಾಮಸಿಂಹನ ಬಗ್ಗೆ ಟಿಪ್ಪಣಿ ಬರೆಯಿರಿ.
8 ರಜಪೂತರ ಕಾಲದ ಸಾಮಾಜಿಕ ಸ್ಥಿತಿಯನ್ನು ಕುರಿತು ಟಿಪ್ಪಣಿ ಬರೆಯಿರಿ.
9 ಅಹೋಮ್ ರಾಜವಂಶದ ಪ್ರಖ್ಯಾತ ದೊರೆ ಯಾರು?

### ಚಟುವಟಿಕೆಗಳು

1 ರಜಪೂತರಿಂದ ನಿರ್ಮಾಣಗೊಂಡ ದೇವಾಲಯ, ಅರಮನೆ ಮತ್ತು ಕೋಟೆಗಳ ಭಾವಚಿತ್ರವನ್ನು ವಿವರಣೆಯೊಂದಿಗೆ ಸಂಗ್ರಹಿಸಿ.
2 ರಜಪೂತರ ಕಾಲದ ಪ್ರಸಿದ್ಧ ವಾಸ್ತುಶಿಲ್ಪ ಕೇಂದ್ರಗಳನ್ನು ಭೂಪಟದಲ್ಲಿ ಗುರುತಿಸಿ.
3 ಪ್ರಾಚೀನ ಕಾಶ್ಮೀರದ ಕವಿಗಳು, ವಿದ್ವಾಂಸರು ಮತ್ತು ಅವರ ಕೃತಿಗಳನ್ನು ಪಟ್ಟಿ ಮಾಡಿ.
4 ಲಸಿತ್ ಬೋರ್ಫುಕಾನ್‌ನ ಜೀವನ ಚರಿತ್ರೆಯನ್ನು ಓದಿರಿ.

NOT TO BE REPUBLISHED @KTBS

# ಅಧ್ಯಾಯ 13 ದೆಹಲಿಯ ಸುಲ್ತಾನರು

J4H6G9

**ಪಾಠದ ಪರಿಚಯ**

11–12ನೇ ಶತಮಾನಗಳಲ್ಲಿ ಭಾರತದ ಮೇಲೆ ಟರ್ಕರು ಪದೇ ಪದೇ ಎಸಗುತ್ತಿದ್ದ ಸೈನಿಕ ಆಕ್ರಮಣಗಳು ಅಂತಿಮವಾಗಿ ದೆಹಲಿಯ ಸುಲ್ತಾನರ ಆಳ್ವಿಕೆಗೆ (1206–1526) ನಿಮಿತ್ತವಾದುವು. ಈ ಪಾಠದಲ್ಲಿ ದೆಹಲಿಯ ಸುಲ್ತಾನರ ಧೋರಣೆ, ಆಡಳಿತ, ಅವರ ಕಾಲದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಮತ್ತು ವಾಸ್ತುಶಿಲ್ಪ, ಸಾಹಿತ್ಯಗಳಿಗೆ ಅವರು ನೀಡಿದ ಕೊಡುಗೆಯನ್ನು ನಿರೂಪಿಸಲಾಗಿದೆ.

**ಸಾಮರ್ಥ್ಯಗಳು**

1 11–12ನೇ ಶತಮಾನಗಳಲ್ಲಾದ ಐತಿಹಾಸಿಕ ಬೆಳವಣಿಗೆಗಳು ಅಂತಿಮವಾಗಿ ದೆಹಲಿಯ ಸುಲ್ತಾನರ ಆಳ್ವಿಕೆಯ ಸ್ಥಾಪನೆಗೆ ಹೇಗೆ ದಾರಿಮಾಡಿಕೊಟ್ಟವು ಎಂಬುದನ್ನು ಅರ್ಥೈಸಿಕೊಳ್ಳುವುದು.

2 ಸುಲ್ತಾನರ ಧೋರಣೆಗಳು ಹಾಗೂ ಆಡಳಿತ ವೈಖರಿ ಇವು ಭಾರತೀಯ ಸಮಾಜ, ಆರ್ಥಿಕತೆ ಮತ್ತು ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವವನ್ನು ತಿಳಿದುಕೊಳ್ಳುವುದು.

3 ದೆಹಲಿಯ ಸುಲ್ತಾನರ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.

© KTBS NOT TO BE REPUBLISHED

ನಮ್ಮ ದೇಶದ ಮೇಲೆ ಎಂಟನೆಯ ಶತಮಾನದಿಂದ ಮೊದಲುಗೊಂಡು ಮೇಲಿಂದ ಮೇಲೆ ವಿದೇಶಿ ಆಕ್ರಮಣಗಳು ನಡೆದವು. ಆಕ್ರಮಣಕಾರರು ವಾಯವ್ಯ ಸರಹದ್ದಿನಿಂದ ಬಂದವರಾಗಿದ್ದರು. ಸಂಪತ್ತಿನ ಲೂಟಿ, ರಾಜ್ಯ ವಿಸ್ತರಣೆ ಮತ್ತು ಇಸ್ಲಾಂ ಮತ ಪ್ರಸಾರ ಇವು ದಾಳಿಗಳ ಉದ್ದೇಶವಾಗಿದ್ದುವು.

• **ಅರಬ್ಬರ ದಾಳಿ:** ಭಾರತದ ಮೇಲೆ ದಾಳಿ ಮಾಡಿದ ಮೊದಲಿಗರೆಂದರೆ ಅರಬ್ಬರು. ಅರಬ್ಬರ ದಂಡು ಕ್ರಿ.ಶ. 712ರಲ್ಲಿ ಸಿಂಧ್ ಮತ್ತು ಮುಲ್ತಾನ್ ಪ್ರಾಂತಗಳನ್ನು ವಶಪಡಿಸಿಕೊಂಡಿತು. ಇದರೊಂದಿಗೆ ಈ ಪ್ರದೇಶದಲ್ಲಿ ಇಸ್ಲಾಂ ನೆಲೆಯೂರಿತು. ಆದರೆ ಕಾಶ್ಮೀರದ ಕಾರ್ಕೋಟ ವಂಶದ ಪ್ರತಿರೋಧವನ್ನು ತಡೆಯಲಾರದೆ ಅರಬ್ಬರ ಆಟಾಟೋಪ ತಣ್ಣಗಾಯಿತು.

• **ಟರ್ಕರ ದಾಳಿ:** ಇದಾದ ಸುಮಾರು ಮೂರು ಶತಮಾನಗಳ ಅನಂತರ ಟರ್ಕಿ ಮೂಲದ ಮಹಮದ್ ಘಜನಿ ಭಾರತದ ಮೇಲೆ ದಾಳಿ ನಡೆಸಿದನು. ಅಫ್‌ಘಾನಿಸ್ತಾನದ ಘಜನಿ ಎಂಬ ಚಿಕ್ಕ ರಾಜ್ಯದ ಸುಲ್ತಾನನಾಗಿದ್ದ ಇವನು ಹದಿನೇಳು ಬಾರಿ ದಾಳಿ ನಡೆಸಿದನು. ಇದರ ಪರಿಣಾಮವಾಗಿ ಭಾರತದ ಹಲವಾರು ಸಂಪದ್ಭರಿತ ನಗರಗಳು ಸೂರೆಗೊಂಡವು. ಧಾರ್ಮಿಕ ಕೇಂದ್ರಗಳು ನಾಶವಾದವು. ಅವುಗಳಲ್ಲಿ ಮಥುರೆಯ ಪ್ರಸಿದ್ಧ ಶ್ರೀಕೃಷ್ಣ ಮಂದಿರ ಹಾಗೂ ಗುಜರಾತಿನ ಸಂಪದ್ಭರಿತ ಸೋಮನಾಥ ಮಂದಿರಗಳು ಸೇರಿದ್ದವು.

**ಚಟುವಟಿಕೆ:** ಪ್ರಾರಂಭದ ಹಂತದಲ್ಲಿ ಭಾರತದ ಮೇಲೆ ದಾಳಿ ಮಾಡಿದ ಪರಕೀಯರ ಗುರಿ ಏನಿದ್ದಿತು? ಅದರಿಂದ ಭಾರತದ ಮೇಲೆ ಆದ ಪರಿಣಾಮಗಳೇನು? ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.



*ಘಜನಿ ಮಹಮದ್*



*ಘೋರಿ ಮಹಮದ್*

ದೇಶ ಸ್ವತಂತ್ರಗೊಂಡ ಅನಂತರ ಭಗ್ನಗೊಂಡ ಸೋಮನಾಥ ದೇವಾಲಯವನ್ನು ಭವ್ಯವಾಗಿ ಪುನರ್‌ನಿರ್ಮಾಣ ಮಾಡಲಾಯಿತು (1951). ಇದನ್ನು ಭಾರತದ ಪ್ರಥಮ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು.

@KTBS NOT TO BE REPUBLISHED



*ಸೋಮನಾಥ ಮಂದಿರ, ಗುಜರಾತ್*

• **ಮಹಮದ್ ಘೋರಿ:** ಹನ್ನೆರಡನೆಯ ಶತಮಾನದ ಕೊನೆಯ ಭಾಗದಲ್ಲಿ ಅಫ್‌ಘಾನಿಸ್ತಾನದ ಮಹಮದ್ ಘೋರಿ ಭಾರತದ ಮೇಲೆ ದಾಳಿ ನಡೆಸಿ ಸಿಂಧ್ ಮತ್ತು ಪಂಜಾಬ್ ಪ್ರಾಂತಗಳನ್ನು ವಶಪಡಿಸಿಕೊಂಡನು. ದಾಳಿ ಮುಂದುವರಿಯುತ್ತಿದ್ದಂತೆ ದೆಹಲಿಯ ರಾಜ ಪೃಥ್ವೀರಾಜ್ ಚೌಹಾಣ ಮಹಮದನನ್ನು ಯುದ್ಧದಲ್ಲಿ ಹೀನಾಯವಾಗಿ ಸೋಲಿಸಿದನು. ಆದರೆ ಪೃಥ್ವೀರಾಜ್ ಅವನಿಗೆ ಮರಣದಂಡನೆ ನೀಡಲಿಲ್ಲ. ಮರುವರ್ಷವೇ ಇವರೊಳಗೆ ಮತ್ತೊಮ್ಮೆ ಕದನ ನಡೆದು ಪೃಥ್ವೀರಾಜ್ ಪರಾಭವಗೊಂಡನು. ಅವನನ್ನು ಮಹಮದ್ ಘೋರಿ ಕೊಲ್ಲಿಸಿದನು. ದಿಲ್ಲಿ ಮಹಮದ್‌ನ ವಶವಾಯಿತು. ಮಹಮದ್ ಗೆದ್ದುಕೊಂಡ ಪ್ರದೇಶಗಳನ್ನು ತನ್ನ ಸೇನಾನಿ ಕುತ್ಬುದ್ದೀನ್ ಐಬಕ್ ಎಂಬವನಿಗೆ ಹಸ್ತಾಂತರಿಸಿದನು. ಇಲ್ಲಿಂದ ಕುತ್ಬುದ್ದೀನ್ ದೆಹಲಿಯ ಸುಲ್ತಾನನಾಗಿ ಆಳ್ವಿಕೆ ಪ್ರಾರಂಭಿಸಿದ.

## ಗುಲಾಮಿ ಸಂತತಿ

**ಕುತ್ಬುದ್ದೀನ್ ಐಬಕ್:** ಕುತ್ಬುದ್ದೀನ್ ಪ್ರಾರಂಭದಲ್ಲಿ ಗುಲಾಮನಾಗಿದ್ದ. ಈ ಕಾರಣದಿಂದಾಗಿ ಇವನದು 'ಗುಲಾಮಿ' ಸಂತತಿ ಎಂದಾಯಿತು. ಇವನು ಶತ್ರುಗಳನ್ನು ಗೆದ್ದು, ಟರ್ಕರ ಆಳ್ವಿಕೆಯನ್ನು ಭದ್ರಗೊಳಿಸಿದನು. ತನ್ನ ವಿಜಯದ ದ್ಯೋತಕವಾಗಿ ದೆಹಲಿಯ ಸಮೀಪದ ಮೆಹರೌಲಿ ಎಂಬಲ್ಲಿ ಕುತುಬ್ ಮಿನಾರಿನ ನಿರ್ಮಾಣಕಾರ್ಯ ಆರಂಭಿಸಿದನು. ಇಲ್ತುಮಿಶ್‌ನ ಕಾಲದಲ್ಲಿ ಇದು ಪೂರ್ಣಗೊಂಡಿತು.

@KTBS
NOT TO BE REPUBLISHED



ಕುತ್ಬುದ್ದೀನ್ ಐಬಕ್



ಸುಲ್ತಾನಾ ರಜಿಯಾ

ದೆಹಲಿಯ ಸುಲ್ತಾನರ ಕಾಲದಲ್ಲಿ ಅಧಿಕಾರ ಸೂತ್ರವನ್ನು ಹಿಡಿದ ಏಕೈಕ ಮಹಿಳೆಯೆಂದರೆ ಸುಲ್ತಾನಾ ರಜಿಯಾ. ಈ ಧೀರೆಯು ಆಸ್ಥಾನದಲ್ಲಿ ನ್ಯಾಯ ನೀಡುತ್ತಿದ್ದಳು. ಗಂಡುಡುಗೆ ತೊಟ್ಟು ರಣರಂಗಕ್ಕೆ ಧುಮುಕುತ್ತಿದ್ದಳು. ಆಸ್ಥಾನದ ಸರದಾರರು ಮಹಿಳೆಯೋರ್ವಳ ಆಳ್ವಿಕೆಯನ್ನು ಸಹಿಸದೆ ಅವಳನ್ನು ವಧೆ ಮಾಡಿದರು.



ಕುತುಬ್ ಮಿನಾರ್, ದಿಲ್ಲಿ

## ಖಲ್ಜಿ ವಂಶ

ಗುಲಾಮಿ ಸಂತತಿಯ ಅನಂತರ ಖಲ್ಜಿ ವಂಶ ಅಧಿಕಾರಕ್ಕೇರಿತು. ಖಲ್ಜಿಗಳಲ್ಲಿ ಅಲ್ಲಾವುದ್ದೀನ್ ದೆಹಲಿಯ ಸುಲ್ತಾನರಲ್ಲೇ ಬಲಶಾಲಿಯಾಗಿದ್ದನು. ಈತನದು ಸೈನಿಕ ಆಡಳಿತವಾಗಿತ್ತು.



ಅಲ್ಲಾವುದ್ದೀನ್ ಖಲ್ಜಿ

**ಧೋರಣೆಗಳು:** ಅಲ್ಲಾವುದ್ದೀನನು ಆಡಳಿತ, ಸೈನ್ಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತಂದನು. ಅಗತ್ಯವಸ್ತುಗಳ ಮಾರಾಟದ ಮೇಲೆ ಹತೋಟಿಯನ್ನಿಟ್ಟುಕೊಂಡನು. ಮಾದಕ ಪದಾರ್ಥ ಸೇವನೆ, ಜೂಜಾಟ ನಿಷೇಧ ಮಾಡಿದ. ತಪ್ಪಿತಸ್ಥರೆಂದು ಕಂಡವರನ್ನು ಕ್ರೂರವಾಗಿ ದಂಡಿಸಿದ.

**ದಂಡ ಯಾತ್ರೆಗಳು:** ಭಾರತ ದೇಶವನ್ನು ಪೂರ್ಣವಾಗಿ ಗೆದ್ದುಕೊಳ್ಳಬೇಕೆಂಬುದು ಅಲ್ಲಾವುದ್ದೀನನ ಆಕಾಂಕ್ಷೆಯಾಗಿತ್ತು. ಪ್ರಾರಂಭದಲ್ಲಿ ತನ್ನ ಸೈನಿಕ ಶಕ್ತಿಯಿಂದ ಉತ್ತರ ಭಾರತವನ್ನು ಗೆದ್ದುಕೊಂಡನು. ದಕ್ಷಿಣ ಭಾರತವನ್ನು ವಶಪಡಿಸಿಕೊಳ್ಳಲು ತನ್ನ ಆಪ್ತ ಗುಲಾಮನಾದ ಮಲ್ಲಿಕ್ ಕಾಫರ್ ಎಂಬ ಸೇನಾನಿಯನ್ನು ಭಾರಿ ಸೇನಾಪಡೆಯೊಂದಿಗೆ ಕಳುಹಿಸಿದನು. ಕಾಫರ್ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ರಾಜಧಾನಿಗಳನ್ನು ಕೊಳ್ಳೆಹೊಡೆದನು.

© KTBS NOT TO BE REPUBLISHED

ಕಾಫರ್ ಆಕ್ರಮಣ ಮಾಡಿದ ರಾಜ್ಯಗಳೆಂದರೆ: ಮಹಾರಾಷ್ಟ್ರದ ಯಾದವ (ರಾಜಧಾನಿ ದೇವಗಿರಿ), ಆಂಧ್ರದ ಕಾಕತೀಯ (ವಾರಂಗಲ್ಲು), ಹೊಯ್ಸಳ (ದೋರಸಮುದ್ರ) ಮತ್ತು ತಮಿಳುನಾಡಿನ ಪಾಂಡ್ಯ (ಮಧುರೆ).

ತದನಂತರ ಕಾಫರನು ದಂಡಯಾತ್ರೆಯನ್ನು ರಾಮೇಶ್ವರದವರೆಗೆ ಮುಂದುವರಿಸಿದನು. ಅಲ್ಲಿ ಅನೇಕ ದೇವಾಲಯಗಳನ್ನು ಲೂಟಿಮಾಡಿದನು. ಧನಕನಕಾದಿಗಳು ಭಾರಿ ಪ್ರಮಾಣದಲ್ಲಿ ಸೂರೆಗೊಂಡವು. ದಕ್ಷಿಣ ಭಾರತದಿಂದ ದಿಲ್ಲಿಗೆ ಇಷ್ಟೊಂದು ಪ್ರಮಾಣದಲ್ಲಿ ಸಂಪತ್ತಿನ ಹೊಳೆ ಹಿಂದೆಂದೂ ಹರಿದುಹೋಗಿರಲಿಲ್ಲ.

ಅಲ್ಲಾವುದ್ದೀನನು ಅಮೀರ್ ಖುಸ್ರು, ಅಮೀರ್ ಹಸನ್ ಮುಂತಾದ ಪರ್ಷಿಯನ್ ಕವಿಗಳನ್ನು ಪ್ರೋತ್ಸಾಹಿಸಿದ. ದೆಹಲಿಯಲ್ಲಿ ಸಿರಿ ಎಂಬ ಕೋಟೆಯನ್ನು ಕಟ್ಟಿಸಿದನು. ಅಲೈ ದರ್ವಾಜಾ ಇವನ ಭವ್ಯ ರಚನೆ.



*ಅಲೈ ದರ್ವಾಜಾ, ದಿಲ್ಲಿ*

ಅಲ್ಲಾವುದ್ದೀನನ ಅಂತ್ಯಕಾಲ ದುಃಖಮಯವಾಗಿತ್ತು. ಅರಮನೆಯಲ್ಲಿ ದಂಗೆಗಳಾದವು. ಕೊನೆಗೆ ಮಲ್ಲಿಕ್ ಕಾಫರ್ ಅಧಿಕಾರದಾಹದಿಂದ ಅಲ್ಲಾವುದ್ದೀನನನ್ನು ಕೊಲೆಮಾಡಿ ಪಟ್ಟವೇರಿದ. ಆದರೆ ಆತನನ್ನೂ ಕೊಲ್ಲಲಾಯಿತು. ಅಲ್ಪಕಾಲದಲ್ಲೇ ಖಿಲ್ಜಿ ಸುಲ್ತಾನರ ಆಳ್ವಿಕೆ ಕೊನೆಗೊಂಡು ತುಘಲಕರು ಅಧಿಕಾರಕ್ಕೆ ಬಂದರು.

© KTBS Not to be republished

## ತುಘಲಖರು

ತುಘಲಕ್ ಸುಲ್ತಾನರಲ್ಲಿ ಮಹಮದ್ ಬಿನ್ ತುಘಲಕ್ ಪ್ರಮುಖನು. ಇವನು ವಿದ್ವಾಂಸನಾಗಿದ್ದನು. ಆದರೆ ಆತುರ, ಸಿಟ್ಟು ಜಾಸ್ತಿ, ವ್ಯವಹಾರ ಕೌಶಲ ಕಡಿಮೆ ಮತ್ತು ವಿಚಿತ್ರ ಗುಣಸ್ವಭಾವದವನು.



*ಮಹಮದ್ ಬಿನ್ ತುಘಲಖ್*

**ಆಡಳಿತ ಪ್ರಯೋಗಗಳು:** ಆಡಳಿತ ಸುಧಾರಣೆಗಾಗಿ ಮಹಮದನು ಹಲವು ಪ್ರಯೋಗಗಳನ್ನು ನಡೆಸಿದನು. ಅವುಗಳಲ್ಲಿ ಮುಖ್ಯವಾದುದು ರಾಜಧಾನಿಯ ವರ್ಗಾವಣೆ. ದೆಹಲಿಯ ಬದಲು ಭಾರತದ ಮಧ್ಯಭಾಗದಲ್ಲಿರುವ ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿದರೆ ಅದು ಸಾಮ್ರಾಜ್ಯದ ಕೇಂದ್ರದಲ್ಲಿ ಇದ್ದಂತಾಗುತ್ತದೆ ಎಂಬುದು ಮಹಮದನ ನಂಬಿಕೆಯಾಗಿತ್ತು. ಅಲ್ಲದೆ ರಾಜಧಾನಿಯನ್ನು ದಕ್ಷಿಣಕ್ಕೆ ಸ್ಥಳಾಂತರಿಸಿದರೆ ಮುಂದೆ ದಕ್ಷಿಣದ ರಾಜ್ಯಗಳಿಗೆ ದಾಳಿ ನಡೆಸುವುದು ಸುಲಭವಾಗುತ್ತದೆಂಬ ಲೆಕ್ಕಾಚಾರವೂ ಅವನದಾಗಿತ್ತು. ದಿಲ್ಲಿಯಿಂದ 700 ಮೈಲು ದೂರದಲ್ಲಿದ್ದ ದೇವಗಿರಿಗೆ ದೌಲತಾಬಾದ್ ಎಂದು ಹೆಸರಿಟ್ಟು, ದೆಹಲಿಯ ಜನ ಅಲ್ಲಿಗೆ ಹೋಗಬೇಕೆಂದು ಕಟ್ಟಾಜ್ಞೆ ಹೊರಡಿಸಿದನು. ಆದರೆ ವಲಸೆ ಹೊರಟ ಜನ ಅನುಭವಿಸಿದ ಕಷ್ಟ ಹೇಳತೀರದು. ಎಷ್ಟೋ ಜನ ದಾರಿಯಲ್ಲೇ ಮಡಿದರು. ತಾನು ಮಾಡಿದ್ದು ಪ್ರಮಾದವಾಯಿತೆಂದು ಮನಗಂಡ ಅವನು ಜನರು ಮತ್ತೆ ದಿಲ್ಲಿಗೆ ಹಿಂದಿರುಗುವಂತೆ ಅಪ್ಪಣೆ ಮಾಡಿದ. ಬದುಕಿ ಉಳಿದು ದಿಲ್ಲಿಗೆ ಮರಳಿದವರು ಕೆಲವೇ ಜನ.

ಮಹಮದನ ಇನ್ನೊಂದು ಆಡಳಿತ ಪ್ರಯೋಗವೆಂದರೆ ಬೆಳ್ಳಿಯ ನಾಣ್ಯಗಳ ಬದಲು ಅಷ್ಟೇ ಮುಖಮೌಲ್ಯವುಳ್ಳ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದುದು. ಆದರೆ ತಾಮ್ರದ ನಾಣ್ಯಗಳನ್ನು ಟಂಕಿಸುವ ಅಧಿಕಾರ ಸರ್ಕಾರಕ್ಕೆ ಮಾತ್ರವೇ ಸೇರಿದ್ದು ಎಂಬ ರಾಜಾಜ್ಞೆಯನ್ನು ಅವನು ಹೊರಡಿಸಲಿಲ್ಲ. ಪರಿಣಾಮವಾಗಿ ಸಿಕ್ಕಸಿಕ್ಕವರೆಲ್ಲ ತಾಮ್ರದ ನಾಣ್ಯಗಳನ್ನು ತಯಾರಿಸಿದರು. ಅವಕ್ಕೆ ವಿನಿಮಯ ರೂಪದಲ್ಲಿ ಬೆಳ್ಳಿ ಲೋಹಗಳನ್ನು ಕೊಡುವುದು ಸರಕಾರಕ್ಕೆ ಸಾಧ್ಯವಾಗಲಿಲ್ಲ. ಮಹಮದನು ತಪ್ಪನ್ನರಿತು ಮತ್ತೆ ಹಿಂದಿನ ನಾಣ್ಯಗಳನ್ನೇ ಚಲಾಯಿಸಬೇಕೆಂದು ಆಜ್ಞಾಪಿಸಿದ. ಒಟ್ಟಿನಲ್ಲಿ ಈ ಪ್ರಯೋಗದಿಂದ ರಾಜ್ಯದ ಆರ್ಥಿಕ ಸ್ಥಿತಿ ಕೆಟ್ಟುಹೋಯಿತು.

ಮಹಮದನ ಆಡಳಿತದಿಂದ ಅತೃಪ್ತರಾದ ಪ್ರಜೆಗಳು ದಂಗೆ ಎದ್ದರು. ಸಿಂಧ್ ಪ್ರದೇಶದಲ್ಲಿ ದಂಗೆಕೋರರನ್ನು ದಮನ ಮಾಡುತ್ತಿದ್ದಾಗ, ಜ್ವರ ಬಂದು, ಮಹಮದ್ ತೀರಿಕೊಂಡ.

> ಗುಲಾಮಿ ಸಂತತಿ, ಖಿಲ್ಜಿ ಮತ್ತು ತುಘಲಕರ ಅನಂತರ ಸಯ್ಯದ್ ಮತ್ತು ಲೋದಿಗಳು ಅಲ್ಪಕಾಲ ದಿಲ್ಲಿಯಿಂದ ಆಳ್ವಿಕೆ ನಡೆಸಿದರು. ಲೋದಿ ಸುಲ್ತಾನ್ ಇಬ್ರಾಹಿಮನನ್ನು ಮೊಗಲ ದೊರೆ ಬಾಬರ್ ಪಾಣಿಪತ್ ಕದನದಲ್ಲಿ ಸೋಲಿಸಿ, ಮೊಗಲ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದನು.

©KTBS NOT TO BE REPUBLISHED

# ದಿಲ್ಲಿ ಸುಲ್ತಾನರ ಕಾಲದ ಸ್ಥಿತಿಗತಿ

**ಆಡಳಿತ:** ದಿಲ್ಲಿ ಸುಲ್ತಾನರ ರಾಜ್ಯದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿದ್ದರೂ ಆಡಳಿತವು ಟರ್ಕ್ ನೆಲೆಯಲ್ಲಿ ನಡೆಯುತ್ತಿತ್ತು. ಮಿಲಿಟರಿ ಶಕ್ತಿಯು ರಾಜ್ಯದ ಬೆನ್ನೆಲುಬಾಗಿತ್ತು. ಸುಲ್ತಾನರು ನಿರಂಕುಶ ಪ್ರಭುಗಳಾಗಿದ್ದರು. ಬಲ್ಬನ್ ಎಂಬ ಸುಲ್ತಾನನು ತಾನು ಅಲ್ಲಾನ ಪ್ರತಿನಿಧಿ, ಅಲ್ಲಾನಿಗಲ್ಲದೆ ಇನ್ನಾರಿಗೂ ಹೊಣೆಗಾರನಲ್ಲ ಎಂಬುದಾಗಿ ಸಾರಿದ್ದನು. ದೆಹಲಿಯ ಸುಲ್ತಾನರು ಸ್ಥಳೀಯ ರಾಜರ ಪ್ರಬಲ ಪ್ರತಿರೋಧವನ್ನು ಸತತ ಎದುರಿಸಬೇಕಾಗಿತ್ತು. ಅಧಿಕಾರವನ್ನು ಕಳೆದುಕೊಳ್ಳುವ ಭೀತಿ ಸುಲ್ತಾನರನ್ನು ಕಾಡುತ್ತಿತ್ತು.

**ಆರ್ಥಿಕತೆ:** ರೈತರ ಮೇಲಿನ ಭೂಕಂದಾಯದ ಹೊರೆ ವಿಪರೀತವಾಗಿತ್ತು. ಮಹಮದ್ ಬಿನ್ ತುಘಲಖನು ಕಂದಾಯವನ್ನು ಇನ್ನಷ್ಟು ಹೆಚ್ಚಿಸಿದನಲ್ಲದೆ, ಅದನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡಿದನು. ಪರಿಣಾಮವಾಗಿ ರೈತರು ಎಲ್ಲೆಡೆ ದಂಗೆಯೆದ್ದರು.

ನೇಯ್ಗೆಯು ಆ ಕಾಲದ ಬೃಹತ್ ಉದ್ಯಮವಾಗಿತ್ತು. ನಗರ ಪ್ರದೇಶಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಬಿರುಸಾಗಿ ನಡೆಯುತ್ತಿತ್ತು. ಇದು ಭಾರಿ ಪ್ರಮಾಣದಲ್ಲಿ ಉದ್ಯೋಗ ಒದಗಿಸಿತು.

ಸುಲ್ತಾನರು ಪ್ರಮುಖವಾಗಿ ಯುದ್ಧಾಶ್ವಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಇದೇ ವೇಳೆ ಗುಲಾಮರನ್ನು ಭಾರಿ ಸಂಖ್ಯೆಯಲ್ಲಿ ರಫ್ತು ಮಾಡಲಾಗುತ್ತಿತ್ತು.

> ಅಲ್ಲಾವುದ್ದೀನ್ ಖಿಲ್ಜಿಯು ಗುಲಾಮರ ಬೆಲೆಯನ್ನು ಕೂಡ ನಿಗದಿ ಮಾಡಿದ್ದನು. ಗುಲಾಮರನ್ನು ಮಾರುಕಟ್ಟೆಯಲ್ಲಿ ಬಹಿರಂಗವಾಗಿ ಮಾರಾಟ ಮಾಡಲಾಗುತ್ತಿತ್ತು. ಸುಲ್ತಾನರ ಕೈಕೆಳಗಿದ್ದ ಗುಲಾಮರ ಸಂಖ್ಯೆಯಾದರೋ ದಂಗುಬಡಿಸುವಂತಿತ್ತು. ಅಲ್ಲಾವುದ್ದೀನನ ಕೆಳಗೆ 50,000 ಗುಲಾಮರಿದ್ದರೆ ಫಿರೂಜ್‌ಷಾ ತುಘಲಖನ ಅಧೀನದಲ್ಲಿ 1,80,000 ಗುಲಾಮರಿದ್ದರು.

**ವಾಸ್ತು ರಚನೆ ಮತ್ತು ಸಾಹಿತ್ಯ:** ದಿಲ್ಲಿ ಸುಲ್ತಾನರ ಕಾಲದ ಪ್ರಮುಖ ವಾಸ್ತುಶಿಲ್ಪಗಳೆಂದರೆ – ಪ್ರಸಿದ್ಧವಾದ ಕುತುಬ್ ಮಿನಾರ್ (71 ಮಿ. ಎತ್ತರ), ಅಲೈ ದರ್ವಾಜಾ ಎಂಬ ಸುಂದರ ದ್ವಾರ, ಕವ್ವತ್‌ವುಲ್ ಇಸ್ಲಾಮ್ ಮಸೀದಿ ಮತ್ತು ಸಿರಿ ಕೋಟೆ.


ಅಮೀರ್ ಖುಸ್ರು

ಇದೇ ಕಾಲದಲ್ಲಿ ಉರ್ದು ಭಾಷೆ ರೂಪುಗೊಂಡಿತು. ಅಮೀರ್ ಖುಸ್ರು ಮತ್ತು ಅಮೀರ್ ಹಸನ್ ಪರ್ಷಿಯನ್ ಭಾಷೆಯ ಹೆಸರಾಂತ ಕವಿಗಳು. ಖುಸ್ರು ಸಂಗೀತಗಾರನಾಗಿದ್ದು ತಬಲಾ, ಸಿತಾರ್ ಮುಂತಾದ ವಾದ್ಯಗಳನ್ನು ರೂಪಿಸಿದನು. ಜಯಸಿ ಎಂಬ ಕವಿ

ಉರ್ದುವಿನಲ್ಲಿ 'ಪದ್ಮಾವತ್' ಎಂಬ ಸೂಫಿ ಕಾವ್ಯ ಬರೆದನು. ರಾಮಾನಂದ, ಕಬೀರ, ರಾಯಿದಾಸ, ಮೀರಾ ಈ ಕಾಲದವರು.



ಕಬೀರದಾಸ್



ಮೀರಾಬಾಯಿ

### ಕಾಲಗಣನೆ

| | | |
|---|---|---|
| ಸಿಂಧ್ ಪ್ರಾಂತದ ಮೇಲೆ ಅರಬ್ಬರ ದಾಳಿ | – | 712 |
| ಮಹಮದ್ ಘಜನಿಯ ಆಕ್ರಮಣಗಳು | – | 1000–1026 |
| ತರೈನ್ ಕದನಗಳು (ಮಹಮದ್ ಘೋರಿ ಮತ್ತು ಪೃಥ್ವೀರಾಜ್ ಚೌಹಾಣರ ನಡುವೆ) | – | 1191–1192 |
| ದೆಹಲಿಯ ಸುಲ್ತಾನರ ಆಳ್ವಿಕೆ | – | 1206–1526 |
| ಕುತ್ಬುದ್ದೀನ್ ಐಬಕ್ | – | 1206–1210 |
| ರಜಿಯಾ ಸುಲ್ತಾನಾ | – | 1236–1240 |
| ಅಲ್ಲಾವುದ್ದೀನ್ ಖಿಲ್ಜಿ | – | 1296–1316 |
| ಮಹಮದ್ ಬಿನ್ ತುಘಲಖ್ | – | 1325–1351 |
| ಪಾಣಿಪತ್ ಕದನ ಹಾಗೂ ಮೊಗಲ್ ಆಳ್ವಿಕೆಯ ಆರಂಭ | – | 1526 |

### ಹೊಸ ಪದ

ಮಿನಾರ್ – ಎತ್ತರವಾದ ಸ್ತಂಭಗೋಪುರ.

©KTBS NOT TO BE REPUBLISHED

## ಅಭ್ಯಾಸಗಳು

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1 ಮಹಮದ್ ಘಜನಿಯ ದಾಳಿಗಳ ಪರಿಣಾಮಗಳೇನು?

2 ಮಹಮದ್ ಘೋರಿಯ ಸಾಧನೆಗಳು ಯಾವುವು?

3 ಕುತ್ಬುದ್ದೀನ್ ಐಬಕ್‌ನ ಸಾಧನೆಗಳನ್ನು ತಿಳಿಸಿ.

4 ಅಲ್ಲಾವುದ್ದೀನ್ ಖಿಲ್ಜಿಯ ಧೋರಣೆಗಳು ಹಾಗೂ ಅವುಗಳ ಪರಿಣಾಮಗಳನ್ನು ಹೇಳಿ.

5 ಮಹಮದ್ ತುಘಲಖನ ಧೋರಣೆಗಳು ಏಕೆ ವಿಫಲಗೊಂಡವು?

6 ದೆಹಲಿಯ ಸುಲ್ತಾನರ ಕಾಲದಲ್ಲಿ ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಹೇಗಿತ್ತು?

7 ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ದೆಹಲಿಯ ಸುಲ್ತಾನರು ನೀಡಿದ ಕೊಡುಗೆಗಳು ಯಾವುವು?

**ಚಟುವಟಿಕೆಗಳು**

1 ದೆಹಲಿಯ ಸುಲ್ತಾನರ ಕಾಲದ ವಾಸ್ತುಶಿಲ್ಪಗಳ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

2 ಭೂಪಟದಲ್ಲಿ ದಿಲ್ಲಿ ಸುಲ್ತಾನರ ಕಾಲದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.

@KTBS NOT TO BE REPUBLISHED

| ಅಧ್ಯಾಯ 14 | ಭಾರತೀಯ ವೈಚಾರಿಕತೆ ಹಾಗೂ ಭಕ್ತಿಪಂಥ |
|---|---|

E1R8A9

## ಧಾರ್ಮಿಕ–ಸಾಮಾಜಿಕ ಸುಧಾರಣಾ ಚಳವಳಿಗಳು

**ಪಾಠದ ಪರಿಚಯ**

- ಕ್ರಿ.ಶ. 8ನೇ ಶತಮಾನದಿಂದ 16ನೇ ಶತಮಾನದವರೆಗಿನ ಕಾಲದಲ್ಲಿ ಅನೇಕ ಧಾರ್ಮಿಕ ಸುಧಾರಕರು ಜನ್ಮತಾಳಿದರು. ಅವರು ಚಿಂತನಶೀಲರಾಗಿದ್ದು, ವೈಚಾರಿಕ ನೆಲೆಯಲ್ಲಿ ಧರ್ಮ ಮತ್ತು ಸಮಾಜದ ಪುನರುತ್ಥಾನ ಮಾಡಿದರು.
- ಈ ಪಾಠದಲ್ಲಿ ಸುಧಾರಣಾ ಚಳವಳಿಯ ಮುಂಚೂಣಿಯಲ್ಲಿದ್ದ ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಬಸವೇಶ್ವರರು ಮತ್ತು ಮಧ್ವಾಚಾರ್ಯರ ಜೀವನ ಹಾಗೂ ಸುಧಾರಣೆಗಳನ್ನು ಸಂಕ್ಷಿಪ್ತವಾಗಿ ನಿರೂಪಣೆ ಮಾಡಲಾಗಿದೆ.
- ನಿಮಗೆ ಪುರಂದರದಾಸ ಹಾಗೂ ಕನಕದಾಸರ ವಿಚಾರ ತಿಳಿದಿದೆಯಲ್ಲವೆ? ಅವರು ಸಮಾಜಕ್ಕೆ ಏನು ಕೊಡುಗೆಯನ್ನು ಕೊಟ್ಟರು? ಅವರಂತೆ ಉತ್ತರ ಭಾರತದಲ್ಲಿ ಸಾಧುಸಂತರು ತಮ್ಮ ಬೋಧನೆಗಳಿಂದ ಸಮಾಜವನ್ನು ಜಾಗೃತಿಗೊಳಿಸಿದರು.
- ಭಕ್ತಿಪಂಥದ ಆಶಯ, ಅರ್ಥ ಮತ್ತು ಲಕ್ಷಣಗಳನ್ನು ಹೇಳಲಾಗಿದೆ. ಶ್ರೀಚೈತನ್ಯ, ಗುರು ನಾನಕರು, ಮೀರಾಬಾಯಿ ಹಾಗೂ ಸೂಫಿ ಸಂತರನ್ನು ಪರಿಚಯಿಸಲಾಗಿದೆ. ಜೊತೆಗೆ ಭಕ್ತಿಪಂಥವು ವಿಭಿನ್ನ ಪಂಥೀಯರ ನಡುವೆ ಸಾಧಿಸಿದ ಸಾಮರಸ್ಯವನ್ನು ಹಾಗೂ ಸ್ಥಳೀಯ ಭಾಷೆಗಳ ಸಂಪನ್ನತೆಗೆ ನೀಡಿದ ಕೊಡುಗೆಯನ್ನು ವಿವರಿಸಲಾಗಿದೆ.

**ಸಾಮರ್ಥ್ಯಗಳು**

1. ಧಾರ್ಮಿಕ ಸುಧಾರಕರ ಚಿಂತನೆಗಳನ್ನು ಮತ್ತು ಸುಧಾರಣೆಗಳನ್ನು ಅರ್ಥೈಸಿಕೊಳ್ಳುವುದು.
2. ಅವರ ಚಿಂತನೆಗಳು ಎಷ್ಟರ ಮಟ್ಟಿಗೆ ಪ್ರಸ್ತುತವಾಗಿವೆ ಎಂಬುದನ್ನು ಅರಿತುಕೊಳ್ಳುವುದು.
3. ಭಕ್ತಿಸಂತರ ಬೋಧನೆಗಳು ಸಾಮಾಜಿಕ ಸಾಮರಸ್ಯಕ್ಕೆ ನೀಡಿದ ಕೊಡುಗೆಗಳನ್ನು ಅರ್ಥೈಸಿಕೊಳ್ಳುವುದು.
4. ಸಂತರ ಬೋಧನೆಗಳನ್ನು ಅರಿತು ಉದಾರಭಾವವನ್ನು ಮೈಗೂಡಿಸಿಕೊಳ್ಳುವುದು.

© KTBS NOT TO BE REPUBLISHED

ಭಾರತದಲ್ಲಿ ಅನೇಕ ಮಹಾಪುರುಷರು ಜನ್ಮತಾಳಿದರು. ಇವರು ಬೋಧಕರು ಮಾತ್ರವೇ ಆಗಿರದೆ ಸಕ್ರಿಯವಾಗಿ ಸಮಾಜ ಸುಧಾರಣೆಯನ್ನೂ ಮಾಡಿದರು. ಇವರ ಸುಧಾರಣೆಗಳು ಜನರಲ್ಲಿದ್ದ ಅಜ್ಞಾನ ಮತ್ತು ಕೆಟ್ಟ ಸಂಪ್ರದಾಯಗಳನ್ನು ತೊಡೆದು ಹಾಕಿದವು. ಇವರ ಪ್ರಭಾವ ಇಂದಿಗೂ ವ್ಯಾಪಕವಾಗಿ ಹರಡಿದೆ.

'ಭಜಗೋವಿಂದಂ' ಸ್ತೋತ್ರವನ್ನು ಕೇಳಿರುವಿರಾ? ನಿಮಗೆ ಅದನ್ನು ಪಠಿಸುವ ಪದ್ಧತಿ ಗೊತ್ತಿದೆಯೇ? ಅದನ್ನು ಬರೆದವರು ಯಾರು?

## ಶ್ರೀ ಶಂಕರಾಚಾರ್ಯರು

ಶಂಕರರು ಕೇರಳದ ಕಾಲಡಿ ಎಂಬ ಗ್ರಾಮದಲ್ಲಿ ಜನಿಸಿದರು. ಪ್ರತಿಭಾವಂತರಾದ ಇವರು ಎಂಟರ ವಯಸ್ಸಿನಲ್ಲಿಯೇ ನಾಲ್ಕು ವೇದಗಳನ್ನು ಅರಿತರು.


*ಶ್ರೀ ಶಂಕರಾಚಾರ್ಯರು*

ಶಿವಗುರು ಮತ್ತು ಆರ್ಯಾಂಬೆ ಶಂಕರರ ತಂದೆ ತಾಯಿ. ಶಂಕರರು ಪ್ರತಿಪಾದಿಸಿದ ತತ್ವವನ್ನು ಅದ್ವೈತ ಎನ್ನುವರು.

### ಶಂಕರರ ಸುಧಾರಣೆಗಳು

- ಶಂಕರರು ಅಂದಿನ ಕಾಲದ ಹಿಂದೂ ಸಮಾಜದಲ್ಲಿ ಹಲವಾರು ಸುಧಾರಣೆಗಳನ್ನು ತಂದು ಜನರನ್ನು ಜ್ಞಾನ ಮಾರ್ಗದಲ್ಲಿ ನಡೆಸಿದರು.
- ಶಂಕರರು ಬದರಿ (ಉತ್ತರಾಖಂಡ), ದ್ವಾರಕೆ (ಗುಜರಾತ್), ಪುರಿ (ಒಡಿಶ) ಮತ್ತು ಕರ್ನಾಟಕದ ಶೃಂಗೇರಿಯಲ್ಲಿ ಪೀಠಗಳನ್ನು ಸ್ಥಾಪಿಸಿದರು. ಈ ಪೀಠಗಳು ಭಾರತೀಯರನ್ನು ಭಾವನಾತ್ಮಕ ಹಾಗೂ ಧಾರ್ಮಿಕವಾಗಿ ಜೋಡಿಸುವ ಕೇಂದ್ರಗಳಾದವು.


*ಬದರಿನಾಥ ಮಂದಿರ, ಬದರಿನಾಥ*

- ಶಂಕರರು ಅನೇಕ ಶಾಸ್ತ್ರಗ್ರಂಥಗಳನ್ನು ಬರೆದರು. ಅವರ ಕೃತಿ 'ಭಜಗೋವಿಂದಂ' ಇಂದಿಗೂ ಜನಪ್ರಿಯವಾಗಿದೆ. ಶಂಕರರು ತಮ್ಮ 32 ವರ್ಷಗಳ ಜೀವಿತ ಕಾಲದೊಳಗೆ ಇಷ್ಟೆಲ್ಲಾ ಸಾಧಿಸಿದ್ದು ಅಚ್ಚರಿಯ ಸಂಗತಿಯಾಗಿದೆ.

@KTBS NOT TO BE REPUBLISHED

## ಶ್ರೀ ರಾಮಾನುಜಾಚಾರ್ಯರು

ರಾಮಾನುಜರು ಚೆನ್ನೈ ಸಮೀಪದ ಶ್ರೀಪೆರಂಬುದೂರಿನಲ್ಲಿ ಜನಿಸಿದರು. ಕಾಂಚಿ ನಗರದಲ್ಲಿ ಶಾಸ್ತ್ರಾಧ್ಯಯನ ಮಾಡಿದರು.

ರಾಮಾನುಜರ ತಂದೆ ಕೇಶವ ದೀಕ್ಷಿತರು, ತಾಯಿ ಕಾಂತಿಮತಿ. ಅವರು ಪ್ರತಿಪಾದಿಸಿದ ಸಿದ್ಧಾಂತವನ್ನು ವಿಶಿಷ್ಟಾದ್ವೈತವೆಂದು ಕರೆಯುತ್ತೇವೆ.



*ಶ್ರೀ ರಾಮಾನುಜಾಚಾರ್ಯರು*

ರಾಮಾನುಜರು ದೇಶದ ನಾಲ್ಕೂ ದಿಕ್ಕಿನಲ್ಲಿ ಸಂಚರಿಸಿ ಶ್ರೀವೈಷ್ಣವ ಮತವನ್ನು ಪ್ರಚಾರ ಮಾಡಿದರು. ಮುಕ್ತಿಗೆ ಭಕ್ತಿ ಮತ್ತು ಶರಣಾಗತಿ ಮುಖ್ಯವೆಂದು ಸಾರಿದರು. ಕರ್ನಾಟಕದ ಹೊಯ್ಸಳ ದೊರೆ ವಿಷ್ಣುವರ್ಧನ ಇವರನ್ನು ಸ್ವಾಗತಿಸಿದನು.



*ಚೆಲುವನಾರಾಯಣ ದೇವಾಲಯ, ಮೇಲುಕೋಟೆ.*

### ರಾಮಾನುಜರ ಸುಧಾರಣೆಗಳು

- ರಾಮಾನುಜರು ಜಾತಿಸಾಮರಸ್ಯವನ್ನು ಪ್ರೋತ್ಸಾಹಿಸಿದರು.
- ರಾಮಾನುಜರು ಮೇಲುಕೋಟೆ ಮತ್ತು ದಕ್ಷಿಣ ಭಾರತದಲ್ಲಿ ಅನೇಕ ಭವ್ಯ ದೇವಾಲಯಗಳ ನಿರ್ಮಾಣಕ್ಕೆ ಕಾರಣರಾದರು.

## ಶ್ರೀ ಬಸವೇಶ್ವರರು

ಕರ್ನಾಟಕದ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನದಲ್ಲಿ ಬಸವೇಶ್ವರರು ಅತ್ಯಂತ ಕ್ರಾಂತಿಕಾರಿ ಪಾತ್ರವಹಿಸಿದರು. ಬಸವೇಶ್ವರರು ವಿಜಯಪುರ ಜಿಲ್ಲೆಯ ಬಸವನ

©KTBS Not to be republished

ಬಾಗೇವಾಡಿಯವರು. ಬಾಲ್ಯದಲ್ಲಿ ಉಪನಯನ ಸಂಸ್ಕಾರದ ಬದಲು ಲಿಂಗದೀಕ್ಷೆ ಪಡೆದರು. ಅವರ ವಿದ್ಯಾಭ್ಯಾಸ ಕೂಡಲಸಂಗಮದಲ್ಲಾಯಿತು.

ಬಸವೇಶ್ವರರ ತಂದೆ ತಾಯಿ ಮಾದರಸ ಮತ್ತು ಮಾದಲಾಂಬಿಕೆ. ಬಸವನ ಬಾಗೇವಾಡಿ ಅಗ್ರಹಾರದ ಶೈವ ಬ್ರಾಹ್ಮಣರಾಗಿದ್ದರು. ಬಸವತತ್ವವನ್ನು ಶಕ್ತಿವಿಶಿಷ್ಟಾದ್ವೈತ ಎಂದು ಕರೆಯುತ್ತಾರೆ.

ಕಲ್ಯಾಣದಿಂದ ಆಳ್ವಿಕೆ ನಡೆಸುತ್ತಿದ್ದ ಕಲಚೂರಿ ವಂಶದ ಬಿಜ್ಜಳನು ಬಸವೇಶ್ವರರನ್ನು ಭಂಡಾರದ ಅಧಿಕಾರಿಯಾಗಿ ನೇಮಿಸಿದನು. ಕಲ್ಯಾಣದಲ್ಲಿ ಬಸವಣ್ಣನವರು ಕ್ರಾಂತಿಕಾರಿ ಚಿಂತನೆಗಳನ್ನು ಪ್ರಚಾರ ಮಾಡಲಾರಂಭಿಸಿದರು. ಸಂಪ್ರದಾಯಸ್ಥರು ಈ ಚಿಂತನೆಗಳನ್ನು ವಿರೋಧಿಸಿದರು. ಇದರಿಂದ ನೊಂದುಕೊಂಡ ಅವರು ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ಹೋದರು. ಅವರು ನಂತರ ಕೂಡಲಸಂಗಮದಲ್ಲಿ ಐಕ್ಯರಾದರೆಂದು ನಂಬಲಾಗಿದೆ.


*ಶ್ರೀ ಬಸವೇಶ್ವರರು*

**ಬಸವೇಶ್ವರರ ಸುಧಾರಣೆಗಳು**

- ಬಸವಣ್ಣನವರು ಜಾತಿರಹಿತ ಮತ್ತು ವರ್ಗರಹಿತ ಸಮಾಜ ನಿರ್ಮಾಣಕ್ಕೆ ಪಣತೊಟ್ಟರು.
- 'ಕಾಯಕವೇ ಕೈಲಾಸ' ಇದು ಅವರ ಮುಖ್ಯ ಬೋಧನೆಗಳಲ್ಲಿ ಒಂದಾಗಿದೆ.

**ಚಟುವಟಿಕೆ :** ನಿಮಗೆ ಮುಖ್ಯವೆಂದು ಕಂಡ ಬಸವಣ್ಣನವರ ಮೂರು ವಚನಗಳನ್ನು ಸಂಗ್ರಹಿಸಿ. ಅವುಗಳಲ್ಲಿ ಕಂಡು ಬರುವ ಆಧ್ಯಾತ್ಮ ತತ್ವಗಳನ್ನು ಅರ್ಥೈಸಿ ಆ ವಿಚಾರ ಕುರಿತು ಹತ್ತು ವಾಕ್ಯಗಳನ್ನು ಬರೆಯಿರಿ.

ಕಾಯಕವೆಂದರೆ ಭಕ್ತಿಯಿಂದ ಮಾಡುವ ದುಡಿಮೆ. ಕಾಯಕದಿಂದ ಬಂದ ಫಲವನ್ನು ಸಮಾನವಾಗಿ ಸ್ವೀಕರಿಸುವುದೇ 'ದಾಸೋಹ' ಆಗಿರುತ್ತದೆ. ಬಸವಣ್ಣನವರ ಗುರಿ ಜನರಲ್ಲಿ ದುಡಿಮೆಯ ಸಂಸ್ಕೃತಿ ಬೆಳೆಸುವುದಾಗಿತ್ತು.

- ಬಸವಣ್ಣನವರು ಜಾತೀಯತೆ, ಮೂರ್ತಿಪೂಜೆ, ಯಜ್ಞಯಾಗಾದಿಗಳನ್ನು ಖಂಡಿಸಿದರು. 'ದೇಹವೇ ದೇಗುಲ' ಎಂದರು.
- 'ಹೆಣ್ಣು ತಾಯಿ, ಅವಳೇ ಸರ್ವಸ್ವ' ಎಂಬ ಅವರ ಮಾತು ದನಿ ಕಳೆದುಕೊಂಡಿದ್ದ ಸ್ತ್ರೀಯರಿಗೆ ಆತ್ಮವಿಶ್ವಾಸ ನೀಡಿತು.
- ಅವರು ಬಸವಕಲ್ಯಾಣದಲ್ಲಿ 'ಅನುಭವ ಮಂಟಪ'ವನ್ನು ಸ್ಥಾಪಿಸಿದರು. ಇದು ವಚನಕಾರರ ವೇದಿಕೆಯಾಗಿತ್ತು.
- ಬಸವೇಶ್ವರರು ಸಾವಿರಕ್ಕೂ ಹೆಚ್ಚಿನ ವಚನಗಳನ್ನು ರಚಿಸಿದರು. ಇವು 'ಕೂಡಲಸಂಗಮದೇವ' ಎಂಬ ಅಂಕಿತದಿಂದ ಕೊನೆಗೊಳ್ಳುತ್ತವೆ.

@KTBS NOT TO BE REPUBLISHED

**ವಚನ ಸಾಹಿತ್ಯ:** 'ವಚನ' ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ. ವಚನಗಳು ಗದ್ಯದಂತೆ ಓದಲು ಪದ್ಯದಂತೆ ಹಾಡಲು ಬರುವ ಸಾಹಿತ್ಯ. ಜೇಡರ ದಾಸಿಮಯ್ಯ, ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದ ವಚನಕಾರರಿದ್ದರು. ಅವರು ಎಲ್ಲಾ ಜಾತಿ ವರ್ಗಗಳಿಗೆ ಸೇರಿದವರಾಗಿದ್ದರು. ವಚನಗಳಲ್ಲಿ ಪ್ರಕಟವಾದ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ.

## ಶ್ರೀ ಮಧ್ವಾಚಾರ್ಯರು

ಮಧ್ವರು ಉಡುಪಿಗೆ ಹತ್ತಿರವಿರುವ ಪಾಜಕ (ಬೆಳ್ಳೆ) ಗ್ರಾಮದಲ್ಲಿ ಜನಿಸಿದರು.

ಸನ್ಯಾಸ ಸ್ವೀಕರಿಸಿದ ಅನಂತರ ಮಧ್ವರು ತಮ್ಮ ಬೋಧನೆಗಳ ಪ್ರಸಾರಕ್ಕಾಗಿ ಭಾರತದ ಎಲ್ಲೆಡೆ ಎರಡು ಬಾರಿ ಸಂಚರಿಸಿದರು. ವಿಷ್ಣು ಅವರ ಆರಾಧ್ಯ ದೇವರು.

ತುಳು ಬ್ರಾಹ್ಮಣರಾದ ಮಧ್ಯಗೇಹ ಭಟ್ಟ ಮತ್ತು ವೇದವತಿ ಇವರ ತಂದೆ ತಾಯಿ. ಇವರು ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು.

### ಮಧ್ವರ ಸುಧಾರಣೆಗಳು

- ಮಧ್ವರು ದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿದರು.
- ಉಡುಪಿಯಲ್ಲಿ ಶ್ರೀಕೃಷ್ಣನ ಪೂಜೆಗೆಂದು ಅಷ್ಟಯತಿಗಳನ್ನು ನೇಮಿಸಿದರು.
- ಅವರು ಸರಳವಾದ ಭಕ್ತಿಮಾರ್ಗವನ್ನು ಉಪದೇಶ ಮಾಡಿದರು.



ಶ್ರೀ ಮಧ್ವಾಚಾರ್ಯರು

ಕೃಷ್ಣನ ಪೂಜೆಯನ್ನು ಅಷ್ಟಯತಿಗಳು ಎರಡು ತಿಂಗಳಿಗೊಮ್ಮೆ ಪರ್ಯಾಯದಿಂದ ಮಾಡಬೇಕೆಂದು ಮಧ್ವರು ವ್ಯವಸ್ಥೆಗೊಳಿಸಿದರು. ಪರ್ಯಾಯದ ಕಾಲಾವಧಿಯನ್ನು ವಾದಿರಾಜರು ಎರಡು ವರ್ಷಗಳಿಗೆ ವಿಸ್ತರಿಸಿದರು.

ಅಷ್ಟ ಮಠಗಳೊಂದಿಗೆ, ಉತ್ತರಾದಿ, ವ್ಯಾಸರಾಜ ಮತ್ತು ರಾಘವೇಂದ್ರ ಮಠಗಳು ಮಧ್ವತತ್ವದ ಅನುಯಾಯಿಗಳ ಮುಖ್ಯ ಧಾರ್ಮಿಕ ಕೇಂದ್ರಗಳಾಗಿವೆ.

ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಮಧ್ವಾಚಾರ್ಯರ ಉಪದೇಶಗಳಿಂದ ಜನತೆ ಪ್ರಭಾವಿತರಾದರು.



ಶ್ರೀಕೃಷ್ಣ ದೇವಸ್ಥಾನ, ಉಡುಪಿ

©KTBS NOT TO BE REPUBLISHED

# ಭಕ್ತಿಪಂಥ

ನಮ್ಮ ದೇಶವು ಸಾಧುಸಂತರ ನಾಡು, ನೂರಾರು ಸಂತರು ಕಾಲಕಾಲಕ್ಕೆ ಈ ನೆಲದಲ್ಲಿ ಜನಿಸಿದರು. ಇವರು ಸಮಾಜದಲ್ಲಿ ಸಾಮರಸ್ಯ ತಂದರಲ್ಲದೆ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸಿದರು. ಸಾಮಾಜಿಕ ಲೋಪದೋಷಗಳನ್ನು ಕೂಡ ಅವರು ತಪ್ಪದೆ ಎತ್ತಿತೋರಿಸಿದರು.

ಸಂತರು ಭಕ್ತಿಮಾರ್ಗವನ್ನು ಬೋಧಿಸಿದರು. ದೇವರ ದಯೆಯನ್ನು ಗಳಿಸಲು ಭಕ್ತಿಯೇ ದಾರಿಯೆಂದು ನಂಬಿದರು. ಈ ಸಂಪ್ರದಾಯವನ್ನು ಭಕ್ತಿಪಂಥ ಎನ್ನುವರು.

### ಭಕ್ತಿಪಂಥದ ಸಾರ

- ಭಕ್ತಿಪಂಥವು ಮೇಲುಕೀಳು ಎಂಬ ಭೇದಭಾವವನ್ನು ಖಂಡಿಸಿತು. ಸಮಾನತೆಯನ್ನು ಸಾರಿತು.
- ಭಕ್ತಿಸಂತರು ಕಂದಾಚಾರವನ್ನು ವಿರೋಧಿಸಿ ಅದನ್ನು ಖಂಡಿಸಿದರು.
- ಸೂಫಿಸಂತರು ಧರ್ಮವೆಂದರೆ ಪ್ರೇಮ ಹಾಗೂ ಮಾನವಸೇವೆ ಎಂದು ಸಾರಿದರು. ದೇವನೊಬ್ಬನೇ ಇರುವನಲ್ಲದೆ ಹಲವರಿಲ್ಲವೆಂದು ನುಡಿದರು.
- ಸಂತರು ಜನರ ಹೃದಯವನ್ನು ಬೆಸೆಯುವ ಕಾರ್ಯಮಾಡಿದರು.

### ಭಕ್ತಿ ಸಂತರು

**ಶ್ರೀ ಚೈತನ್ಯರು:** ಇವರು ಪಶ್ಚಿಮ ಬಂಗಾಲದಲ್ಲಿ ಜನಿಸಿದರು. ಚೈತನ್ಯರು ಜಾತಿ ಭೇದವನ್ನು ಅಲ್ಲಗಳೆದರು ಮುಕ್ತಿಗೆ ಭಕ್ತಿಯೊಂದೇ ದಾರಿಯೆಂದರು.

ಪ್ರೇಮ, ಸಹೋದರಭಾವ ಮತ್ತು ದಾನಶೀಲತೆ ಇವು ಚೈತನ್ಯರ ಬೋಧನೆಯ ತಿರುಳು. ಅವರು ಭಾರತದ ಎಲ್ಲೆಡೆ ತೀರ್ಥಯಾತ್ರೆಗೈದು ಪ್ರೇಮದ ಸಂದೇಶ ಸಾರಿದರು.



ಶ್ರೀ ಚೈತನ್ಯರು



ಗುರು ನಾನಕ

**ಗುರು ನಾನಕ:** ಗುರು ನಾನಕರು ಸಿಖ್ ಪಂಥದ ಸಂಸ್ಥಾಪಕರು. ಈಗಿನ ಪಾಕಿಸ್ತಾನದಲ್ಲಿರುವ ಪಂಜಾಬಿನಲ್ಲಿ ಅವರು ಜನಿಸಿದರು. ಅವರು ಹಿಂದು-ಮುಸ್ಲಿಂ ಮತಗಳ ಸಮಾನ ಅಂಶಗಳನ್ನು ಒತ್ತಿ ಹೇಳಿದರು. 'ಗ್ರಂಥ ಸಾಹಿಬ್' ಎಂಬ ಸಿಖ್ಖರ ಪವಿತ್ರ ಗ್ರಂಥದಲ್ಲಿ ಅವರ ಜಪಜಿಗಳು ಎಂದು ಕರೆಯಲಾಗುವ ಹಾಡುಗಳಿವೆ. ದೇವರ ನಾಮವನ್ನು ಜಪಿಸುವುದು ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕೆ ಸಿಖ್ ಪಂಥ ಮಹತ್ವ ನೀಡಿದೆ. ಸ್ತ್ರೀ-ಪುರುಷರ ಸಮಾನತೆಯನ್ನು ಅದು ಒತ್ತಿ ಹೇಳಿದೆ. "ರಾಜಮಹಾರಾಜರಿಗೂ ಪ್ರವಾದಿಗಳಿಗೂ ಜನ್ಮನೀಡುವ ಸ್ತ್ರೀಯರು ಪುರುಷರಿಗಿಂತ ಹೇಗೆ ಕೀಳೆನಿಸಬಲ್ಲರು?" ಎಂಬುದಾಗಿ ನಾನಕರು ಪ್ರಶ್ನಿಸುತ್ತಾರೆ. "ನನಗೆ ಒಂದು ಲಕ್ಷ ನಾಲಿಗೆಗಳಿದ್ದರೂ ಆ ಎಲ್ಲ ನಾಲಿಗೆಗಳಿಂದಲೂ ಒಬ್ಬನೇ ದೇವನನ್ನು

NOT TO BE REPUBLISHED @KTBS

ಸ್ಮರಿಸುತ್ತೇನೆ," ಎಂಬುದಾಗಿ ನಾನಕ್ ಹೇಳಿದರು. ತಮ್ಮ ದೇಶ ಸಂಚಾರದಲ್ಲಿ ನಾನಕರು ಕರ್ನಾಟಕಕ್ಕೂ ಬಂದಿದ್ದರು. ಅವರು ಬೀದರಿನಲ್ಲಿ ತಂಗಿದ್ದ ಸ್ಥಳವನ್ನು ನಾನಕ್ ಝರಾ ಎಂದು ಕರೆಯುತ್ತಾರೆ.

**ಮೀರಾಬಾಯಿ:** 'ಕಲಿಯುಗದ ರಾಧಾ' ಎಂದು ಗೌರವಿಸಲಾಗುವ ಸಂತ ಮೀರಾಬಾಯಿ ಭಾರತದ ಓರ್ವ ಮಹಾನ್ ಕೀರ್ತನಗಾರ್ತಿಯೂ ಹೌದು. ಇವಳು ರಾಜಸ್ಥಾನದಲ್ಲಿ ರಜಪೂತ ರಾಜಮನೆತದಲ್ಲಿ ಜನಿಸಿದಳು. ತಾತ ಕೊಟ್ಟಿದ್ದ ಕೃಷ್ಣನ ಮೂರ್ತಿಯೊಂದಿಗೆ ದಿನ ಕಳೆಯುವುದೆಂದರೆ ಇವಳಿಗೆ ಅತ್ಯಂತ ಇಷ್ಟ. ಕೃಷ್ಣನೇ ಇವಳ ಆರಾಧ್ಯದೈವ. ಇವಳು ಮಾಡುತ್ತಿದ್ದ ಕೃಷ್ಣನ ಆರಾಧನೆಯನ್ನು ಅತ್ತೆ ಕಟುವಾಗಿ ವಿರೋಧಿಸಿದಳು. ಇದನ್ನು ತಡೆಯಲಾಗದೆ ಮೀರಾ ಅರಮನೆ ಬಿಟ್ಟು ಶ್ರೀಕೃಷ್ಣನ ಕ್ಷೇತ್ರವಾದ ಬೃಂದಾವನಕ್ಕೆ ಹೋದಳು. ಅವಳು ರಚಿಸಿದ ಕೀರ್ತನೆಗಳಲ್ಲಿ ಭಕ್ತಿ, ಪ್ರೇಮ ತುಂಬಿತುಳುಕಿದೆ. 'ಗಿರಿಧರ ಗೋಪಾಲ' ಅವಳು ಪೂಜಿಸುತ್ತಿದ್ದ ದೇವರ ಹೆಸರು. ತನ್ನ ನೂರಾರು ಭಜನೆಗಳಿಂದ ಮೀರಾ ಜನಮನದಲ್ಲಿ ಶಾಶ್ವತ ಸ್ಥಾನಪಡೆದಳು.


ಮೀರಾಬಾಯಿ

© KTBS NOT TO BE REPUBLISHED

**ಇತರ ಪ್ರಮುಖ ಭಕ್ತಿಸಂತರು**

- **ಕಬೀರ್‌ದಾಸ್:** ಕಬೀರರು ಜಾತಿವ್ಯವಸ್ಥೆಯ ಅನ್ಯಾಯ, ಮೂರ್ತಿಪೂಜೆ, ತೀರ್ಥಯಾತ್ರೆ, ಉಪವಾಸ, ಹರಕೆ ಮತ್ತು ಮತೀಯ ಆಚರಣೆಗಳನ್ನು ಖಂಡಿಸಿದರು. ತಾನು 'ಅಲ್ಲಾ ಮತ್ತು ರಾಮನ ಶಿಶು' ಎಂಬುದಾಗಿ ಹೇಳಿದರು.
- **ತುಲಸೀದಾಸ್:** ತುಲಸೀದಾಸರ ಪ್ರಸಿದ್ಧ ಕಾವ್ಯ 'ರಾಮಚರಿತಮಾನಸ'.
- **ಸೂರ್‌ದಾಸ್:** ಇವರು ಓರ್ವ ಸಂತ ಕವಿ. ಹುಟ್ಟು ಕುರುಡರು. 'ಸೂರ್‌ಸಾಗರ' ಇವರ ಖ್ಯಾತ ಕೃತಿ.

**ಸೂಫಿ ಪಂಥ:** ಸೂಫಿ ಪಂಥವು ಅರೇಬಿಯದಲ್ಲಿ ಉದಯಿಸಿ ಭಾರತವನ್ನು ಪ್ರವೇಶಿಸಿತು. ಬಡತನದ ಪ್ರತೀಕವಾಗಿ ಸೂಫಿ ಸಂತರು ಒರಟು ಉಣ್ಣೆಯ ಬಟ್ಟೆಗಳನ್ನು (ಸೂಫ್) ತೊಡುತ್ತಿದ್ದರು. ಆದ್ದರಿಂದ ಇವರನ್ನು ಸೂಫಿಗಳೆಂದು ಕರೆಯಲಾಯಿತು. ಕಾಲಕ್ರಮೇಣ ಯೋಗ, ವೇದಾಂತ ಮತ್ತು ಬೌದ್ಧಮತದ ಚಿಂತನೆಗಳಿಂದ ಸೂಫಿಗಳು ಪ್ರಭಾವಿತರಾದರು. ಅನೇಕ ಸೂಫಿ ಸಂತರು (ಉದಾಹರಣೆಗೆ ಬಾಬಾ ಬುಡನ್) ದತ್ತಾತ್ರೇಯನ ಆರಾಧಕರು. ಬುಡನ್ ಅಲ್‌ದೀನ್‌ರಂಥ ವಿಜಯಪುರದ ಸೂಫಿಸಂತ ಕೃಷ್ಣನನ್ನು ತಮ್ಮ ಹಾಡುಗಳಲ್ಲಿ ಸ್ತುತಿಸಿದ್ದಾರೆ.

ಧರ್ಮವೆಂದರೆ ಪ್ರೇಮ, ಮಾನವ ಸೇವೆ ಎಂಬುದಾಗಿ ಸೂಫಿಗಳು ಸಾರಿದರು. ಕೀರ್ತನ, ನರ್ತನ ಇವರ ಭಕ್ತಿಯ ವಿಧಾನವಾಗಿತ್ತು. ಇವೆರಡನ್ನೂ ಸಂಪ್ರದಾಯವಾದಿಗಳು ಬಹಿಷ್ಕರಿಸಿದರು. ಸೂಫಿಗಳಲ್ಲಿ ಮಹಿಳೆಯರೂ ಇದ್ದರು. ಸೂಫಿ ಅನುಯಾಯಿ ಬಿಯಾ ಎಂಬ ಮಹಿಳೆಯನ್ನು ಇಂದಿಗೂ ಪೂಜ್ಯ ಭಾವನೆಯಿಂದ ಕಾಣುತ್ತಾರೆ.

**ನಿಜಾಮುದ್ದೀನ್ ಔಲಿಯ** ಭಾರತದ ಪ್ರಮುಖ ಸೂಫಿ ಸಂತ. ಇವರು ದೆಹಲಿಯಲ್ಲಿ ನೆಲೆಸಿ ಬಡತನದ ಜೀವನ ನಡೆಸಿದರು. ಹುಲ್ಲು ಮಾಡಿನ ಮಸೀದಿ ಇವರ ಚಟುವಟಿಕೆಯ ಕೇಂದ್ರವಾಗಿತ್ತು. ದೆಹಲಿಯ ಸುಲ್ತಾನ ದಾನವಾಗಿ ನೀಡಿದ್ದ ಗ್ರಾಮವೊಂದನ್ನು ಇವರು ತಿರಸ್ಕರಿಸಿದರು. ರಾಜಕಾರಣದಿಂದ ದೂರ ಉಳಿದರು. ತಮ್ಮನ್ನು ಕಾಣಲು ಬರುತ್ತಿದ್ದ ಭಕ್ತರಿಗೆ ಸದ್ಗುಣ, ಕರುಣೆಯ ಸಂದೇಶ ನೀಡುತ್ತಿದ್ದರು.



ನಿಜಾಮುದ್ದೀನ್ ಔಲಿಯ

**ಬಂದೇನವಾಜ್** ಕರ್ನಾಟಕದ ಖ್ಯಾತ ಸೂಫಿ ಸಂತರು. ಇವರ ಆಕರ್ಷಕ ದರ್ಗಾ ಕಲಬುರಗಿಯಲ್ಲಿದೆ. ಬಂದೇನವಾಜರನ್ನು ಹಿಂದುಗಳು ಕೇಶವ ಚೈತನ್ಯ ಎಂದು ಭಾವಿಸಿ ಆರಾಧಿಸುತ್ತಿದ್ದರು.

**ಚಿಸ್ತಿ:** ಸೂಫಿ ಪಂಥದಲ್ಲಿ ಚಿಸ್ತಿ ಪಂಗಡ ಪ್ರಮುಖವಾದುದು. ಇದರ ಸ್ಥಾಪಕ ಮುಯಿನುದ್ದೀನ್ ಚಿಸ್ತಿ ಅಜ್ಮೀರಕ್ಕೆ ಬಂದಿದ್ದು ಅಲ್ಲಿ ತಮ್ಮ ಕೇಂದ್ರವನ್ನು ಸ್ಥಾಪಿಸಿದರು. ದೈವಭಕ್ತಿ, ಗುರುಸೇವೆ, ಸನ್ಮಾರ್ಗದಲ್ಲಿ ನಡೆಯುವುದು ಚಿಸ್ತಿ ಅನುಯಾಯಿಗಳ ಲಕ್ಷಣ. ಚಿಸ್ತಿಗಳಿಗೆ ಹಿಂದು-ಮುಸ್ಲಿಂ ಸಾಮರಸ್ಯದ ಬಗ್ಗೆ ಕಾಳಜಿಯಿತ್ತು. ಇವರು ಜನಬಳಕೆಯ ಸ್ಥಳೀಯ ಭಾಷೆಯಲ್ಲಿ ಕೃತಿ ಬರೆದರು. ಆಗ್ರಾದ ಫತೇಪುರ್ ಎಂಬಲ್ಲಿನ ಸಲೀಮ್ ಚಿಸ್ತಿ ಪ್ರಸಿದ್ಧರು.



ಸಲೀಮ್ ಚಿಸ್ತಿಯ ಗೋರಿ, ಆಗ್ರಾ

## ಭಕ್ತಿಪಂಥದ ಪ್ರಭಾವ

- ಭಕ್ತಿಸಂತರು ಹಿಂದು-ಮುಸ್ಲಿಂ ಸಾಮರಸ್ಯ ಸಾಧಿಸುವಲ್ಲಿ ಕಾರಣರಾದರು.
- ಭಕ್ತಿಸಂತರು ಜನರಾಡುವ ಸ್ಥಳೀಯ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದರು. ಇದರಿಂದಾಗಿ ಭಾರತೀಯ ಭಾಷೆಗಳು ಶ್ರೀಮಂತಗೊಂಡವು.

©KTBS NOT TO BE REPUBLISHED

| | | |
|---|---|---|
| ಶಂಕರಾಚಾರ್ಯರು | – | 8–9ನೇ ಶತಮಾನ |
| ರಾಮಾನುಜಾಚಾರ್ಯರು | – | 11–12ನೇ ಶತಮಾನ |
| ಬಸವೇಶ್ವರರು | – | 12ನೇ ಶತಮಾನ |
| ಮಧ್ವಾಚಾರ್ಯರು | – | 13–14ನೇ ಶತಮಾನ |
| ಶ್ರೀ ಚೈತನ್ಯ | – | 1486–1534 |
| ಗುರು ನಾನಕ | – | 1469–1538 |
| ಮೀರಾಬಾಯಿ | – | 1498–1546 |
| ನಿಜಾಮುದ್ದೀನ್ ಔಲಿಯ | – | 1238–1325 |
| ಮುಯಿನುದ್ದೀನ್ ಚಿಸ್ತಿ | – | 13ನೇ ಶತಮಾನ |
| ಬಂದೇನವಾಜ್ | – | 15ನೇ ಶತಮಾನ |
| ಸಲೀಮ್ ಚಿಸ್ತಿ | – | 16ನೇ ಶತಮಾನ |

## ಹೊಸ ಪದಗಳು

ದೀಕ್ಷೆ – ಮಂತ್ರೋಪದೇಶ.

ಭಂಡಾರ – ಖಜಾನೆ.

ಕಂದಾಚಾರ – ಕಟ್ಟುಪಾಡು. ಸಂಪ್ರದಾಯ – ಹಿಂದಿನಿಂದ ಬಂದ ಆಚಾರ, ವಿಚಾರಗಳು.

ಝರಾ – ಸಿಹಿನೀರಿನ ಬುಗ್ಗೆ.

## ನಿಮಗೆ ತಿಳಿದಿರಲಿ

ಶ್ರೀ ಚೈತನ್ಯರ ಜನ್ಮಸ್ಥಳ – ಪಶ್ಚಿಮ ಬಂಗಾಲದ ನವದ್ವೀಪ (ನದಿಯಾ). ಗುರು ನಾನಕರ ಜನ್ಮಸ್ಥಳ – ಪಾಕಿಸ್ತಾನದ ತಲವಂಡಿ. ಮೀರಾಬಾಯಿ ಜೋಧಪುರದ ರಾಥೋಡ್ ಮನೆತನದ ರತನ್‌ಸಿಂಗನ ಒಬ್ಬಳೇ ಮಗಳು.

@KTBS NOT TO BE REPUBLISHED

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ಶಂಕರಾಚಾರ್ಯರು ಮಾಡಿರುವ ಸುಧಾರಣೆಗಳು ಯಾವುವು?

2 ರಾಮಾನುಜಾಚಾರ್ಯರು ಯಾವ ಸಾಮಾಜಿಕ ಸುಧಾರಣೆಗಳನ್ನು ಮಾಡಿದರು?

3 ಬಸವೇಶ್ವರರ ಚಿಂತನೆಗಳು ಯಾವುವು?

4 ವಚನ ಸಾಹಿತ್ಯದ ಮಹತ್ವವೇನು? ಕೆಲವು ವಚನಕಾರರನ್ನು ಹೆಸರಿಸಿ.

5 ಮಧ್ವಾಚಾರ್ಯರ ಕೊಡುಗೆಗಳು ಯಾವುವು?

6 ಭಕ್ತಿಸಂತರು ಏನನ್ನು ಬೋಧಿಸಿದರು?

7 ಗುರು ನಾನಕರ ಹಾಡುಗಳನ್ನು ಏನೆಂದು ಕರೆಯುತ್ತಾರೆ?

8 ಭಾರತದ ಪ್ರಮುಖ ಸೂಫಿ ಸಂತರು ಯಾರು?

9 ಭಕ್ತಿಪಂಥದ ಪರಿಣಾಮವನ್ನು ಹೇಳಿರಿ.

10 ಸಂತರು ಯಾವ ಮಾರ್ಗವನ್ನು ಬೋಧಿಸಿದರು?

11 ಸಿಖ್ಖರ ಪವಿತ್ರ ಗ್ರಂಥ ಯಾವುದು?

**ಚರ್ಚಿಸಿ**

- ಭಕ್ತಿಸಂತರ ಬೋಧನೆಗಳ ಪ್ರಸ್ತುತತೆ.

**ಚಟುವಟಿಕೆಗಳು**

1 'ಭಜಗೋವಿಂದಂ' ಆಲಿಸಿ.

2 ಶಂಕರರು, ರಾಮಾನುಜರು, ಬಸವೇಶ್ವರರು ಮತ್ತು ಮಧ್ವರ ಜೀವನ ಚರಿತ್ರೆಯನ್ನು ಓದಿ.

3 ಬಸವೇಶ್ವರರ ಹತ್ತು ವಚನಗಳನ್ನು ಸಂಗ್ರಹಿಸಿ.

4 ಕೆಲವು ವಚನಕಾರರು ಮತ್ತು ಅವರ ಅಂಕಿತನಾಮಗಳನ್ನು ಸಂಗ್ರಹಿಸಿ.

5 ಶಾಲಾ ಸಮಾರಂಭಗಳಲ್ಲಿ ಆಚಾರ್ಯರು, ಸಂತರು ಮತ್ತು ಶರಣರ ವೇಷಭೂಷಣಗಳನ್ನು ಧರಿಸಿ ಅವರ ಬೋಧನೆಗಳನ್ನು ತಿಳಿಸಿ.

6 'ಕಳಬೇಡ, ಕೊಲಬೇಡ............' ಈ ವಚನದಲ್ಲಿ ಕಂಡುಬರುವ ಜೀವನ ಮೌಲ್ಯಗಳಾವುವು? ಇಂದು ನಮ್ಮ ಸಮಾಜದಲ್ಲಿ ಈ ಮೌಲ್ಯಗಳು ಕಂಡು ಬರುತ್ತಿವೆಯೋ? ಇಲ್ಲವಾದಲ್ಲಿ ಕಾರಣಗಳನ್ನು ಸಂಗ್ರಹಿಸಿ ಚರ್ಚಿಸಿ.

7 ಶಂಕರಾಚಾರ್ಯರು, ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರು ಬೋಧಿಸಿದ ತತ್ವಗಳನ್ನು ಸಂಗ್ರಹಿಸಿ ಬರೆಯಿರಿ.

8 ಭಕ್ತಿಸಂತರ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

9 ಶ್ರೀ ಚೈತನ್ಯ, ಗುರು ನಾನಕ್, ಮೀರಾಬಾಯಿ, ತುಲಸೀದಾಸ್, ಕಬೀರ್, ಸೂರ್‌ದಾಸ್ ಮತ್ತು ಸೂಫಿಸಂತರ ಜೀವನ ಚರಿತ್ರೆಯನ್ನು ಓದಿ.

10 ಮೀರಾ ಭಜನೆಗಳನ್ನು ಆಲಿಸಿ.

11 ಅಂತರಜಾಲದಿಂದ ಸೂಫಿ ಪಂಥದ ವಿಚಾರವಾಗಿ ಇನ್ನಷ್ಟು ವಿವರಗಳನ್ನು ಸಂಗ್ರಹಿಸಿ, ಭಾರತದ ಬಹುಮತೀಯ ಸಮಾಜದ ಮೇಲೆ ಅವರ ಪ್ರಭಾವ ಹಾಗೂ ಇಂದಿನ ಸನ್ನಿವೇಶದಲ್ಲಿ ಅವರ ಪ್ರಸ್ತುತತೆಯ ವಿಚಾರ ಚರ್ಚಿಸಿ ಒಂದು ಪುಟದ ವರದಿ ತಯಾರುಮಾಡಿ.

NOT TO BE REPUBLISHED ©KTBS

| ಅಧ್ಯಾಯ 15 | ವಿಜಯನಗರ ಸಾಮ್ರಾಜ್ಯ ಹಾಗೂ ಬಹಮನಿ ರಾಜ್ಯ |
|---|---|

D7R2E7

# ವಿಜಯನಗರ ಸಾಮ್ರಾಜ್ಯ

**ಪಾಠದ ಪರಿಚಯ**

ದಿಲ್ಲಿ ಸುಲ್ತಾನರ ಸೈನಿಕ ಕಾರ್ಯಾಚರಣೆಗಳಿಂದಾಗಿ ದಕ್ಷಿಣ ಭಾರತದ ಸೇವುಣ (ಮಹಾರಾಷ್ಟ್ರ), ಹೊಯ್ಸಳ (ಕರ್ನಾಟಕ), ಕಾಕತೀಯ (ಆಂಧ್ರ ಪ್ರದೇಶ) ಮತ್ತು ಪಾಂಡ್ಯ (ತಮಿಳುನಾಡು) ರಾಜ್ಯಗಳು ಅಳಿದವು. ಬಲಿಷ್ಠವಾದ ರಾಜಸತ್ತೆಯಿಲ್ಲದೆ ಜನಜೀವನ, ಸಂಸ್ಕೃತಿ ಏರುಪೇರಾಯಿತು. ಇಂಥ ತವಕತಲ್ಲಣದ ಕಾಲಘಟ್ಟದಲ್ಲಿ ದಕ್ಷಿಣ ಭಾರತದ ಹಿತರಕ್ಷಣೆಗಾಗಿ ವಿಜಯನಗರ ಸಾಮ್ರಾಜ್ಯವು ಉದಯಗೊಂಡು ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಣೆ ಹಾಗೂ ಪೋಷಣೆ ಮಾಡಿತು. ಸಾಮ್ರಾಜ್ಯವು ಮೂರು ಶತಮಾನಗಳ ಕಾಲ (1336–1646) ವೈಭವದಿಂದ ಮೆರೆಯಿತು.

ಈ ಪಾಠದಲ್ಲಿ ವಿಜಯನಗರದ ಪ್ರಮುಖ ರಾಜರ ಸಾಧನೆಗಳು ಮತ್ತು ಸಾಮ್ರಾಜ್ಯದ ಅವನತಿಗೆ ಕಾರಣವಾದ ರಕ್ಕಸತಂಗಡಿ ಕದನ (1565) ಹಾಗೂ ಅದರ ಪರಿಣಾಮಗಳನ್ನು ನಿರೂಪಿಸಲಾಗಿದೆ. ಜೊತೆಗೆ ಸಾಮ್ರಾಜ್ಯವು ಸಾಹಿತ್ಯ, ಕಲೆಗಳಿಗೆ ನೀಡಿರುವ ಕೊಡುಗೆಯನ್ನು ವಿವರಿಸಲಾಗಿದೆ.

ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದ (1336) ಅಲ್ಪಕಾಲದಲ್ಲೇ ಬಹಮನಿ ರಾಜ್ಯವು ಉದಯಿಸಿತು (1347). ಕೃಷ್ಣಾನದಿ ಈ ಎರಡೂ ರಾಜ್ಯಗಳ ಸಮಾನ ಎಲ್ಲೆ – ಕೃಷ್ಣೆಯ ಉತ್ತರದಲ್ಲಿ ಬಹಮನಿ ರಾಜ್ಯವಿದ್ದರೆ ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯವಿದ್ದಿತು. ಉತ್ತರದಲ್ಲಿ ಕೃಷ್ಣ ಮತ್ತು ದಕ್ಷಿಣದಲ್ಲಿ ತುಂಗಭದ್ರಾ ನದಿಗಳ ನಡುವಿನ ಪ್ರದೇಶವೇ ಫಲವತ್ತಾದ ರಾಯಚೂರು ದೋಅಬ್. ಈ ದೋಅಬ್‌ಗಾಗಿ ಎರಡೂ ಸಾಮ್ರಾಜ್ಯಗಳು ನಿರಂತರವಾಗಿ ಯುದ್ಧಗಳನ್ನು ನಡೆಸಿದ್ದವು. ಕಾಲಗತಿಯಲ್ಲಿ ಅಧಿಕಾರಕ್ಕಾಗಿ ಬಹಮನಿ ರಾಜ್ಯದಲ್ಲಿ ಅಂತಃಕಲಹಗಳು ನಡೆದು ಅದು ವಿಭಜನೆಗೊಂಡಿತು (1489). ಅದೇ ಪ್ರದೇಶದಲ್ಲಿ ಐದು ಷಾಹಿ ಮನೆತನಗಳು ತಲೆಯೆತ್ತಿದವು. ಅವುಗಳಲ್ಲಿ ವಿಜಯಪುರದ ಆದಿಲ್ ಷಾಹಿಗಳು ಪ್ರಮುಖರು.

ಈ ಪಾಠದಲ್ಲಿ ಬಹಮನಿ ರಾಜ್ಯದ ಸುಲ್ತಾನ್ ಫಿರೋಜ್‌ಷಾ ಹಾಗೂ ಆತನ ಪ್ರಸಿದ್ಧ ಮಂತ್ರಿ ಮಹಮ್ಮದ್ ಗವಾನನ ಸಾಧನೆಗಳನ್ನು ವಿವರಿಸಲಾಗಿದೆ. ಇದರೊಂದಿಗೆ ಬಹಮನಿ ರಾಜ್ಯದ ಮತ್ತು ಆದಿಲ್‌ಷಾಹಿಗಳ ಅವಿಸ್ಮರಣೀಯ ಕೊಡುಗೆಗಳನ್ನು ವರ್ಣಿಸಲಾಗಿದೆ.

© KTBS NOT TO BE REPUBLISHED

**ಸಾಮರ್ಥ್ಯಗಳು**

1 ಸಾಮ್ರಾಜ್ಯದ ಅರಸರು ಮಾಡಿರುವ ಸಾಧನೆಗಳನ್ನು ಅರ್ಥಮಾಡಿಕೊಳ್ಳುವುದು.
2 ವಿಜಯನಗರ ಕಾಲದ ಸಾಹಿತ್ಯ ಕೃತಿಗಳು, ಸಂಗೀತ, ವಾಸ್ತು, ಮೂರ್ತಿಶಿಲ್ಪಗಳ ಭವ್ಯತೆಯನ್ನು ಪ್ರಶಂಸೆ ಮಾಡುವುದರೊಂದಿಗೆ ಅವುಗಳ ರಕ್ಷಣೆಯ ನಿಟ್ಟಿನಲ್ಲಿ ಕೈಜೋಡಿಸುವುದು.
3 ವಿಜಯನಗರವು ಧರ್ಮ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ ಮಹತ್ವಪೂರ್ಣ ಕಾರ್ಯವನ್ನು ಮೆಚ್ಚಿಕೊಳ್ಳುವುದು.
4 ಭೂಪಟದಲ್ಲಿ ಸಾಮ್ರಾಜ್ಯದ ಮುಖ್ಯ ಸ್ಥಳಗಳನ್ನು ಗುರುತಿಸುವುದು.
5 ಫಿರೋಜ್‌ಷಾ ಮತ್ತು ಮಹಮ್ಮದ್ ಗವಾನ್ ಇವರ ಕೊಡುಗೆಗಳನ್ನು ತಿಳಿಯುವುದು.
6 ಬಹಮನಿ ಮತ್ತು ವಿಜಯಪುರ ಸುಲ್ತಾನರು ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿರುವ ಅಮೋಘ ಕೊಡುಗೆಗಳನ್ನು ಪ್ರಶಂಸಿಸುವುದು.
7 ಭೂಪಟದಲ್ಲಿ ಬಹಮನಿ ರಾಜ್ಯಕ್ಕೆ ಸಂಬಂಧಿಸಿದ ಮುಖ್ಯ ಐತಿಹಾಸಿಕ ಸ್ಥಳಗಳನ್ನು ಗುರುತಿಸುವುದು.



ವಿಜಯನಗರ ಸಾಮ್ರಾಜ್ಯದ ಲಾಂಛನ – ವರಾಹ

NOT TO BE REPUBLISHED © KTBS

ವಿಜಯನಗರ ಸಾಮ್ರಾಜ್ಯದ ಭೂಪಟವನ್ನು ನೋಡಿ. ಸಾಮ್ರಾಜ್ಯವು ಎಷ್ಟೊಂದು ವಿಶಾಲವಾಗಿದೆಯಲ್ಲವೇ? ಆ ಕಾಲದ ಜಗತ್ತಿನ ಬೃಹತ್ ಸಾಮ್ರಾಜ್ಯಗಳ ಪೈಕಿ ಅದು ಒಂದಾಗಿತ್ತು.

ದಿಲ್ಲಿ ಸುಲ್ತಾನರ ಸೈನಿಕ ಆಕ್ರಮಣಗಳ ಪರಿಣಾಮವಾಗಿ ದಕ್ಷಿಣ ಭಾರತದ ಗಣ್ಯ ರಾಜ್ಯಗಳು ಅಳಿದವು. ಇಲ್ಲಿನ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಜೀವನ ಅವನತಿ ಕಂಡಿತು. ಇಂತಹ ಸಂಕಟ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಗೊಂಡು ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸಿತು. ಸರ್ವಧರ್ಮಸಮಭಾವದಿಂದ ಸುಮಾರು ಮೂರು ಶತಮಾನಗಳ ಕಾಲ ಆಳ್ವಿಕೆ ನಡೆಸಿತು. ಬಳ್ಳಾರಿ ಜಿಲ್ಲೆಯ ಹಂಪಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು.

# ಕೃಷ್ಣದೇವರಾಯನ ಕಾಲದಲ್ಲಿನ ವಿಜಯನಗರ ಸಾಮ್ರಾಜ್ಯ
## (ಕ್ರಿ.ಶ. 16ನೇ ಶತಮಾನ)




©KTBS
NOT TO BE REPUBLISHED

## ಹರಿಹರ ಮತ್ತು ಬುಕ್ಕ

ಸಂಗಮನೆಂಬಾತನ ಪುತ್ರರು ತುಂಗಾಭದ್ರಾ ನದಿಯ ದಕ್ಷಿಣ ದಂಡೆಯ ಮೇಲೆ ಸಾಮ್ರಾಜ್ಯದ ಅಡಿಪಾಯ ಹಾಕಿದರು.

ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಇವರೇ ಸಂಗಮ ಸಹೋದರರು. ಸಾಮ್ರಾಜ್ಯವನ್ನು ಸಂಗಮ, ಸಾಳುವ, ತುಳುವ ಮತ್ತು ಅರವೀಡು ರಾಜವಂಶದ ರಾಜರು ಆಳಿದರು. ವರಾಹ ವಿಜಯನಗರದ ರಾಜಲಾಂಛನ. ಕುಲದೇವರು ಶ್ರೀವಿರೂಪಾಕ್ಷ. 'ಹಿಂದೂರಾಯ ಸುರತ್ರಾಣ' ಎಂಬುದು ಅರಸರ ಬಿರುದು.

ಹರಿಹರ ಮತ್ತು ಬುಕ್ಕ ವಿಜಯನಗರದ ಮೊದಲ ಇಬ್ಬರು ಅರಸರು. ಹರಿಹರನು ಹಂಪಿಯಲ್ಲಿ ಹೊಸ ರಾಜಧಾನಿಯನ್ನು ಕಟ್ಟಲು ಪ್ರಾರಂಭಿಸಿದನು.

ಹರಿಹರನ ಆಳ್ವಿಕೆಯ ಕಾಲದಲ್ಲೇ ಬಹಮನಿ ರಾಜ್ಯವು ಸ್ಥಾಪನೆಗೊಂಡಿತು. ಅಂದಿನಿಂದ ವಿಜಯನಗರದ ಅರಸರು ಮತ್ತು ಬಹಮನಿ ಸುಲ್ತಾನರ ನಡುವೆ ಆಗಾಗ ಯುದ್ಧಗಳು ನಡೆದವು.

## ಪ್ರೌಢದೇವರಾಯ (ಎರಡನೆಯ ದೇವರಾಯ)

ಸಂಗಮ ವಂಶದ ಪ್ರಸಿದ್ಧ ದೊರೆಯಾಗಿದ್ದ ಪ್ರೌಢದೇವರಾಯನ ಆಳ್ವಿಕೆಯು ವಿಜಯನಗರದ ಮಹತ್ವಪೂರ್ಣ ಕಾಲವಾಗಿದೆ. ಸಾಮ್ರಾಜ್ಯದ ಕೀರ್ತಿ ಎಲ್ಲೆಡೆ ಹರಡಿತು. ಆಂತರಿಕ ನೆಮ್ಮದಿ, ಸಮೃದ್ಧಿ ನೆಲೆಸಿತು. ವಾಣಿಜ್ಯವು ವೃದ್ಧಿಯಾಯಿತು.

ಪ್ರೌಢದೇವರಾಯನು ಗಡಿಪ್ರದೇಶದ ನಾಯಕರುಗಳ ದಂಗೆಯನ್ನು ಹತ್ತಿಕ್ಕಿದನು. ಸುಲ್ತಾನರ ವಿರುದ್ಧ ಹೋರಾಡಿ ಸಾಮ್ರಾಜ್ಯವನ್ನು ವಿಸ್ತರಿಸಿದನು. ಅಶ್ವಾರೋಹಿ ಮಹಮ್ಮದೀಯರನ್ನು ಸೈನ್ಯಕ್ಕೆ ಸೇರಿಸಿಕೊಂಡನು. ಪರ್ಷಿಯ ದೇಶದ ರಾಯಭಾರಿ ಅಬ್ದುರ್ ರಜಾಕ್, "ಇಡೀ ಭಾರತದಲ್ಲಿ ದೇವರಾಯನಂಥ ಅರಸನಿಲ್ಲ", ಎಂದು ಹೇಳಿರುವನಲ್ಲದೆ, "ರಾಯನ ಸೇನೆ ಲಕ್ಷಾವಧಿ ಸಂಖ್ಯೆಯಲ್ಲಿದೆ", ಎಂದಿದ್ದಾನೆ.

ದೇವರಾಯನು ಸಮರ್ಥ ಆಡಳಿತಗಾರ, ಧೀರ ಯೋಧ ಹಾಗೂ ವಿದ್ವಾಂಸನಾಗಿದ್ದನು. ಹಂಪಿಯ ಮನಮೋಹಕ ಹಜಾರ ರಾಮಸ್ವಾಮಿ ದೇವಾಲಯವನ್ನು ಕಟ್ಟಿಸಿದವನು ಈತನೇ. ಪರಧರ್ಮಸಹಿಷ್ಣುತೆ ದೇವರಾಯನ ಧರ್ಮನೀತಿಯಾಗಿತ್ತು. ಇವನು ರಾಜಧಾನಿಯಲ್ಲಿ ಮಸೀದಿಯನ್ನು ನಿರ್ಮಿಸಿದನು. ಈತನ ಕಾಲದಲ್ಲಿ ಜೈನ ಮತ್ತು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು. ವೀರಶೈವ ಪಂಥ ಏಳಿಗೆ ಕಂಡಿತು. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿಪುಲವಾದ ಸಾಹಿತ್ಯ ರಚನೆಯಾಯಿತು.

NOT TO BE REPUBLISHED ©KTBS

## ಕೃಷ್ಣದೇವರಾಯ

ತುಳುವ ವಂಶದ ಕೃಷ್ಣದೇವರಾಯ – ಘನವಂತ ಚಕ್ರವರ್ತಿ ಹಾಗೂ ಮಹಾಶೂರ. ಈತನ ಕಾಲದಲ್ಲಿ ಸಾಮ್ರಾಜ್ಯದ ಎಲ್ಲೆಗಳು ಉತ್ತರದಲ್ಲಿ ಕೃಷ್ಣಾ ನದಿಯವರೆಗೂ ಉಳಿದೆಡೆ ಸಮುದ್ರ ತೀರಗಳವರೆಗೂ ವ್ಯಾಪಿಸಿದ್ದುವು.


ತನ್ನ ಪತ್ನಿಯರೊಂದಿಗೆ ಕೃಷ್ಣದೇವರಾಯ - ಕಂಚುಶಿಲ್ಪ

**ಸಾಧನೆಗಳು:** ಕೃಷ್ಣದೇವರಾಯನು ಉತ್ತಮ ಆಡಳಿತಗಾರನಾಗಿದ್ದನು. ಸರ್ಕಾರದ ಆದಾಯದ ಕಾಲು ಭಾಗವನ್ನು ದಾನಧರ್ಮ ಮತ್ತು ಜನಕಲ್ಯಾಣ ಕಾರ್ಯಕ್ಕಾಗಿ ಬಳಸುತ್ತಿದ್ದನು. ಇವನ ಕಾಲದಲ್ಲಿ ಕೃಷಿ ಮತ್ತು ವ್ಯಾಪಾರ ಅಭಿವೃದ್ಧಿ ಹೊಂದಿದವು ಮತ್ತು ವಸ್ತುಗಳು ಅಗ್ಗವಾಗಿದ್ದುವು.

ಕೃಷ್ಣದೇವರಾಯನು ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ವಿದ್ವಾಂಸನಾಗಿದ್ದನು. ಈತನು ತೆಲುಗಿನಲ್ಲಿ "ಅಮುಕ್ತ ಮಾಲ್ಯ" ಮತ್ತು ಸಂಸ್ಕೃತದಲ್ಲಿ "ಜಾಂಬವತಿ ಕಲ್ಯಾಣ" ಎಂಬ ಕೃತಿಗಳನ್ನು ರಚಿಸಿದನು. "ಕನ್ನಡ ರಾಜ್ಯರಮಾರಮಣ" ಎಂಬುದು ಈತನ ಬಿರುದು.

©KTBS NOT TO BE REPUBLISHED

## ರಾಮರಾಯ

ಬಹುಕಾಲ ವೈಭವದಿಂದ ಮೆರೆದ ವಿಜಯನಗರ ಸಾಮ್ರಾಜ್ಯವು ಕೃಷ್ಣದೇವರಾಯನ ಆಳ್ವಿಕೆಯ ಅನಂತರ ದುರ್ಬಲಗೊಂಡಿತು. ಸಾಮ್ರಾಜ್ಯವನ್ನು ಮತ್ತೊಮ್ಮೆ ವೈಭವಕ್ಕೇರಿಸಿದ ಕೀರ್ತಿ ಕೃಷ್ಣದೇವರಾಯನ ಅಳಿಯನಾದ ರಾಮರಾಯನಿಗೆ ಸಲ್ಲುತ್ತದೆ. ಈತನು ಸಮರ್ಥ ಸೇನಾನಿ ಹಾಗೂ ಉತ್ತಮ ಆಡಳಿತಗಾರನಾಗಿದ್ದನು.

## ರಕ್ಕಸತಂಗಡಿ ಯುದ್ಧ

**ಕಾರಣ :** ಈ ಮಧ್ಯೆ ಬಹಮನಿ ರಾಜ್ಯವು ದುರ್ಬಲಗೊಳ್ಳುತ್ತ ಐದು ರಾಜ್ಯಗಳಾಗಿ ವಿಂಗಡಣೆಗೊಂಡವು. ಈ ರಾಜ್ಯಗಳ ಸುಲ್ತಾನರು ತಮ್ಮ ಒಳಜಗಳಗಳಲ್ಲಿ ಪಾಲ್ಗೊಳ್ಳಲು ರಾಮರಾಯನನ್ನು ಆಮಂತ್ರಿಸಿದರು. ಇದರ ಲಾಭವನ್ನು ಪಡೆದು ರಾಮರಾಯನು

ಸಾಮ್ರಾಜ್ಯವನ್ನು ಕೃಷ್ಣೆಯ ಉತ್ತರಕ್ಕೂ ವಿಸ್ತರಿಸಿದನು. ಇದು ಕದನಕ್ಕೆ ಪ್ರಚೋದನೆ ನೀಡಿತು. ಜೊತೆಗೆ ಷಾಹಿ ಸುಲ್ತಾನರು ವಿಜಯನಗರದ ಸಮೃದ್ಧಿಯ ಬಗ್ಗೆ ಮತ್ಸರ ಪಟ್ಟರು. ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಅವರು ಒಂದಾದರು. ಸುಲ್ತಾನರ ಒಕ್ಕೂಟ ವಿಜಯ ನಗರದದ ವಿರುದ್ಧ ಯುದ್ಧ ಸಾರಿತು. ಈ ಯುದ್ಧವನ್ನು ರಕ್ಕಸತಂಗಡಿ ಕದನ ಎನ್ನುವರು. ದಕ್ಷಿಣ ಭಾರತದ ಇತಿಹಾಸದಲ್ಲೇ ಅತಿ ಭೀಕರವಾದ ಕದನ ಇದಾಗಿತ್ತು. ಈ ಕದನದ ರಣರಂಗವು ಕೃಷ್ಣಾತೀರದ ರಕ್ಕಸಗಿ ಮತ್ತು ತಂಗಡಗಿ ಎಂಬ ಗ್ರಾಮಗಳ ನಡುವೆ ಇತ್ತು.

ವಯಸ್ಸು ಎಂಬತ್ತಾದರೂ ರಾಮರಾಯನು ಆತ್ಮವಿಶ್ವಾಸದಿಂದ ವೈರಿಗಳನ್ನು ಎದುರಿಸಿದನು. ಯುದ್ಧದ ಮೊದಲ ಹಂತದಲ್ಲಿ ವಿಜಯನಗರವೇ ಗೆದ್ದಿತು. ಆದರೆ ವೈರಿಗಳಿಂದ ಒಮ್ಮೆಗೇ ಆದ ತೋಪಿನ ಹೊಡೆತದಿಂದ ವಿಜಯನಗರದ ಸೇನೆ ದಿಕ್ಕುಪಾಲಾಯಿತು. ಈ ನಡುವೆ ರಾಮರಾಯನ ಮಹಮ್ಮದೀಯ ದಳಪತಿಗಳಿಬ್ಬರು ತಮ್ಮ ಕೈಕೆಳಗಿದ್ದ ಸೈನಿಕ ಪಡೆಯೊಂದಿಗೆ ಶತ್ರುಗಳ ಜೊತೆಗೂಡಿ ದ್ರೋಹಗೈದರು. ರಾಮರಾಯನ ಕೊಲೆ ನಡೆಯಿತು. ವಿಜಯನಗರದ ಸೈನಿಕರು ರಣರಂಗದಿಂದ ಕಾಲ್ಕಿತ್ತರು.

ರಾಮರಾಯನ ತಮ್ಮ ತಿರುಮಲನು ರಾಜಧಾನಿಗೆ ಧಾವಿಸಿ, ಅಪಾರ ಸಂಪತ್ತನ್ನು ಆನೆಗಳ ಮೇಲೆ ಹೇರಿಕೊಂಡು ಆಂಧ್ರಪ್ರದೇಶದ ಪೆನುಗೊಂಡದತ್ತ ಧಾವಿಸಿದನು. ರಕ್ಷಕರಿಲ್ಲದ ರಾಜಧಾನಿ ಶತ್ರುಗಳ ವಶವಾಯಿತು. ಸುಲ್ತಾನರ ಸೈನ್ಯವು ವಿಜಯನಗರದ ಸಂಪತ್ತನ್ನು ಕೊಳ್ಳೆ ಹೊಡೆಯಿತು. ಮುಂದೆ ಪೆನುಗೊಂಡ, ಚಂದ್ರಗಿರಿ, ಕೊನೆಗೆ ವೆಲ್ಲೂರು ಇವನ್ನು ರಾಜಧಾನಿ ಮಾಡಿಕೊಂಡು ಅರವೀಡು ವಂಶದ ಆಡಳಿತ 1646ರವರೆಗೆ ನಡೆಯಿತು.

© KTBS NOT TO BE REPUBLISHED

**ಪರಿಣಾಮಗಳು:** ವಿಜಯನಗರ ಸಾಮ್ರಾಜ್ಯದ ಅವನತಿಯಿಂದಾಗಿ ದಕ್ಷಿಣ ಭಾರತದಲ್ಲಿ ಅನೇಕ ಮಹತ್ವದ ರಾಜಕೀಯ ಬದಲಾವಣೆಗಳಾದವು. ಸಾಮ್ರಾಜ್ಯದ ಉತ್ತರ ಭಾಗವು ವಿಜಯಪುರ ಮತ್ತು ಗೋಲ್ಕೊಂಡ ರಾಜ್ಯಗಳ ವಶವಾದವು. ಕರ್ನಾಟಕದಲ್ಲಿ ಕೆಳದಿ, ಮೈಸೂರು, ಚಿತ್ರದುರ್ಗ ಮುಂತಾದ ಸಾಮಂತರಾಜರು ಸ್ವತಂತ್ರರಾದರು.

## ಪ್ರವಾಸಿಗರು ಕಂಡ ರಾಜಧಾನಿಯ ವೈಭವ

ವಿಜಯನಗರ ರಾಜಧಾನಿ ಹಂಪೆಗೆ ಬಂದಿದ್ದ ಅನೇಕ ಮಂದಿ ವಿದೇಶಿ ಯಾತ್ರಿಕರು ಅಲ್ಲಿನ ವೈಭವ ಹಾಗೂ ಆರ್ಥಿಕ ಸಮೃದ್ಧಿಯನ್ನು ಮನಸಾರೆ ಕೊಂಡಾಡಿದ್ದಾರೆ.

◆ ರಾಜಧಾನಿಯನ್ನು ಕುರಿತು ಪೋರ್ಚುಗೀಸ್ ಯಾತ್ರಿಕ ಡೊಮಿಂಗೋ ಪಾಯಿಸ್, "ಎಲ್ಲ ಬಗೆಯ ಸರಕುಗಳಿಂದ ಸಮೃದ್ಧವಾದ ಇಂಥ ನಗರಿಯು ಭೂಮಂಡಲದ ಮೇಲೆ ಬೇರೊಂದೆಡೆ ಇಲ್ಲ" ಎಂದಿದ್ದಾನೆ. ಎಲ್ಲಾ ನಮೂನೆಯ ಮುತ್ತು, ಮಾಣಿಕ್ಯ ರತ್ನ, ಪಚ್ಚೆ, ಇಂದ್ರನೀಲ, ಬೆಲೆಯುಳ್ಳ ಬಟ್ಟೆ ಮುಂತಾದವು ಇಲ್ಲಿ ದೊರೆಯುತ್ತಿದ್ದವು ಎಂಬುದಾಗಿ ಬರೆದಿದ್ದಾನೆ.

◆ ರಾಜಧಾನಿಯನ್ನು ಸಂದರ್ಶಿಸಿದ್ದ ಪರ್ಷಿಯ (ಇರಾನ್) ದೇಶದ ರಾಯಭಾರಿ ಅಬ್ದುಲ್ ರಜಾಕ್ ದೇವರಾಯನ ಘನತೆಯನ್ನು ಮನಸಾರೆ ಕೊಂಡಾಡಿದ್ದಾನೆ. "ಭೂಮಂಡಲದ ಮೇಲೆ ವಿಜಯನಗರದಂತಹ ಇನ್ನೊಂದು ನಗರವನ್ನು ಕಣ್ಣುಗಳು ನೋಡಿಲ್ಲ, ಕಿವಿಗಳು ಕೇಳಿಲ್ಲ", ಎಂದು ಉದ್ಗರಿಸಿದ್ದಾನೆ.

## ಸಮಾಜ, ಆರ್ಥಿಕತೆ ಮತ್ತು ಸಂಸ್ಕೃತಿ

**ಸಮಾಜ:** ಗ್ರಾಮಸಭೆಯಲ್ಲಿ ಎಲ್ಲ ಜಾತಿಯ ಸದಸ್ಯರಿಗೆ ಪ್ರಾತಿನಿಧ್ಯವಿತ್ತು. ಪಟ್ಟಣಗಳಲ್ಲಿ ಹಂಜಮಾನ ಎಂಬ ಮುಸಲ್ಮಾನರ ಸಂಸ್ಥೆಯಿದ್ದು ಅವರ ಪ್ರತಿನಿಧಿಗಳಿಗೆ ನಗರದ ಗಣ್ಯರ ಸಭೆಯಲ್ಲಿ ಸ್ಥಾನಮಾನವಿತ್ತು.

ಸ್ತ್ರೀಯರು ರಾಣಿವಾಸದೊಳಗಿನ ಲೆಕ್ಕಪತ್ರ ಬರೆಯುವುದು, ಕಾವಲು ಕೆಲಸ, ರಾಜರಾಣಿಯರ ಸೇವೆ ಮುಂತಾದವುಗಳನ್ನು ಮಾಡುತ್ತಿದ್ದರು. ಸಾರ್ವಜನಿಕ ಪ್ರದರ್ಶನಗಳನ್ನು ನೀಡುತ್ತಿದ್ದ ಜಟ್ಟಿಗಿತ್ತಿಯರೂ ವಿಜಯನಗರದಲ್ಲಿದ್ದರು. ಜನಪ್ರಿಯವಾಗಿದ್ದ ನವರಾತ್ರಿ ಉತ್ಸವವನ್ನು ರಾಜಧಾನಿಯ ಮಹಾನವಮಿ ದಿಬ್ಬದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು.

**ಆರ್ಥಿಕತೆ:** ಕೃಷಿಯೇ ಬಹುತೇಕ ಜನರ ಉದ್ಯೋಗವಾಗಿತ್ತು. ವಿಜಯನಗರವು ಅಂತಾರಾಷ್ಟ್ರೀಯ ವ್ಯಾಪಾರದ ಕೇಂದ್ರವಾಗಿತ್ತು. ಜಗತ್ತಿನ ನಾನಾ ಕಡೆಯ ವ್ಯಾಪಾರಿಗಳೂ ಇಲ್ಲಿಗೆ ಬರುತ್ತಿದ್ದರು. ಅಂಗಡಿಗಳಲ್ಲಿ ಮುತ್ತು ರತ್ನಗಳನ್ನು ರಾಶಿರಾಶಿಯಾಗಿ ಮಾರುತ್ತಿದ್ದರೆಂದು ವಿದೇಶಿ ಪ್ರವಾಸಿಗಳು ವರ್ಣಿಸಿದ್ದಾರೆ. ಸಾಮ್ರಾಜ್ಯದ ಪಶ್ಚಿಮ ಹಾಗೂ ಪೂರ್ವ ಕರಾವಳಿಗಳಲ್ಲಿದ್ದ ಹಲವಾರು ಬಂದರುಗಳ ಮೂಲಕ ಸರಕುಗಳನ್ನು ರಫ್ತು ಮತ್ತು ಆಮದು ಮಾಡಲಾಗುತ್ತಿತ್ತು.

**ಧರ್ಮ:** ಎಲ್ಲಾ ಮತಧರ್ಮಗಳು ಸಾಮ್ರಾಜ್ಯದಿಂದ ದಾನದತ್ತಿ ಪಡೆಯುತ್ತಿದ್ದವು. ಯಾರಿಗೇ ಆಗಲಿ ತಮ್ಮ ಮತವನ್ನು ಅಡಚಣೆ ಇಲ್ಲದೇ ಆಚರಿಸುವ ಸ್ವಾತಂತ್ರ್ಯವನ್ನು ಅರಸರು ನೀಡಿದ್ದರು. ವಿಜಯನಗರದಲ್ಲಿ ಮುಸ್ಲಿಮರಿಗಾಗಿ ಮಸೀದಿಗಳನ್ನು ಕಟ್ಟಿಸಲಾಯಿತು. ಅವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಗಿತ್ತು. ಪೋರ್ಚುಗೀಸರ ಸಂಗಡ ವ್ಯಾಪಾರ ವೃದ್ಧಿಸಿಕೊಂಡ ವಿಜಯನಗರದ ಅರಸರು ಕ್ರೈಸ್ತ ರಿಲಿಜನ್‌ಗೂ ಪ್ರೋತ್ಸಾಹಕೊಟ್ಟರು.

**ಸಾಹಿತ್ಯ :** ವಿಜಯ ನಗರ ಕಾಲದಲ್ಲಿ ಸಂಸ್ಕೃತ, ಕನ್ನಡ ಮತ್ತು ತೆಲಗು ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಕನ್ನಡದ ಶ್ರೇಷ್ಠ ಕವಿಗಳಾದ ಕುಮಾರವ್ಯಾಸ, ಚಾಮರಸ ಮತ್ತು ರತ್ನಾಕರವರ್ಣಿ ಇದೇ ಕಾಲದವರು. ವಿಜಯನಗರ ಕಾಲವು ತೆಲುಗು ಸಾಹಿತ್ಯದ "ಸುವರ್ಣಯುಗ"ವಾಗಿತ್ತು.

ಕುಮಾರವ್ಯಾಸ (ನಾರಣಪ್ಪ) ರಸಾವೇಶದಿಂದ ಕೂಡಿದ ಕವಿ. 'ಕರ್ಣಾಟಭಾರತ ಕಥಾಮಂಜರಿ' ಈತನ ಕೃತಿ. ಚಾಮರಸನ 'ಪ್ರಭುಲಿಂಗಲೀಲೆ' ಅಲ್ಲಮಪ್ರಭುವಿನ ಚರಿತ್ರೆಯಾಗಿದೆ. ಇದೊಂದು ಮಹತ್ವದ ಗ್ರಂಥ. ರತ್ನಾಕರವರ್ಣಿಯ 'ಭರತೇಶ ವೈಭವ' ಮನಮೋಹಕ ಶೈಲಿಯ ಕೃತಿ.

© KTBS NOT TO BE REPUBLISHED

**ಸಂಗೀತ:** ವಿಜಯನಗರದ ಅರಸರು ನೃತ್ಯಕಲೆ, ಚಿತ್ರಕಲೆ ಹಾಗೂ ಸಂಗೀತವನ್ನು ವಿಶೇಷವಾಗಿ ಪ್ರೋತ್ಸಾಹಿಸಿದರು. ಆ ಕಾಲದಿಂದ ಕರ್ನಾಟಕ ಸಂಗೀತ ಎಂಬ ಹೆಸರು ಪ್ರಚಲಿತವಾಯಿತು. ಸಂತರು ಸಂಗೀತವನ್ನು ಬಳಸಿ ಭಕ್ತಿಮಾರ್ಗವನ್ನು ಬೋಧಿಸಿದರು. ಈ ಮಾರ್ಗವನ್ನು 'ದಾಸಪಂಥ'ವೆನ್ನುವರು. ದಾಸರಲ್ಲಿ ಪುರಂದರದಾಸರು ಮತ್ತು ಕನಕದಾಸರು ಪ್ರಮುಖರು.

ಲಕ್ಷಾಂತರ ಕೀರ್ತನೆಗಳನ್ನು ರಚಿಸಿದ ಪುರಂದರದಾಸರು 'ಕರ್ನಾಟಕ ಸಂಗೀತ ಪಿತಾಮಹ' ಎನಿಸಿಕೊಂಡರು. ಕನಕದಾಸರು ಜನಸಾಮಾನ್ಯರಿಂದ ಮೂಡಿಬಂದ ಕವಿ. 'ಮೋಹನ ತರಂಗಿಣಿ', 'ರಾಮಧಾನ್ಯ ಚರಿತ್ರೆ', 'ನಳಚರಿತ್ರೆ' ಮತ್ತು 'ಹರಿಭಕ್ತಿಸಾರ' ಇವರ ಪ್ರಮುಖ ಕೃತಿಗಳು.

**ಚಟುವಟಿಕೆ :** ಕರ್ನಾಟಕದಲ್ಲಿ ಭಕ್ತಿಪಂಥವನ್ನು ಪ್ರತಿಪಾದಿಸಿದ ಹರಿದಾಸರ ಕುರಿತು ಮಾಹಿತಿ ಸಂಗ್ರಹಿಸಿ ಒಂದು ಪುಟದಷ್ಟು ಪ್ರಬಂಧವನ್ನು ಬರೆಯಿರಿ.

**ಶಿಲ್ಪಕಲೆ:** ವಿಜಯನಗರದ ಕಾಲದಲ್ಲಿ ಕಟ್ಟಡ ರಚನೆಯನ್ನು ಕಣಶಿಲೆಯಿಂದ (ಗ್ರ್ಯಾನೈಟ್) ಮಾಡಲಾಯಿತು. ದಕ್ಷಿಣ ಭಾರತದ ಹಿಂದಿನ ಎಲ್ಲ ದೇವಾಲಯಗಳಿಗೆ ಎತ್ತರದ ರಾಯಗೋಪುರ, ಸುಂದರ ಕಲ್ಯಾಣ ಮಂಟಪಗಳನ್ನು ಒದಗಿಸಲಾಯಿತು. ಹೀಗೆ ನೂರಾರು ಕಡೆ ಇಂಥ ರಚನೆಗಳು ಸಾವಿರಾರು ಕೈಗಳಿಗೆ ದುಡಿಮೆ ನೀಡಿದವು.

**ಹಂಪಿ:** ಹಜಾರ ರಾಮಸ್ವಾಮಿ, ವಿಜಯ ವಿಠಲಸ್ವಾಮಿ, ಕೃಷ್ಣಸ್ವಾಮಿ, ಅಚ್ಯುತರಾಯ ಮುಂತಾದ ಸುಂದರ ದೇವಾಲಯಗಳು ಹಂಪಿಯಲ್ಲಿವೆ. ವಿಠಲಸ್ವಾಮಿ ದೇವಾಲಯದ ಕಿರುಸ್ತಂಭಗಳನ್ನು ತಟ್ಟಿದರೆ ಸಪ್ತಸ್ವರಗಳು ಹೊರಡುತ್ತವೆ.

© KTBS NOT TO BE REPUBLISHED



**ಹಜಾರ ರಾಮಸ್ವಾಮಿ ದೇವಾಲಯ, ಹಂಪಿ**

◆ ಶೃಂಗೇರಿಯ ವಿದ್ಯಾಶಂಕರ ದೇವಾಲಯ, ರಾಮೇಶ್ವರ ದೇವಾಲಯದ ಸಾವಿರ ಕಂಬಗಳ ಮಂಟಪ ಮತ್ತು ಮೂಡಬಿದಿರೆಯ ಸಾವಿರ ಕಂಬದ ಬಸದಿ (ತ್ರಿಭುವನ ತಿಲಕ ಚೂಡಾಮಣಿ) ವಿಜಯನಗರ ಕಾಲದ್ದು.



**ವಿದ್ಯಾಶಂಕರ ದೇವಾಲಯ, ಶೃಂಗೇರಿ**

◆ ಏಕಶಿಲಾ ವಿಗ್ರಹಗಳು: ಇದೇ ಕಾಲದಲ್ಲಿ ಭಾರಿ ಗಾತ್ರದ ಏಕಶಿಲಾ ವಿಗ್ರಹಗಳನ್ನು ಕೆತ್ತುವ ಶೈಲಿ ರೂಢಿಗೆ ಬಂದಿತು. ಹಂಪಿಯಲ್ಲಿರುವ ಅಂಥ ಶಿಲ್ಪಗಳೆಂದರೆ – ಸಾಸಿವೆಕಾಳು ಗಣೇಶ, ಕಡಲೇಕಾಳು ಗಣೇಶ ಹಾಗೂ ಲಕ್ಷ್ಮೀನರಸಿಂಹ. ವಿಠಲಸ್ವಾಮಿ ದೇವಾಲಯದ ಮುಂಭಾಗದಲ್ಲಿರುವ ಏಕಶಿಲಾರಥ ಅತ್ಯಂತ ಸುಂದರವಾಗಿದೆ. ಇದು ಗರುಡನ ಗುಡಿಯಾಗಿದೆ. ಕಾರ್ಕಳ ಮತ್ತು ವೇಣೂರಿನಲ್ಲಿ ಬಾಹುಬಲಿಯ ಏಕಶಿಲಾ ವಿಗ್ರಹಗಳು ಶಿಲ್ಪಕೌಶಲ್ಯಕ್ಕೆ ಸಾಕ್ಷಿಯಾಗಿವೆ.

@KTBS
BE REPUBLISHED




**ಸಾಸಿವೆಕಾಳು ಗಣೇಶ, ಹಂಪಿ**



**ಲಕ್ಷ್ಮೀನರಸಿಂಹ, ಹಂಪಿ**



**ಕಲ್ಲಿನ ರಥ, ಹಂಪಿ**

## ಬಹಮನಿ ರಾಜ್ಯ



**ಕೋಟೆ, ಬೀದರ್**

@KTBS NOT TO BE REPUBLISHED

ಬೀದರ್ ನಗರವು ಕರ್ನಾಟಕ ಉತ್ತರದ ತುತ್ತ ತುದಿಯಲ್ಲಿರುವ ಒಂದು ಐತಿಹಾಸಿಕ ಸ್ಥಳ. ಅದು ಒಂದು ಶತಮಾನ ಕಾಲ ಬಹಮನಿ ಸುಲ್ತಾನರ ರಾಜಧಾನಿಯಾಗಿ ಮೆರೆಯಿತು. ಹಿಂದಿನ ಪುಟದಲ್ಲಿ ಅಲ್ಲಿರುವ ಭವ್ಯ ರಚನೆಯೊಂದನ್ನು ನೋಡಿ.

ಬಹಮನಿ ರಾಜ್ಯದ ಭೂಪಟವನ್ನು ನೋಡಿ. ರಾಜ್ಯವು ಈಗಿನ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ಭಾಗಗಳನ್ನು ಒಳಗೊಂಡಿತ್ತು. ಕೃಷ್ಣಾನದಿ ರಾಜ್ಯದ ದಕ್ಷಿಣದ ಗಡಿ. ಪ್ರಾರಂಭದಲ್ಲಿ ಕಲಬುರಗಿ, ಅನಂತರ ಬೀದರ್ ಅದರ ರಾಜಧಾನಿಯಾಗಿತ್ತು.




© KTBS NOT TO BE REPUBLISHED

ಬಹುಮನಿ ಮತ್ತು ವಿಜಯನಗರ ನೆರೆಹೊರೆಯ ರಾಜ್ಯಗಳಾಗಿದ್ದು ಅವುಗಳೊಳಗೆ ಆಗಾಗ ಸಂಘರ್ಷಗಳು ನಡೆಯುತ್ತಲೇ ಇದ್ದುವು.

### ಫಿರೂಜ್‌ಷಾ

ಫಿರೂಜ್‌ಷಾ ಬಹಮನಿ ವಂಶದಲ್ಲೇ ಶ್ರೇಷ್ಠನಾದ ಅರಸು. ಇವನು ನ್ಯಾಯಪರ, ಉದಾರಿ ಹಾಗೂ ದೈವಭಕ್ತ.

ಲೇಖಕನೂ ಬಹುಭಾಷಾವಿಶಾರದನೂ ಆಗಿದ್ದ ಫಿರೂಜನಿಗೆ ರೇಖಾಗಣಿತ ಮತ್ತು ಧರ್ಮಶಾಸ್ತ್ರಗಳಲ್ಲಿ ಪರಿಣತಿ ಇತ್ತು. ಇವನು ದೌಲತಾಬಾದ್‌ನಲ್ಲಿ (ಮಹಾರಾಷ್ಟ್ರ) ಆಕಾಶ ವೀಕ್ಷಣಾಲಯವನ್ನು ಸ್ಥಾಪಿಸಿದ್ದ. ಈತನು ರಾಜಧಾನಿ ಕಲಬುರಗಿಯ ಸೌಂದರ್ಯವನ್ನು ಹೆಚ್ಚಿಸಿದನಲ್ಲದೆ ಭೀಮಾ ನದಿಯ ತಟದಲ್ಲಿ ಫಿರೋಜಾಬಾದ್ ಎಂಬ ಹೊಸ ನಗರವನ್ನು ಕಟ್ಟಿಸಿದ. ಇವನ ಕಾಲದಲ್ಲಿ ರಾಜ್ಯಕ್ಕೆ ಬಂದಿದ್ದ ಸೂಫಿ ಸಂತ ಬಂದೇನವಾಜರಿಗೆ ಹಲವು ಗ್ರಾಮಗಳನ್ನು ಉಂಬಳಿಯಾಗಿ ನೀಡಿದನು. ಬಂದರುಗಳ ವಿಕಾಸಕ್ಕೆ ವಿಶೇಷ ಗಮನವಿತ್ತ. ಇದರಿಂದ ವಿದೇಶಿ ವ್ಯಾಪಾರಕ್ಕೆ ಪ್ರೋತ್ಸಾಹ ಸಿಕ್ಕಿತು.

### ಮಹಮ್ಮದ್ ಗವಾನ್

ಬಹಮನಿ ರಾಜ್ಯದ ಇತಿಹಾಸದಲ್ಲಿ ಅದನ್ನಾಳಿದ ಸುಲ್ತಾನರಿಗಿಂತಲೂ ಹೆಚ್ಚು ಖ್ಯಾತಿಗಳಿಸಿದವನು ಮಹಮ್ಮದ್ ಗವಾನ್. ಪರ್ಷಿಯನ್ ಮೂಲದ ಇವನು ಮೂರನೇ ಮಹಮ್ಮದ್ ಸುಲ್ತಾನನ ಮುಖ್ಯಮಂತ್ರಿಯಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದನು.

### ಸಾಧನೆಗಳು

- ಗವಾನ್ ಯುದ್ಧವಿದ್ಯೆಯಲ್ಲಿ ನಿಪುಣನಾಗಿದ್ದು ರಾಜ್ಯವನ್ನು ವಿಸ್ತರಣೆ ಮಾಡಿದನು.
- ಆಡಳಿತವು ಇಸ್ಲಾಮೀ ಕಾನೂನುಗಳನ್ನು ಆಧರಿಸಿತ್ತು.
- ಕಂದಾಯ ಮತ್ತು ಅಂಚೆ ವ್ಯವಸ್ಥೆಯನ್ನು ಚುರುಕುಗೊಳಿಸಿದನು.
- ಭೂಮಿಯ ಫಲವತ್ತತೆ, ನೀರಾವರಿ ಸೌಲಭ್ಯಗಳನ್ನು ಗಮನಿಸಿ ಭೂಕಂದಾಯವನ್ನು ನಿಗದಿ ಮಾಡಿದನು.
- ಜನರಿಗೆ ಕಿರುಕುಳ ಕೊಡುವ ತೆರಿಗೆಗಳನ್ನು ರದ್ದುಪಡಿಸಿದನು.
- ಸ್ವತಃ ವಿದ್ವಾಂಸನಾಗಿದ್ದ ಮಹಮ್ಮದ್ ಗವಾನ್ ಬೀದರ್‌ನಲ್ಲಿ ಮದರಸಾ (ಮಹಾವಿದ್ಯಾಲಯ) ಸ್ಥಾಪಿಸಿದನು. ಇದು ಇಸ್ಲಾಂ ಮತ್ತು ಕಾನೂನು ಶಿಕ್ಷಣವನ್ನು ಪ್ರೋತ್ಸಾಹಿಸಿತು. ಇಲ್ಲಿ

© KTBS NOT TO BE REPUBLISHED

ಖಗೋಳಶಾಸ್ತ್ರ, ಗಣಿತ, ಇತಿಹಾಸ ಇತ್ಯಾದಿಗಳ ಅಧ್ಯಯನ ಕೂಡ ನಡೆಯುತ್ತಿತ್ತು. ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ವಿದ್ಯಾರ್ಥಿನಿಲಯದ ಸೌಕರ್ಯಗಳಿದ್ದವು. ಮದರಸಾದ ಗ್ರಂಥಾಲಯದಲ್ಲಿ ಸುಮಾರು 3000 ಹಸ್ತಪ್ರತಿಗಳಿದ್ದವು.

ಒಟ್ಟಿನಲ್ಲಿ ಬಹಮನಿ ರಾಜ್ಯದ ಮುನ್ನಡೆಗೆ ಮಹಮ್ಮದ್ ಗವಾನ್ ಶ್ರೇಷ್ಠ ಕೊಡುಗೆ ನೀಡಿದನು. ಹೀಗಿದ್ದರೂ ರಾಜ್ಯದ ಸರದಾರರು ಗವಾನನ ಸಾಧನೆಗಳನ್ನು ಕಂಡು ಮತ್ಸರಪಟ್ಟರು. ಒಳಸಂಚು ನಡೆಸಿ ಈತನನ್ನು ಕೊಲ್ಲಿಸಿದರು. ಗವಾನನ ಸಮಾಧಿಯ ಮೇಲೆ, "ಮುಗ್ಧ ಗವಾನನನ್ನು ಕೊಲೆ ಮಾಡಲಾಯಿತು" ಎಂಬ ಉಲ್ಲೇಖವಿದೆ.

ಗವಾನನ ನಂತರ ಅಧಿಕಾರಕ್ಕಾಗಿ ಅಂತಃಕಲಹಗಳು ನಡೆದು ರಾಜ್ಯವು ವಿಭಜನೆಗೊಂಡು ಐದು ಹೊಸ ರಾಜ್ಯಗಳು ಹುಟ್ಟಿದವು.

ಈ ಐದು ರಾಜ್ಯಗಳೆಂದರೆ ◆ ಬಿಜಾಪುರದ ಆದಿಲ್‌ಷಾಹಿ ◆ ಬೀದರಿನ ಬರೀದ್‌ಷಾಹಿ ◆ ಗೋಲ್ಕೊಂಡದ ಕುತುಬ್‌ಷಾಹಿ ◆ ಅಹ್ಮದ್‌ನಗರದ ನಿಜಾಂಷಾಹಿ ಹಾಗೂ ◆ ಬಿರಾರಿನ ಇಮದ್‌ಷಾಹಿ. ಈ ಪೈಕಿ ಮೊದಲ ಎರಡು ಕರ್ನಾಟಕದಲ್ಲಿ ರಾಜಧಾನಿಗಳನ್ನು ಹೊಂದಿದ್ದವು.

©KTBS NOT TO BE REPUBLISHED

### ಸಮಾಜ

ಬಹಮನಿ ರಾಜ್ಯದ ಆಡಳಿತವು ಇಸ್ಲಾಮೀ ಕಾನೂನುಗಳ ಪ್ರಕಾರ ನಡೆಯುತ್ತಿತ್ತು. ಸುಲ್ತಾನನು ಆಡಳಿತದ ಪ್ರಮುಖನಷ್ಟೇ ಅಲ್ಲ, ಶ್ರೇಷ್ಠ ನ್ಯಾಯಾಧೀಶ, ಉಚ್ಚ ಸೇನಾಧಿಕಾರಿ ಹಾಗೂ ಧಾರ್ಮಿಕ ಪ್ರಮುಖನಾಗಿದ್ದನು. ಅವನನ್ನು ಭೂಮಿಯ ಮೇಲಿನ ಅಲ್ಲಾನ ಪ್ರತಿನಿಧಿ ಎಂದು ನಂಬಲಾಗಿತ್ತು.

ಆಡಳಿತದ ಉನ್ನತ ಹುದ್ದೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರನ್ನು ನೇಮಿಸಲಾಗುತ್ತಿತ್ತು. ಅಧಿಕಾರಿಗಳಿಗೆ ಜಹಗೀರು(ಭೂದತ್ತಿ)ಗಳನ್ನು ನೀಡುತ್ತಿದ್ದರು. ಹಿಂದೂ ಜಹಗೀರುದಾರರ ಸಂಖ್ಯೆ ಕಡಿಮೆಯಿತ್ತು.

ಪಾರಂಪರಿಕ ಹಿಂದೂ ಪದ್ಧತಿಯಂತೆ ಭೂಮಿಯ ಉತ್ಪನ್ನದ ಆರನೆಯ ಒಂದು ಭಾಗವನ್ನು ಕಂದಾಯವಾಗಿ ಸುಲ್ತಾನರು ಸಂಗ್ರಹಿಸುತ್ತಿದ್ದರು. ಅಕ್ಕಿ, ಗೋಧಿ, ಜೋಳ ಹಾಗೂ ಬೇಳೆಕಾಳುಗಳು ದಿನನಿತ್ಯದ ಆಹಾರ ವಸ್ತುಗಳಾಗಿದ್ದವು.

ರಾಜಮನೆತನದವರು ಮತ್ತು ಸರ್ದಾರರು ವಿಲಾಸಿ ಜೀವನ ನಡೆಸುತ್ತಿದ್ದರು. ಜನಸಾಮಾನ್ಯರ ಸ್ಥಿತಿಗತಿ ಉತ್ತಮವಾಗಿರಲಿಲ್ಲ. ಜೈನ ಮತ್ತು ಕ್ರೈಸ್ತ ಸಮುದಾಯಗಳು ರಾಜ್ಯದಲ್ಲಿದ್ದುವು. ಸೂಫಿ ಪಂಥವು ಪ್ರಬಲವಾಗಿತ್ತು.

## ಬಹಮನಿ ಸುಲ್ತಾನರ ಸಾಂಸ್ಕೃತಿಕ ಕೊಡುಗೆ

**ಸಾಹಿತ್ಯ:** ಬಹಮನಿ ಸುಲ್ತಾನರು ಪರದೇಶದ ವಿದ್ವಾಂಸರಿಗೆ ಆಶ್ರಯ ನೀಡಿದರು. ಅರಬ್ಬಿ ಮತ್ತು ಫಾರಸಿ ಸಾಹಿತ್ಯವು ಇದರಿಂದ ಪ್ರೋತ್ಸಾಹ ಪಡೆಯಿತು. ಬಂದೇನವಾಜ್ ಎಂಬ ಖ್ಯಾತ ಸೂಫಿ ಸಂತ ಹಾಗೂ ಗ್ರಂಥಕಾರ ಇದೇ ಕಾಲದವರು. ಇವರು ಮತ್ತು ಇನ್ನಿತರ ವಿದೇಶಿ ವಿದ್ವಾಂಸರು ಬಳಸಿದ ಭಾಷೆ 'ದಖನಿ' ಎಂದು ಪ್ರಸಿದ್ಧವಾಯಿತು. ಮುಂದೆ ಇದೇ ಉರ್ದು ಭಾಷೆಯ ಬೆಳವಣಿಗೆಗೆ ಕಾರಣವಾಯಿತು.

**ವಾಸ್ತುಶಿಲ್ಪ:** ಬಹಮನಿಗಳ ಇತಿಹಾಸವು ವಾಸ್ತುಶಿಲ್ಪಕ್ಕೆ ಹೆಸರುವಾಸಿಯಾಗಿದೆ. ಅವರು ಕಲಬುರಗಿ, ಬೀದರ್ ಮತ್ತು ಇತರ ಸ್ಥಳಗಳಲ್ಲಿ ಬಿಟ್ಟುಹೋಗಿರುವ ಕಟ್ಟಡಗಳು ಹಿಂದೂ-ಮುಸ್ಲಿಂ ಶೈಲಿಯಲ್ಲಿವೆ. ಇದು ದಖನಿ ಶೈಲಿಯೆಂದು ಪರಿಚಿತವಾಗಿದೆ. ಬಹಮನಿಗಳ ಮೊದಲ ರಚನೆಯೆಂದರೆ ಕಲಬುರಗಿಯ ಜಾಮೀ ಮಸೀದಿ. ಇದು ಮಹಮ್ಮದ್‌ಷಾನ ರಚನೆ. ಚಿಕ್ಕಚಿಕ್ಕ ಗುಮ್ಮಟಗಳಿಂದ ಕೂಡಿರುವ ಇಲ್ಲಿನ ಸಭಾಂಗಣ ಆಕರ್ಷಕವಾಗಿದೆ. ಕಲಬುರಗಿಯ ಬಳಿ ಸುಲ್ತಾನರ ಸಮಾಧಿಗಳಿವೆ. ಅವು ಬೃಹತ್ ಗಾತ್ರದ ಗುಮ್ಮಟಗಳುಳ್ಳ ರಚನೆಗಳು. ಬಂದೇನವಾಜರ ಸಮಾಧಿ ಕಲಬುರಗಿಯ ಇನ್ನೊಂದು ಪ್ರಮುಖ ರಚನೆ. ಬೀದರ್‌ನ ಸೋಲಾಖಾಂಬ್ ಮಸೀದಿ ಮತ್ತು ಕೋಟೆಯೊಳಗಿನ ಸುಂದರ ಅರಮನೆಗಳು ಪ್ರಸಿದ್ಧವಾಗಿವೆ. ಈ ಕಟ್ಟಡಗಳು ಅಲಂಕಾರ, ಕೆತ್ತನೆ, ಮರದ ಕುಸುರಿ ಕೆಲಸಗಳನ್ನು ಹೊಂದಿವೆ. ಬೀದರ್ ಬಳಿಯ ಅಷ್ಟೂರಿನ ಹನ್ನೆರಡು ಸಮಾಧಿಗಳು ಸೊಗಸಾಗಿವೆ. ಬಹಮನಿ ಕಾಲದ ಕಟ್ಟಡಗಳಲ್ಲಿ ಅತ್ಯಂತ ಪ್ರಮುಖ ರಚನೆಯೆಂದರೆ ಗವಾನನು ಕಟ್ಟಿಸಿದ ಮದರಸಾ. ಇದು 76 ಮೀ. (250 ಅಡಿ) ಉದ್ದ ಹಾಗೂ ಮೂರು ಮಜಲಿನ (ಮಾಳಿಗೆಯ) ರಚನೆ. ಮದ್ರಸಾದೊಳಗಿರುವ ಮಸೀದಿಯು ಇನ್ನೂ ಭದ್ರ ಸ್ಥಿತಿಯಲ್ಲಿದೆ. ಐದು ಶತಮಾನಕ್ಕೂ ಹಿಂದಿನ ಮದರಸಾ ಕಟ್ಟಡ ತನ್ನ ಹಿಂದಿನ ಘನತೆಯನ್ನು ಸಾರಿ ಹೇಳುವಂತಿದೆ



ಗವಾನನ ಮದರಸಾ, ಬೀದರ್

© KTBS NOT TO BE REPUBLISHED

## ವಿಜಯಪುರದ ಆದಿಲ್‌ಷಾಹಿಗಳು

ಷಾಹಿಗಳ ಪೈಕಿ ವಿಜಯಪುರದ ಆದಿಲ್‌ಷಾಹಿ ಪ್ರಮುಖವಾಗಿತ್ತು. ಆದಿಲ್‌ಷಾಹಿಗಳು ಕರ್ನಾಟಕದಲ್ಲಿ ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದರು.

**ಎರಡನೆಯ ಇಬ್ರಾಹಿಂ:** ಎರಡನೆಯ ಇಬ್ರಾಹಿಂ ವಿಜಯಪುರದ ಸುಲ್ತಾನರಲ್ಲಿ ಶ್ರೇಷ್ಠನಾದವನು. ಈತನ ಕಾಲದಲ್ಲಿ ರಾಜ್ಯವನ್ನು ವಿಸ್ತಾರಗೊಳಿಸಲಾಯಿತ್ತಲ್ಲದೆ ಅದು ಸಮೃದ್ಧಿಯನ್ನು ಕಂಡಿತು. ವ್ಯಾಪಾರ, ವಾಣಿಜ್ಯ ಹೆಚ್ಚಿತು. ಇಬ್ರಾಹಿಂ ಧರ್ಮಸಹಿಷ್ಣು ಅರಸನಾಗಿದ್ದು ಅನೇಕ ಹಿಂದು ವಿದ್ವಾಂಸರು, ಕವಿಗಳು ಮತ್ತು ಸಂಗೀತಗಾರರಿಗೆ ಆಶ್ರಯ ನೀಡಿದನು. ತನ್ನ ಅರಮನೆಯ ಕೋಟೆಯಲ್ಲಿನ ದತ್ತ ದೇವಾಲಯವನ್ನು ದುರಸ್ತಿ ಮಾಡಿಸಿ ಪೂಜೆಗೆ ವ್ಯವಸ್ಥೆ ಮಾಡಿದ್ದನು. ಹಿಂದು–ಮುಸ್ಲಿಂ ಸಾಂಸ್ಕೃತಿಕ ಏಕತೆಗಾಗಿ ಇಬ್ರಾಹಿಂ ಶ್ರಮಿಸಿದನು. ಉರ್ದುಭಾಷೆಯಲ್ಲಿ 'ಕಿತಾಬ್–ಇ–ನವರಸ್' ಎಂಬ ಪುಸ್ತಕವನ್ನು ಬರೆದು ಹಿಂದೂ ಸಂಗೀತವನ್ನು ಮುಸಲ್ಮಾನರಲ್ಲಿ ಜನಪ್ರಿಯಗೊಳಿಸಲು ಇವನು ಯತ್ನಿಸಿದ. ಈ ಕೃತಿ ಹಿಂದು ದೇವತೆಗಳಾದ ಸರಸ್ವತಿ, ಗಣಪತಿ, ಭೈರವ ಮುಂತಾದವರ ಸ್ತುತಿಯಿಂದ ಆರಂಭವಾಗುತ್ತದೆ. ಅವನು ಸ್ವತಃ ಒಳ್ಳೆಯ ಸಂಗೀತಗಾರನಾಗಿದ್ದನು. ಭವ್ಯ ಕಟ್ಟಡ **ಇಬ್ರಾಹಿಂ ರೋಜಾ** ಇವನದೇ ರಚನೆಯಾಗಿದೆ.

@KTBS NOT TO BE REPUBLISHED



**ಇಬ್ರಾಹಿಂ ರೋಜಾ, ವಿಜಯಪುರ**

ಇಬ್ರಾಹಿಂನ ಉತ್ತರಾಧಿಕಾರಿ ಮುಹಮ್ಮದ್ ವಿಜಯಪುರದ ಅದ್ಭುತ ಕಟ್ಟಡ **ಗೋಲಗುಂಬಜ** (ಗೋಳಗುಮ್ಮಟ)ವನ್ನು ಕಟ್ಟಿಸಿದವನು. **ಅಸಾರ್‌ಮಹಲ್** ಅವನ ಇನ್ನೊಂದು ಸುಂದರ ರಚನೆ.



**ಗೋಲಗುಂಬಜ, ವಿಜಯಪುರ**

ಮುಹಮ್ಮದನ ಅನಂತರ ವಿಜಯಪುರ ರಾಜ್ಯವು ದುರ್ಬಲವಾಯಿತು. ದಕ್ಷಿಣ ಭಾರತದಲ್ಲಿ ಮೊಗಲರ ಆಕ್ರಮಣಗಳು ಹಾಗೂ ವಿಜಯಪುರ ರಾಜ್ಯಕ್ಕೆ ಮರಾಠರು ನೀಡುತ್ತಿದ್ದ ಕಿರುಕುಳಗಳು ಇದಕ್ಕೆ ಕಾರಣ. ಔರಂಗಜೇಬನು ವಿಜಯಪುರವನ್ನು ಕೈವಶ ಮಾಡಿಕೊಳ್ಳುವುದರೊಂದಿಗೆ ಆದಿಲ್‌ಷಾಹಿ ಆಡಳಿತ ಕೊನೆಗೊಂಡಿತು.

## ವಾಸ್ತುಶಿಲ್ಪ

ಕರ್ನಾಟಕದ ವಾಸ್ತುಶಿಲ್ಪದ ಇತಿಹಾಸದಲ್ಲಿ ಆದಿಲ್‌ಷಾಹಿಗಳ ರಚನೆಗಳಿಗೆ ಮುಖ್ಯವಾದ ಸ್ಥಾನವಿದೆ. ಅವರ ರಚನೆಗಳೆಂದರೆ–ಅರಮನೆ, ಕೋಟೆ, ಮಸೀದಿ ಮತ್ತು ಸಮಾಧಿಗಳು.

◆ **ವಿಜಯಪುರದ ಕೋಟೆ** ಭಾರೀ ರಚನೆಯಾಗಿದ್ದು 96 ಕೊತ್ತಲಗಳು ಹಾಗೂ ಆರು ಮಹಾದ್ವಾರಗಳನ್ನು ಹೊಂದಿದೆ. ಅರಮನೆಗಳಲ್ಲಿ **ಗಗನಮಹಲ್** ಭವ್ಯವಾಗಿದೆ. **ಅಸಾರ್ ಮಹಲ್**‌ನಲ್ಲಿ ವರ್ಣರಂಜಿತ ಚಿತ್ರಗಳಿರುವ ಕೊಠಡಿಗಳಿವೆ. ◆ ವಿಜಯಪುರದ **ಜುಮಾ ಮಸೀದಿಯು** ಸುಂದರವಾಗಿದೆ.

ಆದಿಲ್‌ಷಾಹಿಗಳ ರಚನೆಗಳಲ್ಲಿ ಸಮಾಧಿ ಕಟ್ಟಡಗಳೇ ತೀರ ಭವ್ಯವಾದವುಗಳು. ಅವಳಿ ರಚನೆಯಾದ **ಇಬ್ರಾಹಿಂ ರೋಜಾ**ದಲ್ಲಿ ಒಂದು ಕಟ್ಟಡವು ಮಸೀದಿಯೂ ಮತ್ತೊಂದು ಸಮಾಧಿಯೂ ಆಗಿದೆ. ರೋಜಾವನ್ನು ದಖನ್ನಿನ ತಾಜ್‌ಮಹಲ್ ಎಂದು ವರ್ಣಿಸಲಾಗಿದೆ. ರೋಜಾಕ್ಕೂ ಮೀರಿದ ಕಟ್ಟಡವನ್ನು ರಚಿಸಬೇಕೆಂದು ಮಹಮ್ಮದನು **ಗೋಲಗುಂಬಜ** ಎಂಬ ಸಮಾಧಿ ಮಂದಿರವನ್ನು ರಚಿಸಿದನು. ಇದರ ಕೇಂದ್ರದಲ್ಲಿ ವಿಶಾಲವಾದ ಗುಂಬಜವಿದೆ. ಗುಂಬಜದ ಒಳಭಾಗದಲ್ಲಿ 'ಪಿಸುಗುಟ್ಟುವ' ಗ್ಯಾಲರಿಯಿದೆ. ಇಲ್ಲಿನ 'ಪಿಸುಗುಟ್ಟುವ' ವೈಶಿಷ್ಟ್ಯ ಶಿಲ್ಪತಜ್ಞರನ್ನು ಬೆರಗುಗೊಳಿಸಿದೆ. ಗೋಲಗುಂಬಜವು ಜಗತ್ತಿನಲ್ಲೇ ಹಿರಿಗಾತ್ರದಲ್ಲಿ ನಾಲ್ಕನೆಯದೂ ಭಾರತದಲ್ಲಿ ಅತಿ ದೊಡ್ಡದೂ ಆಗಿದೆ. ಇದು ಜಗತ್ತಿನ ಅದ್ಭುತ ವಾಸ್ತುಗಳಲ್ಲೊಂದು.

@KTBS NOT TO BE REPUBLISHED

## ಕಾಲಗಣನೆ

| | | |
|---|---|---|
| ವಿಜಯನಗರ ಸಾಮ್ರಾಜ್ಯದ ಸ್ಥಾಪನೆ | – | 1336 |
| ಸಾಮ್ರಾಜ್ಯದ ಆಳ್ವಿಕೆಯ ಕಾಲ | – | 1336–1646 |
| ಕೃಷ್ಣದೇವರಾಯನ ಆಳ್ವಿಕೆಯ ಕಾಲ | – | 1509–1529 |
| ರಕ್ಕಸತಂಗಡಿ ಕದನ | – | ಜನವರಿ 23, 1565 |
| ಬಹಮನಿ ರಾಜ್ಯದ ಆಳ್ವಿಕೆಯ ಕಾಲ | – | 1347–1489 |
| ಬೀದರ್‌ನಲ್ಲಿ ಮದ್ರಸಾ ಸ್ಥಾಪನೆ | – | 1461 |
| ಆದಿಲ್‌ಷಾಹಿಗಳ ಆಳ್ವಿಕೆಯ ಕಾಲ | – | 1489–1686 |
| ಇಬ್ರಾಹಿಂ ರೋಜಾ ರಚನೆ | – | 1626 |
| ಗೋಲಗುಂಬಜದ ರಚನೆ | – | ಸುಮಾರು 1650 |

## ಹೊಸ ಪದಗಳು

1. ಫಕೀರ – ಮಹಮ್ಮದೀಯ ಸಾಧು.
2. ಕೊತ್ತಲ – ಕೋಟೆಯ ಪ್ರಾಕಾರದ ಮೇಲೆ ಕಟ್ಟುವ ಗುಮ್ಮಟ.
3. ಫಾರಸಿ – ಪರ್ಷಿಯ ದೇಶದ ಭಾಷೆ.
4. ದಖನ್ – ದಕ್ಷಿಣ ಭಾರತದ ಪ್ರದೇಶ.

NOT TO BE REPUBLISHED @KTBS

# ಅಭ್ಯಾಸಗಳು

## ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ಬೀದರ್‌ನಲ್ಲಿರುವ ಪ್ರಸಿದ್ಧ ಐತಿಹಾಸಿಕ ಕಟ್ಟಡ ಯಾವುದು?

2 ಮಹಮ್ಮದ್ ಗವಾನ್ ಯಾರು?

3 ಸೋಲಾಖಾಂಬ್ ಮಸೀದಿ ಎಲ್ಲಿದೆ?

4 ಆದಿಲ್‌ಷಾಹಿ ಅರಸರಲ್ಲಿ ಗಣ್ಯನು ಯಾರು?

5 ದಖನಿನ ತಾಜ್‌ಮಹಲ್ ಎಂಬುದಾಗಿ ಆದಿಲ್‌ಷಾಹಿಗಳ ಯಾವ ರಚನೆಯನ್ನು ಕರೆಯುತ್ತಾರೆ?

6 ಗೋಲಗುಂಬಜ ಏಕೆ ಪ್ರಸಿದ್ಧವಾಗಿದೆ?

7 ಸಂಗಮ ವಂಶದ ಅತ್ಯುನ್ನತ ದೊರೆ ಯಾರು?

8 ವಿಜಯನಗರ ಅರಸರಲ್ಲಿ ಅತ್ಯಂತ ಶ್ರೇಷ್ಠ ಸಾಮ್ರಾಟ ಯಾರು?

9 ಹಂಪಿಯ ಮುಖ್ಯ ದೇವಾಲಯಗಳು ಯಾವುವು?

10 ಕುಮಾರವ್ಯಾಸನ ಕೃತಿ ಯಾವುದು?

11 ಕೃಷ್ಣದೇವರಾಯನ ಕೃತಿಗಳನ್ನು ತಿಳಿಸಿ.

12 ವಿಜಯನಗರಕ್ಕೆ ಭೇಟಿ ನೀಡಿದ ಪರ್ಷಿಯ ದೇಶದ ರಾಯಭಾರಿಯ ಹೆಸರನ್ನು ತಿಳಿಸಿ. ವಿಜಯನಗರದ ಕುರಿತಾಗಿ ಅವನು ಏನು ಹೇಳಿದ್ದ?

13 ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರನ್ನು ಹೆಸರಿಸಿ.

## ಚಟುವಟಿಕೆಗಳು

1 ಬಹಮನ್ ಷಾಹಿ ಮತ್ತು ಆದಿಲ್ ಷಾಹಿಗಳ ವಾಸ್ತುಶಿಲ್ಪಗಳ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ ಆಲ್ಬಂ ತಯಾರಿಸಿ.

2 ಭಾರತದಲ್ಲಿರುವ ಹಿಂದೂ, ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಸಂಸ್ಕೃತಿಯ ಕುರುಹುಗಳಾದ ದೇವಸ್ಥಾನಗಳು, ಚರ್ಚುಗಳು ಮತ್ತು ಮಸೀದಿಗಳು ಹಾಗೂ ಇತರ ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿ.

3 ವಿಜಯನಗರ ಕಾಲದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

4 ಪುರಂದರ ಮತ್ತು ಕನಕದಾಸರ ಒಂದೆರಡು ಕೀರ್ತನೆಗಳು ಮತ್ತು ಗದುಗಿನ ಭಾರತದ ನಾಲ್ಕೈದು ಪದ್ಯಗಳನ್ನು ಸಂಗ್ರಹಿಸಿ ಗುಂಪಾಗಿ ಹಾಡಿ.

5 ಕರ್ನಾಟಕದ ಭಕ್ತಿ ಪಂಥದ ಹರಿದಾಸರ ವಿಚಾರ ಸಂಗ್ರಹಿಸಿ, ಅವರ ಕುರಿತು ಒಂದು ಪುಟ ಪ್ರಬಂಧ ಬರೆಯಿರಿ.

6 ವಿಜಯನಗರ ಸಾಮ್ರಾಜ್ಯದ ಪ್ರಮುಖ ಸ್ಮಾರಕಗಳ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

7 ಹಂಪಿಗೆ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಿ. ಪ್ರವಾಸದ ನಂತರ ನಿಮ್ಮ ಅನುಭವಗಳನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.

NOT TO BE REPUBLISHED @KTBS

ಅಧ್ಯಾಯ 16

# ಮೊಘಲರು ಹಾಗೂ ಮರಾಠರು

L9M7R6

## ಮೊಘಲ್ ಸಾಮ್ರಾಜ್ಯದ ಏಳು ಬೀಳು

### ಪಾಠದ ಪರಿಚಯ

1526ರಲ್ಲಿ ಬಾಬರ್ ಭಾರತದ ಮೇಲೆ ದಂಡೆತ್ತಿ ಬಂದು, ದಿಲ್ಲಿ ಸುಲ್ತಾನರ ಆಳ್ವಿಕೆಯನ್ನು ಕೊನೆಗೊಳಿಸಿ ಮೊಘಲ್ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈ ಪಾಠದಲ್ಲಿ ಅಕ್ಬರ್ ಮತ್ತು ಔರಂಗಜೇಬನ ಆಳ್ವಿಕೆಯನ್ನು ಪರಿಚಯಿಸಲಾಗಿದೆ. ಇದರೊಂದಿಗೆ ಮೊಘಲರ ಆಡಳಿತ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ನಿರೂಪಿಸಲಾಗಿದೆ. ಕೊನೆಯಲ್ಲಿ ಸಾಮ್ರಾಜ್ಯದ ಅವನತಿಗೆ ಕಾರಣವಾದ ಅಂಶಗಳನ್ನು ಹೇಳಲಾಗಿದೆ. ಒಟ್ಟಿನಲ್ಲಿ ಇದು ಎರಡು ಶತಮಾನಗಳ ಕಾಲ ಪ್ರಮುಖ ರಾಜಕೀಯ ಶಕ್ತಿಯಾಗಿ ಮೆರೆದು ಸಾಹಿತ್ಯ, ಕಲೆಗಳಿಗೆ ವಿಶೇಷ ಕೊಡುಗೆ ನೀಡಿದ ಮೊಘಲ್ ಸಾಮ್ರಾಜ್ಯದ ಏಳು ಬೀಳಿನ ಚರಿತ್ರೆ.

ಶಿವಾಜಿಯ ಬಾಲ್ಯ, ಆದರ್ಶಗಳು, ಮೊಘಲ್ ಸಾಮ್ರಾಜ್ಯ ಮತ್ತು ವಿಜಯಪುರ ರಾಜ್ಯಗಳನ್ನು ಹಿಮ್ಮೆಟ್ಟಿಸಿದ ಸಾಹಸೀ ಕಥನ, ಮರಾಠಾ ರಾಜ್ಯದ ಸ್ಥಾಪನೆ, ಆಡಳಿತ ಕ್ರಮ ಹಾಗೂ ಅದ್ಭುತ ವ್ಯಕ್ತಿತ್ವ ಇವುಗಳ ನಿರೂಪಣೆಯಿದೆ.

### ಸಾಮರ್ಥ್ಯಗಳು

1 ಅಕ್ಬರನ ಉದಾರ ನೀತಿ ಮತ್ತು ಸಾಧನೆಗಳನ್ನು ಅರಿತುಕೊಳ್ಳುವುದು.

2 ಔರಂಗಜೇಬನ ಸಂಕುಚಿತ ಧೋರಣೆಗಳು ದೇಶದಲ್ಲಿ ದಂಗೆಗಳು ಮತ್ತು ಸಾಮ್ರಾಜ್ಯದ ಅವನತಿಗೆ ಹೇಗೆ ಕಾರಣವಾದವು ಎಂಬುದನ್ನು ಅರ್ಥಮಾಡಿಕೊಳ್ಳುವುದು.

3 ಸಾಹಿತ್ಯ ಮತ್ತು ಕಲೆಗಳನ್ನು ಮೊಘಲ್ ಸಾಮ್ರಾಟರು ಹೇಗೆ ಶ್ರೀಮಂತಗೊಳಿಸಿದರು ಎಂಬುದನ್ನು ಪ್ರಶಂಸೆ ಮಾಡುವುದು.

4 ಮೊಘಲರ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.

5 ಶಿವಾಜಿಯ ಜೀವನ, ಸಾಹಸ, ಗುಣ ಮತ್ತು ಸಾಧನೆಗಳನ್ನು ಅರ್ಥಮಾಡಿಕೊಳ್ಳುವುದು.

6 ಭೂಪಟದಲ್ಲಿ ಶಿವಾಜಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳನ್ನು ಗುರುತಿಸುವುದು.

©KTBS NOT TO BE REPUBLISHED

## ಈ ಸ್ಮಾರಕವನ್ನು ನೀವು ಗುರುತಿಸಬಲ್ಲಿರಾ?



**ತಾಜ್‌ಮಹಲ್, ಆಗ್ರಾ**

ಇದು ಜಗತ್ಪ್ರಸಿದ್ಧ ತಾಜ್‌ಮಹಲ್. ಅಮೃತಶಿಲೆಯಿಂದ ರಚನೆಗೊಂಡ ಈ ಬೃಹತ್ ವಾಸ್ತುಕೃತಿ ಮೊಘಲರ ಶ್ರೇಷ್ಠ ಕೊಡುಗೆಯಾಗಿದೆ.

ಬಾಬರ್ ಮೊಘಲ್ ರಾಜಮನೆತನದ ಸ್ಥಾಪಕ. ಆರಂಭದಲ್ಲಿ ಇವನು ಅಫ್‌ಘಾನಿಸ್ತಾನದ ಕಾಬೂಲ್ ಎಂಬ ಪುಟ್ಟ ಪ್ರದೇಶವನ್ನು ಆಳುತ್ತಿದ್ದ. ಸಂಪದ್ಭರಿತ ಭಾರತದ ಮೇಲೆ ಆಕ್ರಮಣ ಮಾಡಲು ಸಮಯ ಕಾಯುತ್ತಿದ್ದ.

ಬಾಬರ್ ಮಂಗೋಲ್ ಸಂತತಿಯವನು. 'ಮೊಘಲ್' ಪದದ ಮೂಲ 'ಮಂಗೋಲ್'. ಭಾರತಕ್ಕೆ ಗುಲಾಬಿಯನ್ನು ಬಾಬರ್ ಪರಿಚಯಿಸಿದನು.

ದೆಹಲಿಯ ಸುಲ್ತಾನರು ದುರ್ಬಲಗೊಳ್ಳುತ್ತಿದ್ದಂತೆ ಬಾಬರ್ ದೆಹಲಿಯ ಮೇಲೆ ದಂಡೆತ್ತಿ ಬಂದು ಅವರ ಆಳ್ವಿಕೆಯನ್ನು ಕೊನೆಗೊಳಿಸಿದನು. ಆದರೆ ಅವನು ಅಷ್ಟಕ್ಕೇ ಸಂತೃಪ್ತನಾಗುವಂತಿರಲಿಲ್ಲ. ಏಕೆಂದರೆ ಇಲ್ಲಿನ ರಜಪೂತರು ಮತ್ತು ಅಫ್‌ಘನರು ಅವನನ್ನು ಪ್ರಬಲವಾಗಿ ವಿರೋಧಿಸುತ್ತಿದ್ದರು. ವೀರಯೋಧನಾಗಿದ್ದ ಬಾಬರ್ ತನ್ನ ಉತ್ತಮ ಶಸ್ತ್ರಾಸ್ತ್ರ ಬಲದಿಂದ ವೈರಿಗಳನ್ನು ಧೈರ್ಯದಿಂದ ಎದುರಿಸಿ ಹಿಮ್ಮೆಟ್ಟಿಸಿದನು.

ಬಾಬರನು ದಿಲ್ಲಿ, ಆಗ್ರಾ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಮೂರು ಯುದ್ಧಗಳಲ್ಲಿ ವಶಪಡಿಸಿಕೊಂಡು ಸಾಮ್ರಾಜ್ಯವನ್ನು ಸ್ಥಾಪಿಸಿದನು. ಆದರೆ ಅಲ್ಪಕಾಲದಲ್ಲೇ ಬಾಬರ್ ನಿಧನನಾದನು. ನಂತರ ಅವನ ಮಗ ಹುಮಾಯೂನ್ ಪಟ್ಟವೇರಿದನು.

**ಹುಮಾಯೂನ್:** ಆರಂಭದಲ್ಲಿ ಹುಮಾಯೂನ್ ಶತ್ರುಗಳನ್ನು ಯುದ್ಧದಲ್ಲಿ ಸೋಲಿಸಿದನಾದರೂ ಅಫ್‌ಘನ್ ಸರದಾರನಾದ ಶೇರ್‌ಷಾ ಸೂರಿಯಿಂದ ಪರಾಜಯಗೊಂಡನು. ರಾಜ್ಯವನ್ನು ಕಳೆದುಕೊಂಡು ಪರ್ಷಿಯಕ್ಕೆ ಪಲಾಯನ ಮಾಡಿ ಅಲ್ಲಿ ಹದಿನೈದು ವರ್ಷಗಳ ಕಾಲವಿದ್ದನು. ಅಫ್‌ಘನ್‌ರ ಆಳ್ವಿಕೆ ದುರ್ಬಲಗೊಳ್ಳುತ್ತಿದ್ದಂತ ಹುಮಾಯೂನ್ ಭಾರತದ ಮೇಲೆ ದಂಡೆತ್ತಿ ಬಂದು ದೆಹಲಿಯನ್ನು ವಶಪಡಿಸಿಕೊಂಡನು. ಆದರೆ ಅಲ್ಪಕಾಲದಲ್ಲೆ ಹುಮಾಯೂನ್ ತೀರಿಕೊಂಡನು.

NOT TO BE REPUBLISHED @KTBS

# ಅಕ್ಬರ್



ಅಕ್ಬರ್

ಹುಮಾಯೂನ್‌ನ ಮಗ ಅಕ್ಬರ್ ಭಾರತದಲ್ಲಿ ಸಾಮ್ರಾಜ್ಯವನ್ನು ಕಟ್ಟುವ ಆಕಾಂಕ್ಷೆಯುಳ್ಳವನಾಗಿದ್ದನು. ಈ ನಿಟ್ಟಿನಲ್ಲಿ ಕಲಿತನಕ್ಕೆ ಹೆಸರಾಗಿದ್ದ ರಜಪೂತ ಅರಸರನ್ನು ತನ್ನ ಪಕ್ಷದತ್ತ ಒಲಿಸಲು ಯತ್ನಿಸಿದನು. ಅವರಲ್ಲಿ ಕೆಲವರು ಅಕ್ಬರನ ಪಕ್ಷ ವಹಿಸಿದರು. ಆದರೆ ಮೇವಾಡದ ರಾಣಾ ಪ್ರತಾಪಸಿಂಹನು ಅಕ್ಬರನಿಗೆ ಎಳ್ಳಷ್ಟೂ ಮಣಿಯಲಿಲ್ಲ. ಅವನು ಸ್ವಾಭಿಮಾನಿಯೂ ಮಹಾಶೂರನೂ ಆಗಿದ್ದನು. ಮುಂದೆ ಇವರೊಳಗೆ ಹಾಲ್ದಿಘಾಟ್ (ರಾಜಸ್ಥಾನ) ಎಂಬಲ್ಲಿ ಭೀಕರ ಕದನ ನಡೆಯಿತು. ಕದನದಲ್ಲಿ ರಾಣಾ ಪ್ರತಾಪಸಿಂಹನು ಸೋತನಾದರೂ ಕೊನೆಯವರೆಗೂ ಅಕ್ಬರನಿಗೆ ಶಿರಬಾಗಿಸಲಿಲ್ಲ.

> ಚೇತಕ್ ಹೆಸರಿನ ತನ್ನ ನೆಚ್ಚಿನ ಕುದುರೆಯನ್ನೇರಿ ರಣರಂಗದಲ್ಲಿ ಹೋರಾಡುವ ಈತನ ಬೃಹತ್ ಕಂಚಿನ ಪ್ರತಿಮೆಯನ್ನು ಹಾಲ್ದಿಘಾಟ್‌ನಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸ್ಥಾಪಿಸಲಾಯಿತು. ಸ್ವದೇಶಾಭಿಮಾನಿಯಾದ ರಾಣಾ ಪ್ರತಾಪ್‌ಸಿಂಹ ಭಾರತೀಯರ ಕಣ್ಮಣಿಯಾಗಿ ಮೆರೆದಿದ್ದಾನೆ.

© KTBS NOT TO BE REPUBLISHED



ರಾಣಾ ಪ್ರತಾಪಸಿಂಹ

ಮುಂದೆ ಅಕ್ಬರ್ ಅನೇಕ ವರ್ಷಗಳ ಕಾಲ ಸೈನಿಕ ಕಾರ್ಯಾಚರಣೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡನು. ಪರಿಣಾಮವಾಗಿ ಗುಜರಾತ್, ಬಂಗಾಲ, ಕಾಶ್ಮೀರ, ಕಾಬೂಲ್ ಮುಂತಾದ ಪ್ರದೇಶಗಳನ್ನು ಗೆದ್ದು ಬೃಹತ್ ಸಾಮ್ರಾಜ್ಯವನ್ನು ಸ್ಥಾಪಿಸಿದನು.

## ಅಕ್ಬರನ ಸಾಧನೆಗಳು

**ಆಡಳಿತ:** ಉತ್ತಮ ಆಡಳಿತಗಾರನಾಗಿದ್ದ ಅಕ್ಬರ್ ವಿಶಾಲ ಮನೋಭಾವವನ್ನು ಹೊಂದಿದ್ದನು. ಉತ್ತಮ ರಾಜನಲ್ಲಿರಬೇಕಾದ ಬಹುತೇಕ ಗುಣಗಳು ಅವನಲ್ಲಿದ್ದವು. ಅವನು ನಿರಂಕುಶ ಪ್ರಭುವಾಗಿರಲಿಲ್ಲ. ಬಹುಸಂಖ್ಯಾತರಾದ ತನ್ನ ಹಿಂದು ಪ್ರಜೆಗಳ ವಿಶ್ವಾಸಗಳಿಸುವುದು ಅವಶ್ಯವೆಂದು ಮನಗಂಡನು. ಹಿಂದುಗಳಿಗೆ ತನ್ನ ಆಸ್ಥಾನದಲ್ಲಿ ಉನ್ನತ ಹುದ್ದೆಗಳನ್ನು ನೀಡಿದ. ಹಿಂದಿನ ಮುಸಲ್ಮಾನ ದೊರೆಗಳು ಹಿಂದುಗಳ ಮೇಲೆ ವಿಧಿಸಿದ್ದ 'ಜೆಸಿಯಾ' (ಜಿಜಿಯಾ) ಎಂಬ ತಲೆಗಂದಾಯ ಹಾಗೂ ಯಾತ್ರಾ ತೆರಿಗೆಯನ್ನು ರದ್ದುಪಡಿಸಿದನು. ಅಕ್ಬರನು ಗೋಹತ್ಯೆಯನ್ನು ಮತ್ತು ಸತಿ ಪದ್ಧತಿಯನ್ನು ತಡೆಹಿಡಿದನು. ಬಾಲ್ಯವಿವಾಹವನ್ನು ವಿರೋಧಿಸಿದನು. ಅಕ್ಬರನ ಭೂಕಂದಾಯ ಪದ್ಧತಿ ಜನಮನ್ನಣೆಯನ್ನು ಗಳಿಸಿತು. ಭೂಕಂದಾಯ ಪದ್ಧತಿಯನ್ನು ರೂಪಿಸಿದವನು ಮಂತ್ರಿಯಾಗಿದ್ದ ರಾಜಾ ತೋದರ್‌ಮಲ್.

**ಧಾರ್ಮಿಕ ನೀತಿ:** ಅಕ್ಬರನು ಧಾರ್ಮಿಕ ಸಹಿಷ್ಣುವಾಗಿದ್ದನು. ತನ್ನ ಹೊಸ ರಾಜಧಾನಿಯಾದ ಫತೇಪುರ್ ಸಿಕ್ರಿಯಲ್ಲಿ ಇಬಾದತ್ ಖಾನಾ ಎಂಬ ಪ್ರಾರ್ಥನಾ ಮಂದಿರ ಕಟ್ಟಿಸಿದನು. ಇಲ್ಲಿ ಇಸ್ಲಾಮಿ ಪಂಥಗಳ ಮುಖಂಡರೊಡನೆ ಧಾರ್ಮಿಕ ವಿಚಾರಗಳನ್ನು ಚರ್ಚಿಸಿದನು. ಹಿಂದು, ಜೈನ, ಬೌದ್ಧ, ಪಾರ್ಸಿ, ಕ್ರಿಶ್ಚಿಯನ್ ಮುಂತಾದ ಧಾರ್ಮಿಕ ಮುಖಂಡರನ್ನೂ ಇಲ್ಲಿಗೆ ಕರೆಸಿ ಅವರ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದನು. ಈ ಚಿಂತನೆಗಳ ಫಲವಾಗಿ ಅಕ್ಬರ್ **'ದೀನ್-ಎ-ಇಲಾಹಿ'** ಎಂಬ ತನ್ನದೇ ಆದ ಹೊಸ ಪಂಥವನ್ನು ಸ್ಥಾಪಿಸಿದನು. ಅದು ಎಲ್ಲ ಮತಧರ್ಮಗಳ ಉತ್ತಮ ಅಂಶಗಳನ್ನು ಒಳಗೊಂಡಿತ್ತು. ಆದರೆ ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರವೇ ಅದರ ಅನುಯಾಯಿಗಳಾಗಿದ್ದರು.

ಚಟುವಟಿಕೆ: ದೀನ್-ಎ-ಇಲಾಹಿ ಪಂಥವು ಹುಟ್ಟಿ ಬೆಳೆದು ಜನಪ್ರಿಯವಾಗಲೇ ಇಲ್ಲ. ಒಂದು ಚರ್ಚಾಕೂಟ ಏರ್ಪಡಿಸಿ ವಿಷಯ ಸಂಗ್ರಹ ಮಾಡಿ.




NOT TO BE REPUBLISHED @KTBS

**ಕಲಾಪೋಷಣೆ:** ಅಕ್ಬರ್ ಸಾಹಿತ್ಯ ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದನು. ಫೈಜಿ, ಅಬುಲ್ ಫಜಲ್ ಮತ್ತು ಬೀರಬಲ್ ಈತನ ಆಸ್ಥಾನದಲ್ಲಿದ್ದ ಗಣ್ಯ ಕವಿಗಳು. ಅಮರ ಸಂಗೀತಗಾರ ತಾನ್‌ಸೇನ್ ಅವನ ಆಸ್ಥಾನದ ಶೋಭೆಯನ್ನು ಹೆಚ್ಚಿಸಿದನು. ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳಿಗೆ ಅಕ್ಬರ್ ನೀಡಿರುವ ಪೋಷಣೆ ಮೆಚ್ಚುವಂಥದ್ದು.

ಅಕ್ಬರನ ನಂತರ ಪಟ್ಟಕ್ಕೆ ಬಂದ ಜಹಾಂಗೀರ್ ಮತ್ತು ಷಹಜಹಾನ್ ಇಬ್ಬರೂ ಅವನ ನೀತಿಯನ್ನು ಬಹುಮಟ್ಟಿಗೆ ಅನುಸರಿಸಿದರು. ಷಹಜಹಾನ್ ಆಗ್ರಾದಲ್ಲಿ ಖ್ಯಾತ ತಾಜ್‌ಮಹಲ್, ದೆಹಲಿಯಲ್ಲಿ ಬೃಹತ್ ಕೆಂಪುಕೋಟೆ ಮತ್ತು ಭವ್ಯ ಅರಮನೆಗಳನ್ನು ನಿರ್ಮಾಣ ಮಾಡಿಸಿ ಪ್ರಸಿದ್ಧಿ ಪಡೆದನು.

## ಔರಂಗಜೇಬ

ಷಹಜಹಾನನ ಮಗ ಔರಂಗಜೇಬ್ ಕೊನೆಯ ಮೊಘಲ ಸಾಮ್ರಾಟ. ಇವನು ಐವತ್ತು ವರ್ಷಗಳಷ್ಟು ಕಾಲ ಸುದೀರ್ಘ ಆಳ್ವಿಕೆ ನಡೆಸಿದನು. ಸಾಮ್ರಾಜ್ಯವು ಇನ್ನಷ್ಟು ವಿಸ್ತಾರಗೊಂಡಿತು. ಆದರೆ ಕೊನೆಯಲ್ಲಿ ಅದು ಶೀಘ್ರಗತಿಯಲ್ಲಿ ಅವನತಿ ಕಂಡಿತು.

**ಧಾರ್ಮಿಕ ನೀತಿ:** ಔರಂಗಜೇಬನು ಸಂಪ್ರದಾಯವಾದಿ ಮುಸಲ್ಮಾನನಾಗಿದ್ದನು. ಮದ್ಯಪಾನ, ಜೂಜು, ಮೋಜು ಮತ್ತು ಸಂಗೀತಗಳಿಂದ ದೂರವಾಗಿದ್ದನು.

ಔರಂಗಜೇಬನು ಅಕ್ಬರನ ಉದಾರನೀತಿಯನ್ನು ಕೈ ಬಿಟ್ಟನು. ಜೆಸಿಯಾ ತೆರಿಗೆಯನ್ನು ಮತ್ತೆ ಹೇರಿದನು. ಹಿಂದೂ ಜಾತ್ರೆಗಳು, ಬೋಧನೆ ಹಾಗೂ ಆಚರಣೆಗಳನ್ನು ನಿಷೇಧಿಸಿದನು. ಅವನ ರಾಜಾಜ್ಞೆಯಂತೆ ಅನೇಕ ಮಂದಿರಗಳು ನಾಶವಾದವು. ಅವುಗಳಲ್ಲಿ ಖ್ಯಾತ ಸೋಮನಾಥ ಮಂದಿರ (ಗುಜರಾತ್), ಕಾಶಿಯ (ಉತ್ತರ ಪ್ರದೇಶ) ಶಿವಮಂದಿರ ಮತ್ತು ಮಥುರೆಯ (ಉತ್ತರ ಪ್ರದೇಶ) ಕೃಷ್ಣಮಂದಿರ ಒಳಗೊಂಡಿದ್ದವು. ಈ ಕ್ರಮಗಳೂ ರಾಜಕೀಯ ಘರ್ಷಣೆಗಳಿಗೆ ಎಡೆಮಾಡಿಕೊಟ್ಟವು.

ಸಿಖ್ಖರ ದಂಗೆ: ಔರಂಗಜೇಬನ ಮತೀಯ ಧೋರಣೆಯು ಸಿಖ್ಖರು, ಮರಾಠರು ಮತ್ತು ಜಾಟರನ್ನು ಕೆರಳಿಸಿತು. ಸಿಖ್ ಗುರು ತೇಜ್ ಬಹಾದೂರ್‌ನನ್ನು ದೆಹಲಿಯಲ್ಲಿ ಬಹಿರಂಗವಾಗಿ ಕೊಲ್ಲಲಾಯಿತು. ಅವನ ಮಗ ಗುರು ಗೋವಿಂದಸಿಂಹನು ಇಡಿ ಸಿಖ್ ಸಮುದಾಯಕ್ಕೆ ವೀರದೀಕ್ಷೆ ನೀಡಿದನು. ದೀಕ್ಷೆ ಪಡೆದವರಿಗೆ ಸಿಂಗ್ (ಸಿಂಹ) ಎಂಬ ನಾಮಾಂಕಿತ ನೀಡಲಾಯಿತು. ಅವರು ಪಂಚ 'ಕ'ಕಾರಗಳನ್ನು, ಅಂದರೆ ಕೇಶ (ಉದ್ದ ಕೂದಲು), ಕಂಗಾ (ಬಾಚಣಿಗೆ), ಕೃಪಾಣ (ಕಿರುಗತ್ತಿ), ಕಚ್ಚೆ (ತುಂಡು ಇಜಾರು) ಮತ್ತು ಕಂಕಣ (ಕಬ್ಬಿಣದ ಬಳೆ) ಧರಿಸಬೇಕಿತ್ತು. ಈ ಆಚರಣೆ ಸಿಖ್ಖರಲ್ಲಿ ಇಂದಿಗೂ ಜೀವಂತವಾಗಿದೆ.

© KTBS NOT TO BE REPUBLISHED

**ದಂಗೆಗಳು:** ಉತ್ತರ ಭಾರತದಲ್ಲಿ ಸಿಖ್ಖರು ಮತ್ತು ರಜಪೂತರು ಔರಂಗಜೇಬನನ್ನು ಪ್ರಬಲವಾಗಿ ಪ್ರತಿಭಟಿಸಿದರು. ದಖನ್‌ದಲ್ಲಿ ಶಿವಾಜಿ ಬಂಡಾಯ ಎದ್ದನು. ದಂಗೆಗಳು ದೀರ್ಘಕಾಲ ನಡೆದು ಔರಂಗಜೇಬನು ಭಾರಿ ಸಂಪತ್ತು, ಸೈನಿಕರು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಪ್ರತಿಷ್ಠೆಯನ್ನು ಕಳೆದುಕೊಂಡನು. ಸಾಮ್ರಾಜ್ಯದ ಹಲವಾರು ಪ್ರದೇಶಗಳು ಸ್ವತಂತ್ರಗೊಂಡವು. ದಖನ್ನಿನ ಯುದ್ಧಗಳಿಂದ ಆರ್ಥಿಕವಾಗಿ ಹಾಗೂ ದೈಹಿಕವಾಗಿ ಬಹಳಷ್ಟು ಬಳಲಿದ ಔರಂಗಜೇಬನು ದಖನ್‌ನಲ್ಲಿ ಮರಣ ಹೊಂದಿದನು. ಇದರೊಂದಿಗೆ ಮೊಘಲರ ಪ್ರಾಬಲ್ಯವು ತೀವ್ರವಾಗಿ ಕುಂದಿತು.



**ಗುರು ಗೋವಿಂದಸಿಂಹ**



**ಸ್ವರ್ಣಮಂದಿರ, ಅಮೃತಸರ**

## ಮೊಘಲರ ಆಡಳಿತ

ಮೊಘಲ ಸಾಮ್ರಾಟನೇ ಎಲ್ಲ ನಾಗರಿಕ ಮತ್ತು ಸೈನಿಕ ಅಧಿಕಾರ ಹೊಂದಿದ್ದನು. ನ್ಯಾಯ ನೀಡಿಕೆಯಲ್ಲಿ ಈತನದು ಅಂತಿಮ ನಿರ್ಣಯವಾಗಿತ್ತು.

NOT TO BE REPUBLISHED

ಸಾಮ್ರಾಜ್ಯವನ್ನು ಪ್ರಾಂತ (ಸುಬಾ), ಜಿಲ್ಲೆ (ಸರ್ಕಾರ) ಮತ್ತು ತಾಲ್ಲೂಕುಗಳಾಗಿ (ಪರಗಣ) ವಿಂಗಡಿಸಲಾಗಿತ್ತು. ನಗರಗಳಲ್ಲಿ ಕೊತ್ವಾಲ ಎಂಬ ಅಧಿಕಾರಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದನು.

**ಕಂದಾಯ ವ್ಯವಸ್ಥೆ:** ಅಕ್ಬರನ ಮಂತ್ರಿ ರಾಜಾ ತೋದರ್‌ಮಲ್ ಭೂಕಂದಾಯ ಪದ್ಧತಿಯನ್ನು ರೂಪಿಸಿದನು. ಭೂಮಿಯ ಫಲವತ್ತತೆಯ ಆಧಾರದಲ್ಲಿ ಕಂದಾಯವನ್ನು ನಿಗದಿ ಮಾಡಲಾಗಿತ್ತು.

## ಸಾಂಸ್ಕೃತಿಕ ಕೊಡುಗೆಗಳು

**ಸಾಹಿತ್ಯ:** ಮೊಘಲರು ಪರ್ಷಿಯನ್ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ಅಕ್ಬರನ ಆಸ್ಥಾನದಲ್ಲಿ ಅಬುಲ್ ಫಜಲ್, ನಿಜಾಮುದ್ದೀನ್ ಮತ್ತು ಬದೌನಿ ಎಂಬವರು ಪ್ರಸಿದ್ಧ ಇತಿಹಾಸಕಾರರಾಗಿದ್ದರು. **ಅಕ್ಬರ್‌ನಾಮಾ** ಅಬುಲ್ ಫಜಲನ ಪ್ರಮುಖ ಕೃತಿ. ಮೊಘಲ್ ರಾಜಕುಮಾರ ದಾರಾ ಷುಕೋ ಶ್ರೇಷ್ಠ ವಿದ್ವಾಂಸನಾಗಿದ್ದು, **ಭಗವದ್ಗೀತೆಯನ್ನು** ಭಾಷಾಂತರ ಮಾಡಿದನು. ಹಿಂದಿ ಸಾಹಿತ್ಯವು ರಾಜಾಶ್ರಯ ಪಡೆಯದಿದ್ದರೂ ಸಂತರ ಯತ್ನದಿಂದ ಶ್ರೀಮಂತಗೊಂಡಿತು. ರಾಮಚರಿತಮಾನಸ ಎಂಬ ತುಲಸೀದಾಸನ ಪ್ರಸಿದ್ಧ ಕೃತಿ ಇದೇ ಕಾಲದ್ದು.

**ವಾಸ್ತುಶಿಲ್ಪ:** ದೆಹಲಿಯಲ್ಲಿರುವ **ಹುಮಾಯೂನನ ಸಮಾಧಿಯು** ಅಕ್ಬರನ ಆರಂಭ ಕಾಲದ ನಿರ್ಮಾಣವಾಗಿದೆ. ಅವನು ಫತೇಪುರ ಸಿಕ್ರಿಯಲ್ಲಿ (ಆಗ್ರಾದ ಸಮೀಪ) ನೂತನ ರಾಜಧಾನಿಯನ್ನು ಕಟ್ಟಿಸಿದನು. ರಾಜಧಾನಿಯ ಭವ್ಯವಾದ ಅರಮನೆ, ಮಸೀದಿ ಮತ್ತು ಮಂಟಪಗಳು ದೇಶವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇಲ್ಲಿಯ ಜಾಮೀ ಮಸೀದಿಯ ಪ್ರವೇಶ ದ್ವಾರ (**ಬುಲುಂದ್ ದರ್ವಾಜಾ**) ಭಾರತದಲ್ಲಿಯೇ ಅತ್ಯುನ್ನತವಾಗಿದೆ. ಇದರ ಎತ್ತರ 40 ಮೀ.

© KTBS NOT TO BE REPUBLISHED



**ಹುಮಾಯೂನನ ಸಮಾಧಿ, ದಿಲ್ಲಿ**

ಷಹಜಹಾನನು ಆಗ್ರಾ ಕೋಟೆಯೊಳಗೆ ಕಟ್ಟಿಸಿದ ಅರಮನೆ, ಮೋತಿ ಮಹಲ್ ಅಮೋಘವಾಗಿವೆ. ಈತನು ಆಗ್ರಾದಲ್ಲಿ ತನ್ನ ಪ್ರೀತಿಯ ರಾಣಿಯಾದ ಮುಮ್ತಾಜ್ ಮಹಲ್‌ಳ ಸ್ಮರಣಾರ್ಥವಾಗಿ ನಿರ್ಮಿಸಿದ ತಾಜ್‌ಮಹಲ್ ಮೊಘಲ್ ವಾಸ್ತುಶಿಲ್ಪಕ್ಕೆ ಕಳಸಪ್ರಾಯವಾಗಿದೆ. ದೆಹಲಿಯ ಪ್ರಸಿದ್ಧ ಕೆಂಪು ಕೋಟೆಯನ್ನು ಕೂಡ ಷಹಜಹಾನನು ಕಟ್ಟಿಸಿದನು.



**ಕೋಟೆ, ಆಗ್ರಾ**



**ಕೆಂಪು ಕೋಟೆ, ದಿಲ್ಲಿ**

**ಚಿತ್ರಕಲೆ:** ಮೊಘಲರ ಕಾಲದಲ್ಲಿ ನೂತನ ಚಿತ್ರಕಲಾ ಸಂಪ್ರದಾಯವೊಂದು ಹುಟ್ಟಿಕೊಂಡಿತು. ಇದನ್ನು ಚಿಕಿಣಿ ಎಂದು ಕರೆಯಲಾಗಿದೆ. ಅಕ್ಬರನ ಆಸ್ಥಾನದಲ್ಲಿ ನೂರಕ್ಕೂ ಹೆಚ್ಚು ಚಿತ್ರಕಾರರಿದ್ದರು. ಚಿತ್ರಕಲೆಯು ಜಹಾಂಗೀರನ ಆಶ್ರಯದಲ್ಲಿ ಪರಿಪಕ್ವಗೊಂಡಿತು. ಮೂಲಭೂತವಾದಿಯಾಗಿದ್ದ ಔರಂಗಜೇಬ ಚಿತ್ರಕಲೆಗೆ ಪ್ರೋತ್ಸಾಹ ನೀಡಲಿಲ್ಲ.

©KTBS Not to be REPUBLISHED

**ಸಂಗೀತ:** ಅಕ್ಬರನ ಕಾಲದಲ್ಲಿ ಸಂಗೀತ ಕಲೆಗೆ ಪ್ರೋತ್ಸಾಹ ನೀಡಲಾಗಿತ್ತು. ಆಸ್ಥಾನದ ಸಂಗೀತಗಾರರನ್ನು ಏಳು ತಂಡಗಳಾಗಿ ವಿಂಗಡಿಸಲಾಗಿತ್ತು. ದಿನಕ್ಕೊಂದು ತಂಡದಂತೆ ಸಂಗೀತ ಕಚೇರಿಯನ್ನು ನಡೆಸಲಾಗುತ್ತಿತ್ತು. ತಾನ್‌ಸೇನನು ಅಕ್ಬರನ ಆಸ್ಥಾನದ ಅಮರ ಸಂಗೀತಗಾರ. ಜಹಾಂಗೀರ್ ಮತ್ತು ಷಹಜಹಾನನ ಕಾಲದಲ್ಲಿ ಕೂಡ ಸಂಗೀತಕ್ಕೆ ಪ್ರೋತ್ಸಾಹ ಸಿಕ್ಕಿತು. ಆದರೆ ಔರಂಗಜೇಬ ಸಂಗೀತವನ್ನು ನಿಷೇಧ ಮಾಡಿದನು. ಆದರೂ ಸಂಗೀತವು ಜನಮನದಿಂದ ಅಳಿಯಲಿಲ್ಲ.

## ಮೊಘಲ್ ಸಾಮ್ರಾಜ್ಯದ ಅವನತಿ

ಔರಂಗಜೇಬನ ಕಾಲದಲ್ಲಿ ಸಾಮ್ರಾಜ್ಯವು ದುರ್ಬಲಗೊಂಡಿತು. ಇದಕ್ಕೆ ಕಾರಣಗಳು ಇವಾಗಿವೆ:

- ಸರದಾರರು ಭ್ರಷ್ಟರಾಗತೊಡಗಿದರು.
- ಸಿಂಹಾಸನದ ಉತ್ತರಾಧಿಕಾರಕ್ಕಾಗಿ ಭೀಕರ ಅಂತಃಕಲಹಗಳು ನಡೆದವು.
- ಪ್ರಾಂತಾಧಿಕಾರಿಗಳು ಇದರ ಲಾಭಪಡೆದು ಸ್ವತಂತ್ರರಾಗಿ ಆಳ್ವಿಕೆ ನಡೆಸಿದರು.
- ಎಲ್ಲಕ್ಕಿಂತ ಮುಖ್ಯವಾಗಿ ಭಾರತವನ್ನು ಒಂದು ಇಸ್ಲಾಂಮತೀಯ ರಾಜ್ಯವನ್ನಾಗಿ ಪರಿವರ್ತಿಸುವ ಔರಂಗಜೇಬನ ನೀತಿಗೆ ಎಲ್ಲೆಡೆ ವಿರೋಧ ವ್ಯಕ್ತವಾಯಿತು.
- ಸಿಖ್ಖರು, ರಜಪೂತರು ಮತ್ತು ಮರಾಠರೊಂದಿಗೆ ದೀರ್ಘಕಾಲದ ಸಂಘರ್ಷಗಳು ಸಾಮ್ರಾಜ್ಯದ ಶಕ್ತಿಯನ್ನು ಪೂರ್ತಿಯಾಗಿ ಇಂಗಿಸಿತು.
- ಈ ನಡುವೆ ನಾದಿರ್‌ಷಾ ಎಂಬ ಪರ್ಷಿಯದ ದಾಳಿಕೋರನು ದೆಹಲಿಯ ಮೇಲೆ ಆಕ್ರಮಣಗೈದನು. ಮೊಘಲರು ಎರಡು ನೂರು ವರ್ಷ ಕಾಲ ಸಂಗ್ರಹಿಸಿದ ಧನಕನಕಾದಿಗಳನ್ನು ಸೂರೆಗೈದನು. ಜಗತ್ಪ್ರಸಿದ್ಧ ಕೊಹಿನೂರ್ ವಜ್ರ ಹಾಗೂ ಷಹಜಹಾನನ ಮಯೂರಸಿಂಹಾಸನ ಅವನು ಒಯ್ದುನು. ಮೊಘಲರ ಖಜಾನೆ ಬರಿದಾಯಿತು.

NOT TO BE REPUBLISHED ©KTBS

# ಮರಾಠರು

## ಛತ್ರಪತಿ ಶಿವಾಜಿ

ಶಿವಾಜಿಯ ಹೆಸರನ್ನು ಕೇಳದವರು ವಿರಳ. ಶಿವಾಜಿಯ ಜೀವಿತದ ಕಾಲ 17ನೇ ಶತಮಾನ. ಹಿಂದೂ ಧರ್ಮ-ಸಂಸ್ಕೃತಿಯು ಆಘಾತಕ್ಕೆ ಒಳಗಾಗಿದ್ದ ಕಾಲವದು. ಉತ್ತರ ಭಾರತದಲ್ಲಿ ಮೊಘಲ್ ಸಾಮ್ರಾಟ್ ಔರಂಗಜೇಬನು ತನ್ನ ಆಳ್ವಿಕೆಯನ್ನು ಮತೀಯ ನೆಲೆಯಲ್ಲಿ ನಡೆಸುತ್ತಿದ್ದನು. ಇದೇ ಕಾಲದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದ ಹೆಚ್ಚಿನ ಪ್ರದೇಶಗಳು ವಿಜಯಪುರದ ಆದಿಲ್‌ಷಾಹಿಗಳ ವಶದಲ್ಲಿದ್ದವು. ಇಂಥ ಸಂದಿಗ್ಧಕಾಲದಲ್ಲಿ ಶಿವಾಜಿಯು ಸ್ವತಂತ್ರ ರಾಜ್ಯವನ್ನು ಕಟ್ಟುವ ಅಭಿಲಾಷೆ ಹೊಂದಿದ್ದನು.

## ಶಿವಾಜಿಯ ಬಾಲ್ಯ



ಛತ್ರಪತಿ ಶಿವಾಜಿ

ಶಿವಾಜಿಯು ಪುಣೆಯ ಬಳಿ ಇರುವ ಶಿವನೇರಿ ದುರ್ಗದಲ್ಲಿ ಜನಿಸಿದನು. ಇವನ ತಂದೆ ಷಹಜಿ ಭೋಸ್ಲೆ. ಈತನು ವಿಜಯಪುರ ಸುಲ್ತಾನನ ಬಳಿ ಉನ್ನತ ಹುದ್ದೆಯಲ್ಲಿ ಇದ್ದುದರಿಂದ ತಾಯಿ ಜೀಜಾಬಾಯಿಯೇ ಶಿವಾಜಿಯ ಭವಿಷ್ಯ ರೂಪಿಸಿದಳು. ಅವಳು ರಾಮಾಯಣ, ಮಹಾಭಾರತ ಮುಂತಾದ ಕಾವ್ಯ ಪುರಾಣಗಳ ವೀರಾಧಿವೀರರ ಕಥೆಗಳನ್ನು ತನ್ನ ಮಗನಿಗೆ ಹೇಳುತ್ತ ಅವನಲ್ಲಿ ಧರ್ಮರಕ್ಷಣೆ, ದೇಶಾಭಿಮಾನದ ಮನೋಭಾವವನ್ನು ಪ್ರಚೋದಿಸಿದ್ದಳು. ಗುರುವಾಗಿದ್ದ ದಾದಾಜಿ ಕೊಂಡದೇವ ಮತ್ತು ತಾನಾಜಿ ಮಾಲಸುರೆ ಶಿವಾಜಿಗೆ ಶಸ್ತ್ರಾಸ್ತ್ರ ವಿದ್ಯೆ ಕಲಿಸಿ, ಈ ತರುಣ ವೀರನ ಮನಸ್ಸನ್ನು ಜಾಗೃತಗೊಳಿಸಿದರು. ಪ್ರಾರಂಭದಲ್ಲಿ ಶಿವಾಜಿಯು ಮರಾಠ ಮುಖಂಡರು ಮತ್ತು ಪಶ್ಚಿಮ ಘಟ್ಟಗಳ ಮಾವಳಿಯೆಂಬ ದೃಢಕಾಯರಾದ ಗಿರಿಜನರನ್ನು ಸೇರಿಸಿ ತರುಣರ ಪಡೆಯನ್ನು ಕಟ್ಟಿದನು.

© KTBS NOT TO BE REPUBLISHED

**ಶಿವಾಜಿಯ ಆರಂಭದ ಸಾಹಸಗಳು:** ಶಿವಾಜಿಯು ತನ್ನ 19ನೇ ವರ್ಷದಲ್ಲಿ ವಿಜಯಪುರದ ಆದಿಲ್‌ಷಾನ ಅಧೀನದಲ್ಲಿದ್ದ ತೋರಣದುರ್ಗವನ್ನು ವಶಪಡಿಸಿಕೊಂಡನು. ನಂತರ ರಾಯಗಡ, ಸಿಂಹಗಡ, ಪ್ರತಾಪಗಡ ಮುಂತಾದ ಕೋಟೆಗಳನ್ನು ಒಂದೊಂದಾಗಿ ಗೆದ್ದುಕೊಂಡನು. ಇದರಿಂದ ಕುಪಿತನಾದ ವಿಜಯಪುರ ಸುಲ್ತಾನನು ಶಿವಾಜಿಯನ್ನು ಹತ್ತಿಕ್ಕಲು ತನ್ನ ಸೇನಾನಿ ಅಫ್ಜಲ್‌ಖಾನನನ್ನು ಕಳುಹಿಸಿದನು. ಅಫ್ಜಲ್‌ಖಾನ್ ಒಪ್ಪಂದದ ಮಾತುಗಳನ್ನಾಡಲು ಶಿವಾಜಿಯನ್ನು ಬರಹೇಳಿ, ಮೋಸದಿಂದ ಅವನನ್ನು ಕೊಲ್ಲಲೆತ್ನಿಸಿದ. ಆದರೆ ಶಿವಾಜಿಯದೇ ಮೇಲುಗೈ ಆಗಿ ಅವನು ಅಫ್ಜಲ್‌ಖಾನನನ್ನು ಕೊಂದನು.

> ಶಿವಾಜಿ ಮತ್ತು ಅಫ್ಜಲ್‌ಖಾನ್ ಭೇಟಿಯಾದಾಗ ಪರಸ್ಪರ ಆಲಿಂಗನದ ವೇಳೆ ಖಾನನು ತನ್ನ ಕಠಾರಿಯಿಂದ ಶಿವಾಜಿಯ ಬೆನ್ನಿಗೆ ಇರಿಯುವಷ್ಟರಲ್ಲಿಯೇ ಶಿವಾಜಿ ಗುಪ್ತವಾಗಿ ಧರಿಸಿದ್ದ ಹುಲಿಯುಗುರಿನಿಂದ (ವ್ಯಾಘ್ರನಖ) ಆತನ ದೇಹವನ್ನು ಸೀಳಿ ಕೊಂದನು.



ವ್ಯಾಘ್ರನಖ ಎಂಬ ಆಯುಧ

**ಮೊಘಲ್ ಸೇನಾನಿಯ ಅಪಜಯ:** ಶಿವಾಜಿಯು ದಿನೇದಿನೇ ಬಲಗೊಳ್ಳುತ್ತಿರುವ ಸುದ್ದಿ ಔರಂಗಜೇಬನ ಕಿವಿಗೂ ಮುಟ್ಟಿತು. ಔರಂಗಜೇಬನು ದಖನ್ ಪ್ರದೇಶದಲ್ಲಿ ತನ್ನ ಅಧಿಕಾರಿಯಾಗಿದ್ದ ಷಯಿಸ್ತಾಖಾನನನ್ನು ಶಿವಾಜಿಯ ನಿಗ್ರಹಕ್ಕಾಗಿ ಕಳುಹಿಸಿಕೊಟ್ಟ. ಆದರೆ ಶಿವಾಜಿ ಷಯಿಸ್ತಾಖಾನನ್ನು ಉಪಾಯದಿಂದ ಸೋಲಿಸಿದ.

ಷಯಿಸ್ತಾಖಾನ್ ಪುಣೆಯ ಅರಮನೆಯಲ್ಲಿ ಬೀಡುಬಿಟ್ಟಿದ್ದ. ಎರಡು ವರ್ಷ ಕಳೆದರೂ ಶಿವಾಜಿಯನ್ನು ಸೆರೆಹಿಡಿಯಲು ಅವನಿಗೆ ಸಾಧ್ಯವಾಗಲಿಲ್ಲ. ಶಿವಾಜಿ ಸೈನಿಕರೊಂದಿಗೆ ವೇಷ ಬದಲಿಸಿ ಖಾನನ ವಾಸಸ್ಥಾನವನ್ನು ಕಾಳರಾತ್ರಿಯ ವೇಳೆ ಪ್ರವೇಶಿಸಿ ಆತನ ಮೇಲೆ ಹಠಾತ್ತನೆ ದಾಳಿಯಿಟ್ಟ. ಖಾನನು ಹೇಗೋ ದಾಳಿಯಿಂದ ಪಾರಾದರೂ ತನ್ನ ಹೆಬ್ಬೆರಳನ್ನು ಕಳೆದುಕೊಂಡ. ಷಯಿಸ್ತಾಖಾನ್ ಭಯಭೀತಿಯಿಂದ ಪುಣೆಯಿಂದ ಪಲಾಯನ ಮಾಡಿದ.

**ದಖನಿಗೆ ರಾಜಾ ಜಯಸಿಂಹ:** ಇದಾದ ಮುಂದಿನ ವರ್ಷವೇ ಶಿವಾಜಿ ಮೊಘಲರ ವಶವಿದ್ದ ಸೂರತ್ ನಗರವನ್ನು ಮುತ್ತಿಗೆ ಹಾಕಿ ಅಪಾರ ಧನವನ್ನು ವಶಪಡಿಸಿಕೊಂಡ. ಸಿಟ್ಟಿಗೆದ್ದ ಔರಂಗಜೇಬ್ ಹೇಗಾದರೂ ಮಾಡಿ ಶಿವಾಜಿಯನ್ನು ಸೋಲಿಸಬೇಕೆಂದು ಪಣತೊಟ್ಟು ರಾಜಾ ಜಯಸಿಂಹನೆಂಬ ಉನ್ನತ ಸೇನಾನಿಯನ್ನು ಕಳುಹಿಸಿದ. ಅವರೊಳಗೆ ಯುದ್ಧ ನಡೆದು ಶಿವಾಜಿ ಸೋತನಲ್ಲದೆ ತನ್ನ ಹಲವು ಕೋಟೆಗಳನ್ನು ಮೊಘಲರಿಗೆ ಒಪ್ಪಿಸಬೇಕಾಗಿ ಬಂದಿತು. ಒಪ್ಪಂದ ಮಾಡಿಕೊಳ್ಳಲು ಶಿವಾಜಿಯನ್ನು ದಿಲ್ಲಿಗೆ ಬರಮಾಡಿಕೊಳ್ಳಲಾಯಿತು. ಔರಂಗಜೇಬ್ ಶಿವಾಜಿಯನ್ನು ಬಂಧಿಸಿ ಆಗ್ರಾದ ಸೆರೆಮನೆಯಲ್ಲಿಟ್ಟ. ಆದರೆ ಶಿವಾಜಿಯು ಉಪಾಯದಿಂದ ಸೆರೆಯಿಂದ ತಪ್ಪಿಸಿಕೊಂಡು ತನ್ನ ರಾಜಧಾನಿ ಸೇರಿದ.

ಶಿವಾಜಿ ಹೇಗೆ ತಪ್ಪಿಸಿಕೊಂಡ? ಶಿವಾಜಿ ತಾನು ಹಠಾತ್ತನೆ ಅಸ್ವಸ್ಥನಾಗಿದ್ದೇನೆ ಎಂಬ ಸುದ್ದಿಯನ್ನು ಹರಡಿಸಿದನು. ಬೇಗ ಗುಣಮುಖನಾಗಲೆಂದು ಭಾರಿ ಗಾತ್ರದ ಬುಟ್ಟಿಗಳಲ್ಲಿ ಹಣ್ಣುಹಂಪಲು, ಮಿಠಾಯಿಗಳನ್ನು ಬಡವರಿಗೆ ನೀಡುವ ವ್ಯವಸ್ಥೆ ಮಾಡಿಸಿದ. ಜೈಲಿನಿಂದ ಬುಟ್ಟಿಗಳು ಒಳಗೂ ಹೊರಗೂ ಹೋಗಲಾರಂಭಿಸುತ್ತಿದ್ದಂತೆ ಪಹರೆಗಾರರ ತಪಾಸಣೆ ಕ್ರಮೇಣ ಕಡಿಮೆಯಾಗತೊಡಗಿತು. ಒಂದು ದಿನ ಶಿವಾಜಿ ತನ್ನ ಮಗನೊಂದಿಗೆ ಬುಟ್ಟಿಗಳಲ್ಲಿ ಅಡಗಿ ಕುಳಿತು ಪಹರೆಗಾರರ ಕಣ್ಣುತಪ್ಪಿಸಿ ಜೈಲಿನಿಂದ ಪರಾರಿಯಾದ. ದೀರ್ಘ ಪ್ರಯಾಣದ ಬಳಿಕ ತನ್ನ ರಾಜಧಾನಿ ಸೇರಿದ. ಇದೊಂದು ಅದ್ಭುತ ಸಾಹಸವಾಗಿತ್ತು.

NOT TO BE REPUBLISHED ©KTBS

ಮುಂದೆ ಎರಡು ವರ್ಷಗಳ ಕಾಲ ಶಿವಾಜಿಯು ತನ್ನ ಅಧಿಕಾರವನ್ನು ಇನ್ನಷ್ಟು ಬಲಪಡಿಸಿಕೊಂಡ. ಕಳೆದುಕೊಂಡ ಎಲ್ಲಾ ಕೋಟೆಗಳನ್ನು ಮೊಘಲರಿಂದ ಗೆದ್ದುಕೊಂಡು ಸೂರತ್ ನಗರಕ್ಕೆ ಮುತ್ತಿಗೆ ಹಾಕಿ ಅಪಾರ ಸಂಪತ್ತನ್ನು ಸಂಗ್ರಹಿಸಿದ.



ಶಿವಾಜಿಯ ಕೋಟೆ, ರಾಯಗಡ

**ಶಿವಾಜಿಯ ಪಟ್ಟಾಭಿಷೇಕ:** ಅಲ್ಪಕಾಲದಲ್ಲೇ ಶಿವಾಜಿಯ ಪಟ್ಟಾಭಿಷೇಕವು ರಾಜಧಾನಿಯಾದ ರಾಯಗಡದಲ್ಲಿ ಅತ್ಯಂತ ವೈಭವದಿಂದ ನಡೆಯಿತು. ಅವನು 'ಛತ್ರಪತಿ' ಎಂಬ ಬಿರುದು ಧರಿಸಿ ತನ್ನ ರಾಜ್ಯವನ್ನು

'ಹಿಂದವೀ ಸ್ವರಾಜ್ಯ' ಎಂದು ಕರೆದ. ಮುಂದೆ ಶಿವಾಜಿಯು ಜಿಂಜಿ, ವೆಲ್ಲೂರು, ಮೈಸೂರು ಪ್ರಾಂತದ ವಿಶಾಲವಾದ ಭೂಭಾಗವನ್ನು ಗೆದ್ದುಕೊಂಡು ಅಪಾರ ಸಂಪತ್ತನ್ನು ಕೂಡಿಹಾಕಿದ. ಆದರೆ ಮರಾಠರ ವೈಭವವನ್ನು ನೋಡಲು ಶಿವಾಜಿ ಬಹುಕಾಲ ಬಾಳಲಿಲ್ಲ.




NOT TO BE REPUBLISHED ©KTBS

## ಶಿವಾಜಿಯ ಆಡಳಿತ ಪದ್ಧತಿ

ಆಡಳಿತದಲ್ಲಿ ಸಹಕರಿಸಲು **ಅಷ್ಟಪ್ರಧಾನರು** ಎಂಬ ಎಂಟು ಮಂತ್ರಿಗಳಿದ್ದರು. ಪ್ರಧಾನಮಂತ್ರಿಯನ್ನು **ಪೇಶ್ವೆ** ಎಂದು ಕರೆಯಲಾಗುತ್ತಿತ್ತು.

♦ **ಕಂದಾಯ ಆಡಳಿತ:** ರೈತರು ಬಿತ್ತನೆ ಬೀಜ ಮತ್ತು ರಾಸುಗಳನ್ನು ಕೊಳ್ಳಲು ಅನುಕೂಲವಾಗುವಂತೆ ಸರ್ಕಾರ ಅವರಿಗೆ ಸಾಲ ನೀಡುತ್ತಿತ್ತು. ಕೃಷಿಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿತ್ತು. ಉತ್ಪನ್ನದ ಮೂರನೇ ಒಂದು ಭಾಗವನ್ನು ಕಂದಾಯ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು.

♦ **ಸೈನ್ಯಾಡಳಿತ:** ಶಿವಾಜಿಯು ಸೈನ್ಯಾಡಳಿತಕ್ಕೆ ವಿಶೇಷ ಒತ್ತುಕೊಟ್ಟನು. ಸೈನ್ಯದಲ್ಲಿ ಕಾಲ್ದಳ, ಅಶ್ವದಳ, ನೌಕಾದಳ ಮತ್ತು ಫಿರಂಗಿದಳಗಳಿದ್ದುವು. ಶಿವಾಜಿಯ ಸೈನ್ಯವು ಶಿಸ್ತಿಗೆ ಹೆಸರಾಗಿತ್ತು. ಬ್ರಾಹ್ಮಣರನ್ನು ಮತ್ತು ಹಸುಗಳನ್ನು ಲೂಟಿ ಮಾಡುವಂತಿರಲಿಲ್ಲ.

♦ **ಕೋಟೆಗಳು:** ಶಿವಾಜಿ ಗೆರಿಲ್ಲ ಯುದ್ಧತಂತ್ರವನ್ನು ಬಳಸುತ್ತಿದ್ದ. ಗೆರಿಲ್ಲ ಯುದ್ಧಯೋಧರಿಗೆ ರಕ್ಷಣೆ ಪಡೆಯಲು ಕೋಟೆಗಳು ಅತ್ಯುತ್ತಮ ಸ್ಥಳಗಳಾಗಿದ್ದವು. ಅವನ ವಶದಲ್ಲಿದ್ದ 240 ಕೋಟೆಗಳಲ್ಲಿ 111 ಕೋಟೆಗಳನ್ನು ಅವನೇ ಕಟ್ಟಿಸಿದ್ದನು.

ಚಿಕ್ಕ ಚಿಕ್ಕ ತಂಡಗಳಲ್ಲಿ ಶತ್ರುಗಳ ಮೇಲೆ ಹಠಾತ್ತನೆ ದಾಳಿ ಮಾಡುವ, ಶತ್ರುಗಳಿಗೆ ಕಾಟ ಕೊಡುವ ಯುದ್ಧತಂತ್ರವೇ ಗೆರಿಲ್ಲ ಯುದ್ಧತಂತ್ರ. ಯುದ್ಧಕಾಲದಲ್ಲಿ ಸೆರೆಸಿಕ್ಕಿದ ಸ್ತ್ರೀಯರನ್ನು ಅವರ ಪೋಷಕರಿಗೆ ಒಪ್ಪಿಸಲಾಗುತ್ತಿತ್ತು. ಯುದ್ಧಕಾಲದಲ್ಲಿ ಸೈನಿಕರು ಮಸೀದಿಗಳನ್ನು ನಾಶಮಾಡುವಂತಿರಲಿಲ್ಲ. ಪವಿತ್ರ ಕುರಾನಿನ ಪ್ರತಿಯು ಕೈಸೇರಿದರೆ ಅದನ್ನು ಗೌರವಪೂರ್ವಕವಾಗಿ ಸಂಬಂಧಪಟ್ಟವರಿಗೆ ಹಿಂತಿರುಗಿಸಬೇಕಾಗಿತ್ತು.

### ಶಿವಾಜಿಯ ವ್ಯಕ್ತಿತ್ವ ಮತ್ತು ಸಾಧನೆ

- ತನ್ನ ಜೀವನದಲ್ಲಿ ಅತ್ಯುಚ್ಚ ಗುಣಸ್ವಭಾವವನ್ನು ಹೊಂದಿದ ದೊರೆ ಶಿವಾಜಿ. ಅವನ ಪರಧರ್ಮಸಹಿಷ್ಣುತೆ ಅನುಸರಣೀಯವಾಗಿತ್ತು.
- ಶಿವಾಜಿಯು ಬಾಲ್ಯದಿಂದಲೂ ಉತ್ತಮ ನಾಯಕನಾಗಿದ್ದನು. ಶಕ್ತಿಯನ್ನು ಶಕ್ತಿಯಿಂದಲೂ, ಮೋಸವನ್ನು ಮೋಸದಿಂದಲೂ ಎದುರಿಸುವ ಕಾರ್ಯಚತುರತೆ ಅವನಲ್ಲಿತ್ತು.
- ಶಿವಾಜಿಯ ಸೇನಾ ವ್ಯವಸ್ಥೆ ಅದ್ಭುತವಾಗಿತ್ತು. ಗೆರಿಲ್ಲ ಯುದ್ಧತಂತ್ರವು ಅವನ ಪ್ರತಿಭೆಗೆ ಸಾಕ್ಷಿಯಾಗಿತ್ತು. ಒಟ್ಟಿನಲ್ಲಿ ಶಿವಾಜಿಯು ಓರ್ವ ಆದರ್ಶ ಪುರುಷನಾಗಿದ್ದನು.

© KTBS NOT TO BE REPUBLISHED

ಶಿವಾಜಿಯ ಗುರು ಸಮರ್ಥ ರಾಮದಾಸರು ಒಮ್ಮೆ ಶಿವಾಜಿಯಲ್ಲಿಗೆ ಬಂದು ಭಿಕ್ಷಾಪಾತ್ರೆಯನ್ನು ಚಾಚಿದಾಗ ತನ್ನ ರಾಜ್ಯವನ್ನೇ ಅವರಿಗೆ ಒಪ್ಪಿಸಿಕೊಟ್ಟ. ರಾಮದಾಸರು ಇದನ್ನು ಸ್ವೀಕರಿಸಿ, ಮತ್ತೆ ಶಿವಾಜಿಗೆ ಹಿಂದಿರುಗಿಸಿದರು. "ನನ್ನ ಪರವಾಗಿ ನೀನು ರಾಜ್ಯವಾಳು", ಎಂದು ಹರಸಿದರು. ಸಂತ ರಾಮದಾಸರ ಪ್ರೇರಣೆಯಿಂದ ಮಹಾರಾಷ್ಟ್ರದಲ್ಲಿ ಸುಮಾರು 1200 ಗರಡಿ ಮನೆಗಳನ್ನು ಸ್ಥಾಪಿಸಲಾಯಿತು.

### ಕಾಲಗಣನೆ

| | | |
|---|---|---|
| ಬಾಬರ್ | – | 1526–1530 |
| ಅಕ್ಬರ್ | – | 1556–1605 |
| ಔರಂಗಜೇಬ | – | 1659–1707 |
| ಶಿವಾಜಿ | – | 1627–1680 |

### ಹೊಸ ಪದಗಳು

ಕಲಿತನ – ಶೂರತನ

ಪುತ್ತಳಿ – ವಿಗ್ರಹ

ಕೊತ್ವಾಲ್ – ಕೋಟೆ ಮತ್ತು ನಗರ ರಕ್ಷಕ

ಜೆಸಿಯಾ – ಮುಸಲ್ಮಾನ ದೊರೆಗಳು ಪ್ರತಿಯೊಬ್ಬ ವ್ಯಕ್ತಿಯೂ ಕೊಡಬೇಕೆಂದು ಹಿಂದೂ ಜನರ ಮೇಲೆ ವಿಧಿಸುತ್ತಿದ್ದ ತಲೆಗಂದಾಯ

ಸರದಾರ – ಮುಖ್ಯ ಅಧಿಕಾರಿ

ಹೈಂದವೀ ಸ್ವರಾಜ್ಯ – ಹಿಂದೂ ಸ್ವರಾಜ್ಯ

ಛತ್ರಪತಿ – ಮಹಾರಾಜ

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ಅಕ್ಬರನನ್ನು ವಿರೋಧಿಸಿದ ಮೇವಾಡದ ಪ್ರಸಿದ್ಧ ರಾಣಾ ಯಾರು?

2 ಫತೇಪುರ್ ಸಿಕ್ರಿಯನ್ನು ಯಾವ ಸಾಮ್ರಾಟ ನಿರ್ಮಾಣ ಮಾಡಿದನು?

3 ತಾನ್‌ಸೇನ್ ಯಾರು?

4 ರಾಮಚರಿತಮಾನಸ ಯಾರು ಬರೆದ ಕೃತಿ?

@KTBS NOT TO BE REPUBLISHED

5 ಮೊಘಲ್ ಸಾಮ್ರಾಜ್ಯದ ಅವನತಿಗೆ ಕಾರಣವೊಂದನ್ನು ಹೇಳಿರಿ.

6 ಶಿವಾಜಿಯು ಎಲ್ಲಿ ಜನಿಸಿದನು?

7 ತಾಯಿ ಜೀಜಾಬಾಯಿ ಶಿವಾಜಿಯ ಭವಿಷ್ಯವನ್ನು ಹೇಗೆ ರೂಪಿಸಿದಳು?

8 ವಿಜಯಪುರದ ಸುಲ್ತಾನನು ಶಿವಾಜಿಯನ್ನು ಏಕೆ ವಿರೋಧಿಸಿದನು?

9 ಷಯಿಸ್ತಾಖಾನ್ ಯಾರು? ಶಿವಾಜಿಯೊಡನೆ ಅವನು ನಡೆಸಿದ ಸಂಘರ್ಷದ ಪರಿಣಾಮವೇನಾಯಿತು?

10 ಶಿವಾಜಿಯ ಪಟ್ಟಾಭಿಷೇಕ ಎಲ್ಲಿ ನಡೆಯಿತು? ಆ ಸಂದರ್ಭದಲ್ಲಿ ಅವನು ಯಾವ ಬಿರುದನ್ನು ಧರಿಸಿದನು?

11 ಶಿವಾಜಿಯ ಕೋಟೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

12 ನೀವು ಶಿವಾಜಿಯ ಯಾವ ಗುಣಗಳನ್ನು ಮೆಚ್ಚುವಿರಿ? ಏಕೆ?

## ಚಟುವಟಿಕೆಗಳು

1 ಮೊಘಲರ ವಾಸ್ತುಕೃತಿಗಳ ಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

2 ಮೊಘಲ್ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸಿ.

3 ಅಕ್ಬರ ಹಾಗೂ ಔರಂಗಜೇಬರ ಧೋರಣೆಯಲ್ಲಿನ ವಿರೋಧಾಭಾಸಗಳನ್ನು ಚರ್ಚಿಸಿ ಒಂದು ವರದಿ ತಯಾರಿಸಿ.

4 ಭೂಪಟದಲ್ಲಿ ಶಿವಾಜಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.

@KTBS NOT TO BE REPUBLISHED

# ಅಧ್ಯಾಯ 17 ರಾಜ್ಯ ನಿರ್ದೇಶಕ ತತ್ವಗಳು

A5Q4P4

**ಪಾಠದ ಪರಿಚಯ**

ನಮ್ಮ ಸಂವಿಧಾನವು ಕೆಲವು ನಿರ್ದೇಶಕ ತತ್ವಗಳನ್ನು ಒಳಗೊಂಡಿದೆ. ಪ್ರಸ್ತಾವನೆಯಲ್ಲಿ ವ್ಯಕ್ತವಾಗಿರುವ ಧ್ಯೇಯೋದ್ದೇಶಗಳನ್ನು ಸಾಧಿಸಲು ಇವು ಸಹಾಯವಾಗುತ್ತವೆ. ಪಾಠದಲ್ಲಿ ಇವುಗಳ ವಿವರಣೆಯಿದೆ.

**ಸಾಮರ್ಥ್ಯಗಳು**

1 ರಾಜ್ಯ ನಿರ್ದೇಶಕ ತತ್ವಗಳ ಉದ್ದೇಶಗಳನ್ನು ತಿಳಿಯುವುದು.

2 ರಾಜ್ಯ ನಿರ್ದೇಶಕ ತತ್ವಗಳು ಸುಖೀರಾಜ್ಯ ಸ್ಥಾಪನೆಗೆ ಹೇಗೆ ಪೂರಕವಾಗಿವೆ ಎಂಬುದನ್ನು ಅರ್ಥೈಸಿಕೊಳ್ಳುವುದು.

© KTBS NOT TO BE REPUBLISHED

ಸುಖೀರಾಜ್ಯ ಸ್ಥಾಪನೆಯ ಗುರಿಯನ್ನು ಸಾಧಿಸುವುದಕ್ಕಾಗಿ ಸಂವಿಧಾನವು ಕೆಲವು ತತ್ವಗಳನ್ನು ಮುಂದಿಟ್ಟು ರಾಜ್ಯಕ್ಕೆ ಮಾರ್ಗದರ್ಶನ ನೀಡಿದೆ. ಇಂತಹ ಮಾರ್ಗದರ್ಶಿ ಸೂತ್ರಗಳನ್ನು **ರಾಜ್ಯ ನಿರ್ದೇಶಕ ತತ್ವಗಳು** ಎನ್ನುವರು. ಯಾರೇ ಅಧಿಕಾರಕ್ಕೆ ಬಂದರೂ ಇವುಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯಭಾರ ಮಾಡಬೇಕೆಂಬುದು ಇವುಗಳ ಉದ್ದೇಶವಾಗಿದೆ.

ಭಾರತ ಗಣರಾಜ್ಯವು ಅನುಸರಿಸಬೇಕಾದ ಈ ಕೆಳಗಿನ ಸೂತ್ರಗಳು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಡಗಿವೆ.

1 **ಸಾಮಾಜಿಕ ನ್ಯಾಯ:** ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಒದಗಿಸಿ ಜನಕಲ್ಯಾಣವನ್ನು ಸಾಧಿಸುವುದು.

2 **ದುರ್ಬಲರಿಗೆ ಸಾಮಾಜಿಕ ನ್ಯಾಯ:** ದುರ್ಬಲರಿಗೆ ಜೀವನಾಧಾರ ನೀಡುವುದು; ಅವರ ಆರ್ಥಿಕ ಶೋಷಣೆಯ ನಿವಾರಣೆ ಮತ್ತು ಶೈಕ್ಷಣಿಕ ಹಾಗೂ ಆರ್ಥಿಕಾಭಿವೃದ್ಧಿ; ಮತ್ತು ಅವರಿಗೆ ಕಾನೂನಿನ ಉಚಿತ ನೆರವು.



*ದುರ್ಬಲರಿಗೆ ಸಾಮಾಜಿಕ ನ್ಯಾಯ*

3 **ಮಹಿಳೆ ಮತ್ತು ಶಿಶುಕಲ್ಯಾಣ:** ಒಂದೇ ರೀತಿಯ ಕೆಲಸಕ್ಕೆ ಪುರುಷರಷ್ಟೇ ಮಹಿಳೆಯರಿಗೂ ಸಮಾನ ವೇತನ; ಮಹಿಳೆಯರಿಗೆ ಹೆರಿಗೆ ಸೌಲಭ್ಯ; ಮಕ್ಕಳ ಶೋಷಣೆಯ ತಡೆ; ಮಕ್ಕಳು ಆರೋಗ್ಯವಂತರಾಗಿ ಬೆಳೆಯಲು ಅವಕಾಶ ಮತ್ತು ಅವರಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ.



*ಮಹಿಳೆ ಮತ್ತು ಶಿಶುಕಲ್ಯಾಣ*




*ಉಚಿತ ಮತ್ತು ಕಡ್ಡಾಯ ಶಿಕ್ಷಣ*

© KTBS NOT TO BE REPUBLISHED

4 **ಕಾರ್ಮಿಕ ಕಲ್ಯಾಣ:** ಕಾರ್ಮಿಕರ ಯೋಗಕ್ಷೇಮ ನೋಡಿಕೊಳ್ಳುವುದು; ದುಡಿಯುವ ಹಕ್ಕು; ದುಡಿಯಲು ಅನುಕೂಲಕರ ವಾತಾವರಣ; ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ; ಮತ್ತು ಅವರಿಗೆ ಆಡಳಿತದಲ್ಲಿ ಭಾಗಿಗಳಾಗಲು ಅವಕಾಶ.



*ಕಾರ್ಮಿಕ ಕಲ್ಯಾಣ*



*ಅಸಹಾಯಕರಿಗೆ ನೆರವು*

5 **ಅಸಹಾಯಕರಿಗೆ ನೆರವು:** ವೃದ್ಧ, ರೋಗಿ ಮತ್ತು ನಿರುದ್ಯೋಗಿಗಳು ಬದುಕಲು ಸರ್ಕಾರದಿಂದ ನೆರವು.

6 **ಸರ್ವರಿಗೂ ಸಮಾನ ಕಾನೂನು:** ಭಾರತದ ಎಲ್ಲ ಪ್ರಜೆಗಳಿಗೂ ಸಮಾನ ನಾಗರಿಕ ಕಾನೂನು ಜಾರಿಮಾಡುವುದು.

7 **ಮದ್ಯಪಾನ ನಿಷೇಧ:** ಮದ್ಯಪಾನದಿಂದ ಆರೋಗ್ಯ ಕೆಡುತ್ತದೆ; ಕುಟುಂಬದ ಆರ್ಥಿಕ ಸ್ಥಿತಿ ಹದಗೆಡುತ್ತದೆ; ಹಾಗೂ ಮಹಿಳೆಯರ ಶೋಷಣೆ ಹೆಚ್ಚುತ್ತದೆ. ಇದಕ್ಕಾಗಿ ನಮ್ಮ ಸಂವಿಧಾನವು ಮದ್ಯಪಾನ ನಿಷೇಧವನ್ನು ಜಾರಿಗೆ ತರುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.




*ಮದ್ಯಪಾನ ನಿಷೇಧ*



*ಜಾನುವಾರು– ನಮ್ಮ ದೇಶದ ಸಂಪತ್ತು*

8 **ಕೃಷಿ ಮತ್ತು ಪಶು ಸಂಗೋಪನೆಯ ಸಂಘಟನೆ:** "ರಾಜ್ಯವು ಕೃಷಿಯನ್ನು ಮತ್ತು ಪಶು ಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಂಘಟನೆ ಗೊಳಿಸುವುದಕ್ಕೆ ಪ್ರಯತ್ನಿಸತಕ್ಕದು ಮತ್ತು ವಿಶೇಷವಾಗಿ ತಳಿಗಳನ್ನು ಸಂರಕ್ಷಿಸಿ ಉತ್ತಮಗೊಳಿಸುವುದಕ್ಕಾಗಿ ಹಸುಗಳ ಮತ್ತು ಕರುಗಳ ಹಾಗೂ ಇತರ ಹಾಲು ಕೊಡುವ ಮತ್ತು ಭಾರ ಎಳೆಯುವ ದನಕರುಗಳ ವಧೆಯನ್ನು ನಿಷೇಧಿಸುವುದಕ್ಕಾಗಿ ಕ್ರಮ ಕೈಗೊಳ್ಳತಕ್ಕುದು" ಎಂದು ಸಂವಿಧಾನದಲ್ಲಿ ನಿರ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು 1964 ರಲ್ಲಿ ಪಶು ಹತ್ಯೆ ನಿಷೇಧ ಕಾಯಿದೆಯನ್ನು ಜಾರಿಗೆ ತಂದಿದೆ. (ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಪಶು ಹತ್ಯೆ ನಿಷೇಧ ಕಾನೂನು ಜಾರಿಯಲ್ಲಿದೆ).

@KTBS NOT TO BE REPUBLISHED



*ಕೃಷಿ ಅಭಿವೃದ್ಧಿ*



*ಆಧುನಿಕ ಕೃಷಿ*

9 **ಪರಿಸರ:** ಪರಿಸರ ರಕ್ಷಣೆ ಮತ್ತು ಅಭಿವೃದ್ಧಿ. ಉದಾ: ಗಣಿಗಾರಿಕೆ, ಕೈಗಾರಿಕೆಗಳಿಂದ ಉಂಟಾಗುವ ಮಾಲಿನ್ಯಗಳಿಂದ ಪರಿಸರವನ್ನು ಸಂರಕ್ಷಿಸುವುದು.



*ಪರಿಸರ ಸಂರಕ್ಷಣೆ*

10. **ಐತಿಹಾಸಿಕ ಸ್ಮಾರಕಗಳ ರಕ್ಷಣೆ.** ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಉದಾ : ಹಂಪಿ, ಬೇಲೂರು, ಹಳೇಬೀಡು, ಪಟ್ಟದಕಲ್ಲು ಮುಂತಾದವು.

11. **ಅಂತಾರಾಷ್ಟ್ರೀಯ ಶಾಂತಿ, ಭದ್ರತೆ**ಗಳನ್ನು ಕಾಪಾಡುವುದರಲ್ಲಿ ದೇಶವು ಸಹ ಭಾಗಿಯಾಗುವುದು.

ಸಾಮಾಜಿಕ ನ್ಯಾಯ ಎಂದರೇನು? ಜಾತಿ, ಧರ್ಮ, ಲಿಂಗ, ಭಾಷೆ, ವರ್ಣ, ಪ್ರದೇಶ ಮತ್ತು ಅಂತಸ್ತುಗಳ ಭೇದಭಾವ ಇಲ್ಲದೆ ಎಲ್ಲಾ ನಾಗರಿಕರಿಗೆ ರಕ್ಷಣೆ ನೀಡುವುದು ಹಾಗೂ ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡುವುದೇ ಸಾಮಾಜಿಕ ನ್ಯಾಯ. ಹಿಂದುಳಿದ ವರ್ಗಗಳ ಹಿತಾಸಕ್ತಿ, ವೇತನ ನಿಗದಿ, ಜೀತಪದ್ಧತಿಯ ನಿರ್ಮೂಲನ, ಮಕ್ಕಳ ಶೋಷಣೆಯ ನಿರ್ಮೂಲನ, ಸ್ತ್ರೀಯರಿಗೆ ಸಮಾನ ಹಕ್ಕು ಹಾಗೂ ಗೌರವ ಮುಂತಾದವುಗಳು ಸಾಮಾಜಿಕ ನ್ಯಾಯಕ್ಕೆ ಒಳಪಟ್ಟಿವೆ.

© KTBS NOT TO BE REPUBLISHED




*ಶೋಷಣೆ*

ಸಂವಿಧಾನವು ಹಲವಾರು ಸಲಹೆ ಮತ್ತು ನಿರ್ದೇಶನಗಳನ್ನು ರಾಜ್ಯಕ್ಕೆ ನೀಡಿದೆ. ಆದರೂ ಅವುಗಳ ಉಲ್ಲಂಘನೆಯಾದರೆ, ನಾಗರಿಕರು ನ್ಯಾಯಾಲಯದಲ್ಲಿ ದೂರು ಸಲ್ಲಿಸುವಂತಿಲ್ಲ. (ಉದಾಹರಣೆ – ಆರು ದಶಕಗಳು ಕಳೆದರೂ ಕೇಂದ್ರ ಸರ್ಕಾರವು ಮದ್ಯಪಾನ ನಿಷೇಧ ಕಾನೂನು ತಂದಿಲ್ಲ. ಈ ನಿಟ್ಟಿನಲ್ಲಿ ನ್ಯಾಯಾಲಯದಲ್ಲಿ ದೂರು ಸಲ್ಲಿಸುವಂತಿಲ್ಲ.)

**ಚಟುವಟಿಕೆ :** ರಾಜ್ಯ ನಿರ್ದೇಶಕ ತತ್ವಗಳು ನಮ್ಮ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಜಾರಿಗೆ ಬಂದಿವೆ? ಇಂದೂ ಬೇರೆ ಬೇರೆ ರೀತಿಯ ಶೋಷಣೆಗಳು ನಡೆಯುತ್ತಲೇ ಇವೆ. ಈ ವಿಚಾರದಲ್ಲಿ ಒಂದು ಚರ್ಚಾಕೂಟವನ್ನು ಏರ್ಪಡಿಸಿ ಅದರಲ್ಲಿ ಮೂಡಿಬಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ಪಟ್ಟಿ ಮಾಡಿ.

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ರಾಜ್ಯ ನಿರ್ದೇಶಕ ತತ್ವಗಳು ಎಂದರೇನು?

2 ಮಹಿಳೆ ಮತ್ತು ಶಿಶುಕಲ್ಯಾಣ ಸ್ಥಾಪಿಸುವುದಕ್ಕಾಗಿ ಸಂವಿಧಾನವು ರಾಜ್ಯಕ್ಕೆ ಯಾವ ನಿರ್ದೇಶನಗಳನ್ನು ನೀಡಿದೆ?

3 ರಾಜ್ಯ ನಿರ್ದೇಶಕ ತತ್ವಗಳು ಪಶುಹತ್ಯೆಯ ನಿಷೇಧ ಮಾಡಬೇಕೆಂದು ಏಕೆ ನಿರ್ದೇಶನ ನೀಡಿದೆ?

4 ಸರ್ವರಿಗೂ ಸಮಾನ ಕಾನೂನಿನ ಅವಶ್ಯಕತೆಯೇನು?

5 ಮದ್ಯಪಾನ ನಿಷೇಧವನ್ನು ಜಾರಿಗೆ ತರಲು ರಾಜ್ಯಕ್ಕೆ ನಿರ್ದೇಶನವನ್ನು ಏಕೆ ನೀಡಲಾಗಿದೆ?

### ಚರ್ಚಿಸಿ

1 ದುರ್ಬಲರಿಗೆ ಸಾಮಾಜಿಕ ನ್ಯಾಯ.

2 ಮದ್ಯಪಾನ ನಿಷೇಧ.

3 ಐತಿಹಾಸಿಕ ಸ್ಮಾರಕಗಳ ರಕ್ಷಣೆ.

4 ಮಕ್ಕಳ ಶಿಕ್ಷಣ ಹಕ್ಕನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಏನು ಮಾಡತಕ್ಕದ್ದು?

### ಚಟುವಟಿಕೆಗಳು

1 ನಿಮ್ಮ ಸುತ್ತಮುತ್ತಲಿನ ಸಮುದಾಯದಲ್ಲಿ ಕಂಡು ಬರುವ ಸಾಮಾಜಿಕ ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರನ್ನು ಗಮನಿಸಿ. ಅವರೇಕೆ ದುರ್ಬಲರಾಗಿದ್ದಾರೆ ಎಂಬುದರ ಬಗ್ಗೆ ಸಹಪಾಠಿಗಳೊಡನೆ ಚಿಂತನೆ ನಡೆಸು.

2 ಮದ್ಯಪಾನ ಸೇವನೆ ಹಾಗೂ ಮಾದಕ ಪದಾರ್ಥಗಳ ಬಳಕೆಯು ನಮ್ಮ ಯುವ ಜನಾಂಗದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳೇನು? ಈ ವಿಚಾರವಾಗಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.

3 ಮಕ್ಕಳ ಹಕ್ಕು ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಅವಶ್ಯಕವಾಗಿದೆ. ಅವುಗಳ ಉಲ್ಲಂಘನೆಯಾದಾಗ ಚೈಲ್ಡ್‌ಲೈನ್ 1098 ಎಂಬ ಸಹಾಯವಾಣಿ ಸಂಖ್ಯೆಗೆ ಕರೆಯನ್ನು ಮಾಡಬಹುದೆಂದು ನಿಮಗೆ ತಿಳಿದಿದೆ. ಈ ವಿಚಾರ ಕುರಿತು ಒಂದು ಚರ್ಚಾಗೋಷ್ಠಿ ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.

© KTBS NOT TO BE REPUBLISHED

| ಅಧ್ಯಾಯ 18 | ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು |
|---|---|

U9Y2T9

**ಪಾಠದ ಪರಿಚಯ**

ನಮ್ಮ ಸಂವಿಧಾನವು ಭಾರತದ ಪೌರರಿಗೆ ನೀಡಿರುವ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಈ ಪಾಠದಲ್ಲಿ ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1 ಸ್ವಾಭಾವಿಕ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳಿಗಿರುವ ವ್ಯತ್ಯಾಸ ತಿಳಿಯುವುದು.

2 ಭಾರತದ ಪ್ರಜೆಗೆ ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳನ್ನು ಅರ್ಥೈಸಿಕೊಳ್ಳುವುದು.

3 ಸಂವಿಧಾನದಲ್ಲಿ ಹೇಳಿರುವ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಅರಿತು ತಮ್ಮ ಜೀವನದಲ್ಲಿ ಅವುಗಳನ್ನು ಪಾಲಿಸಲು ಸಮರ್ಥರಾಗುವುದು.

4 ತಮಗಿರುವ ಹಕ್ಕುಗಳನ್ನು ಅನುಭವಿಸಲು ಅಡಚಣೆಯಾದಾಗ ಅವುಗಳನ್ನು ಮರಳಿ ಪಡೆಯುವ ವಿಧಾನಗಳನ್ನು ಕಂಡುಕೊಳ್ಳುವುದು.

NOT TO BE REPUBLISHED @KTBS

**ಹಕ್ಕುಗಳು ಎಂದರೇನು?**

'ಹಕ್ಕು' ಎಂದರೆ ನಾಗರಿಕರಿಗೆ ಸಲ್ಲಬೇಕಾದ ಅಧಿಕಾರ, ಅದು 'ಸ್ವಾಭಾವಿಕ ಹಕ್ಕು' ಆಗಿರಬಹುದು. (ಉದಾಹರಣೆ–ಬದುಕುವ ಹಕ್ಕು, ಜೀವರಕ್ಷಣೆಯ ಹಕ್ಕು). ಇಲ್ಲವೆ 'ನ್ಯಾಯಸಮ್ಮತ ಹಕ್ಕು' ಆಗಿರಬಹುದು. (ಉದಾಹರಣೆ–ಸಮಾನತೆಯ ಹಕ್ಕು, ವಿದ್ಯಾಭ್ಯಾಸದ ಹಕ್ಕು).

ವ್ಯಕ್ತಿಯ ವಿಕಾಸಕ್ಕೆ ಮತ್ತು ರಾಷ್ಟ್ರದ ಅಭ್ಯುದಯಕ್ಕೆ ಕೆಲವು ಸ್ವಾತಂತ್ರ್ಯಗಳು ಮತ್ತು ಮೂಲಭೂತ ಹಕ್ಕುಗಳು ಅನಿವಾರ್ಯ. ಆದ್ದರಿಂದಲೇ ಸಂವಿಧಾನವು ಪ್ರಜೆಗಳಿಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ.

## ಮೂಲಭೂತ ಹಕ್ಕುಗಳು

ಮೂಲಭೂತ ಹಕ್ಕುಗಳೆಂದರೆ ಸಂವಿಧಾನದಲ್ಲಿ ಹೇಳಲಾದ ಹಾಗೂ ರಕ್ಷಿಸಲಾಗುವ ಹಕ್ಕುಗಳು. ಇವು ನಾಗರಿಕರಿಗೆ ನೀಡಿದ ಸಾಂವಿಧಾನಿಕ ಹಕ್ಕುಗಳಾಗಿವೆ. ಇವುಗಳನ್ನು ಯಾರೂ ಉಲ್ಲಂಘಿಸುವಂತಿಲ್ಲ.

ಸಂವಿಧಾನವು ದೇಶದ ಎಲ್ಲಾ ನಾಗರಿಕರಿಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಅವು –

| | |
|---|---|
| 1 ಸಮಾನತೆಯ ಹಕ್ಕು | 4 ಧಾರ್ಮಿಕ ಸ್ವಾತಂತ್ರ್ಯದ ಹಕ್ಕು |
| 2 ಸ್ವಾತಂತ್ರ್ಯದ ಹಕ್ಕು | 5 ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು |
| 3 ಶೋಷಣೆಯ ವಿರುದ್ಧದ ಹಕ್ಕು | 6 ಸಂವಿಧಾನಬದ್ಧ ಪರಿಹಾರದ ಹಕ್ಕು |

**1 ಸಮಾನತೆಯ ಹಕ್ಕು:** ಕಾನೂನಿನ ಮುಂದೆ ಎಲ್ಲರೂ ಸಮಾನರು; ಯಾರೇ ಆಗಲಿ ಕಾನೂನಿಗಿಂತ ದೊಡ್ಡವರಲ್ಲ; ಮತ್ತು ಎಲ್ಲರಿಗೂ ಸಮಾನ ರಕ್ಷಣೆ ದೊರಕಬೇಕು ಎಂಬ ಅಂಶಗಳು ಸಮಾನತೆಯ ಹಕ್ಕಿನಲ್ಲಿ ಒಳಗೊಂಡಿವೆ.




NOT TO BE REPUBLISHED

*ಕಾನೂನಿನ ಮುಂದೆ ಎಲ್ಲರೂ ಸಮಾನರು*

ಧರ್ಮ, ಕುಲ, ಜಾತಿ, ಲಿಂಗ, ಜನ್ಮಸ್ಥಳ ಇವುಗಳ ಆಧಾರದ ಮೇಲೆ ರಾಜ್ಯವು ಪಕ್ಷಪಾತ ಮಾಡುವಂತಿಲ್ಲ. ಅಂಗಡಿ, ಹೋಟೆಲ್ ಮತ್ತು ಮನೋರಂಜನಾ ಸ್ಥಳಗಳ ಪ್ರವೇಶಕ್ಕೆ ಯಾವುದೇ ಪ್ರಜೆಯ ಮೇಲೆ ನಿರ್ಬಂಧ ಹೇರುವಂತಿಲ್ಲ. ಸಾರ್ವಜನಿಕ ಬಾವಿ, ಕೆರೆ, ರಸ್ತೆ ಮತ್ತು ವಿರಾಮ ಸ್ಥಳಗಳನ್ನು ಉಪಯೋಗಿಸಲು ಕೂಡಾ ನಿರ್ಬಂಧವಿರುವುದಿಲ್ಲ. ಸರ್ಕಾರಿ ಸೇವೆಗೆ ಸೇರಲು ಎಲ್ಲಾ ನಾಗರಿಕರಿಗೂ ಸಮಾನ ಅವಕಾಶವಿದೆ. ಸಾರ್ವಜನಿಕ ಪೂಜಾಸ್ಥಳಗಳಲ್ಲಿ ಆಯಾ ಮತಧರ್ಮದ ವ್ಯಕ್ತಿಯು ಪ್ರವೇಶಿಸಿ ಪ್ರಾರ್ಥನೆ ಮಾಡುವುದನ್ನು ತಡೆಯುವಂತಿಲ್ಲ.

**2 ಸ್ವಾತಂತ್ರ್ಯದ ಹಕ್ಕು:** ಸಂವಿಧಾನದಲ್ಲಿ ನೀಡಿರುವ ಸ್ವಾತಂತ್ರ್ಯದ ಹಕ್ಕು ಹೀಗಿದೆ –

1 ವಾಕ್‌ಸ್ವಾತಂತ್ರ್ಯ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ.

2 ಶಾಂತವಾಗಿ ಸಭೆ ಸೇರುವ ಸ್ವಾತಂತ್ರ್ಯ.

3 ಸಂಘಸಂಸ್ಥೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯ.

4 ದೇಶದ ಎಲ್ಲೆಡೆ ನಿರ್ಬಂಧವಿಲ್ಲದೆ ಸಂಚರಿಸುವ ಸ್ವಾತಂತ್ರ್ಯ.

5 ಭಾರತದ ಯಾವುದೇ ಭಾಗದಲ್ಲಾದರೂ ವಾಸಿಸುವ ಸ್ವಾತಂತ್ರ್ಯ.

6 ಯಾವುದೇ ಉದ್ಯೋಗ, ವೃತ್ತಿ, ವ್ಯಾಪಾರ, ವ್ಯವಹಾರ ಮಾಡುವ ಸ್ವಾತಂತ್ರ್ಯ.



*ವಾಕ್ ಸ್ವಾತಂತ್ರ್ಯ*

NOT TO BE REPUBLISHED @KTBS

**ಚಟುವಟಿಕೆ :** ವಾಕ್ ಸ್ವಾತಂತ್ರ್ಯ ಎಷ್ಟರಮಟ್ಟಿಗೆ ಪ್ರಾಮುಖ್ಯವಾಗಿದೆ? ಇಂದು ನಮ್ಮಲ್ಲಿ ಅದರ ದುರುಪಯೋಗವೂ ಆಗುತ್ತಿದೆ. ಈ ವಿಚಾರ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿರಿ.

ಸ್ವಾತಂತ್ರ್ಯವು ಮೂಲಭೂತ ಹಕ್ಕಾಗಿದ್ದರೂ ಅದನ್ನು ಮನಸ್ಸಿಗೆ ಬಂದಂತೆ ಚಲಾಯಿಸಲು ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ರಾಜ್ಯವು ವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧಗಳನ್ನು ಹೇರಬಹುದೆಂದು ಸಂವಿಧಾನವೇ ತಿಳಿಸುತ್ತದೆ. ಉದಾ: ವಾಕ್ ಸ್ವಾತಂತ್ರ ಇದೆಯೆಂದು ಬೇರೆಯವರ ಬಗ್ಗೆ ಇಲ್ಲಸಲ್ಲದ ಮಾತುಗಳನ್ನು ಆಡುವಂತಿಲ್ಲ.

**3 ಶೋಷಣೆಯ ವಿರುದ್ಧದ ಹಕ್ಕು:** ಬಡವರು, ಮಹಿಳೆಯರು, ಮಕ್ಕಳು ಮತ್ತು ದುರ್ಬಲರನ್ನು ಶೋಷಣೆ ಮಾಡಬಾರದು ಎಂಬುದು ಈ ಹಕ್ಕಿನ ಉದ್ದೇಶ. ಶೋಷಣೆಯನ್ನು ನಿಷೇಧಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕಾಯಿದೆಗಳನ್ನು ಜಾರಿಗೆ ತಂದಿವೆ. ಉದಾಹರಣೆಗೆ – ವರದಕ್ಷಿಣೆ ಪಡೆಯುವುದು ಶಿಕ್ಷಾರ್ಹವಾಗಿದೆ; ಜೀತಪದ್ಧತಿಯನ್ನು ನಿಷೇಧಿಸಲಾಗಿದೆ; ಗಣಿಗಾರಿಕೆ, ಬೀಡಿ ತಯಾರಿಕೆ, ಪಟಾಕಿ ತಯಾರಿಕೆಗಳಂತಹ ಅಪಾಯಕಾರಿ ಕೆಲಸಗಳಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಮಕ್ಕಳ ದುಡಿಮೆಯನ್ನು ಸರ್ಕಾರ ನಿಷೇಧಿಸಿದೆ. ಅವರು ಹದಿನಾಲ್ಕು ವರ್ಷ ಪ್ರಾಯದವರೆಗೆ ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು.



*ಮಕ್ಕಳ ದುಡಿಮೆಯನ್ನು ಸರ್ಕಾರ ನಿಷೇಧಿಸಿದೆ*

**4 ಧಾರ್ಮಿಕ ಸ್ವಾತಂತ್ರ್ಯದ ಹಕ್ಕು:** ಪ್ರತಿಯೊಬ್ಬ ನಾಗರಿಕನು ತನಗೆ ಬೇಕಾದ ಧರ್ಮ ಪಾಲಿಸುವ ಹಕ್ಕನ್ನು ಹೊಂದಿರುತ್ತಾನೆ. ಸಾರ್ವಜನಿಕ ಶಿಸ್ತು, ನೀತಿ ಮತ್ತು ನೈರ್ಮಲ್ಯ ಹಾಗೂ ಇತರ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು, ಮತಧರ್ಮವನ್ನು ಆಚರಿಸುವ ಹಕ್ಕು ಎಲ್ಲರಿಗೂ ಇದೆ. ಬಲಾತ್ಕಾರ, ಮೋಸ ಮತ್ತು ಆಮಿಷಗಳ ಮೂಲಕ ಮತಾಂತರ ಮಾಡಬಾರದು ಎಂದು ಸಂವಿಧಾನದಲ್ಲಿ ಹೇಳಲಾಗಿದೆ.



*ಧಾರ್ಮಿಕ ಸ್ವಾತಂತ್ರ್ಯ*

© KTBS NOT TO BE REPUBLISHED

**5 ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು:** ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ರಕ್ಷಿಸುವುದು ಈ ಮೂಲಭೂತ ಹಕ್ಕಿನ ಉದ್ದೇಶವಾಗಿದೆ. ಯಾವುದೇ ಜನರು ತಮ್ಮ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ರಕ್ಷಿಸುವ ಹಕ್ಕನ್ನು ಪಡೆದಿದ್ದಾರೆ. ಅಲ್ಪಸಂಖ್ಯಾತರಿಗೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಆಡಳಿತವನ್ನು ನಡೆಸುವ ಹಕ್ಕು ಇದೆ. ಆದರೆ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ವಿದ್ಯಾಸಂಸ್ಥೆಗಳು ರಾಜ್ಯದ ನಿಯಮಗಳಿಗೆ ಬದ್ಧವಾಗಿರಬೇಕು.



*ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು*

©KTBS NOT TO BE REPUBLISHED

**6 ಸಂವಿಧಾನಬದ್ಧ ಪರಿಹಾರದ ಹಕ್ಕು:** ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ನಾಗರಿಕನು ನ್ಯಾಯಾಲಯಕ್ಕೆ ದೂರು ಸಲ್ಲಿಸಬಹುದು. ಈ ಹಕ್ಕನ್ನು 'ಸಂವಿಧಾನಬದ್ಧ ಪರಿಹಾರದ ಹಕ್ಕು' ಎನ್ನುವರು.

ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ಅನ್ಯಾಯಕ್ಕೆ ಒಳಪಟ್ಟ ವ್ಯಕ್ತಿ ನೇರವಾಗಿ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಲಯದ ಮೊರೆ ಹೋಗಿ ಪರಿಹಾರ ದೊರಕಿಸಿಕೊಳ್ಳಬಹುದು. ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ಇಲ್ಲವೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗುವ ಅರ್ಜಿಗಳನ್ನು **'ರಿಟ್ ಅರ್ಜಿ'** ಎನ್ನುವರು.

# ಮೂಲಭೂತ ಕರ್ತವ್ಯಗಳು

ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. 'ಕರ್ತವ್ಯ' ಎಂದರೆ ವ್ಯಕ್ತಿಯು ತನ್ನ ದೇಶಕ್ಕಾಗಿ ಮಾಡಬೇಕಾದ ಹೊಣೆ. ಪ್ರಜೆಗಳು ತಮ್ಮ ಮೂಲಭೂತ ಕರ್ತವ್ಯಗಳನ್ನು ಸ್ವಯಂಸ್ಫೂರ್ತಿಯಿಂದ ಮಾಡಿದರೆ ದೇಶವು ಅಭ್ಯುದಯ ಸಾಧಿಸುವುದು ಸುಲಭ.

ಸಂವಿಧಾನದಲ್ಲಿ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ. ಅವುಗಳ ಸಾರಾಂಶ ಹೀಗಿದೆ.

1 ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

2 ಸ್ವಾತಂತ್ರ್ಯ ಚಳವಳಿಯ ಉನ್ನತ ಆದರ್ಶಗಳನ್ನು ಪಾಲಿಸುವುದು.

3 ಭಾರತದ ಏಕತೆಯನ್ನು ರಕ್ಷಿಸುವುದು.

4 ಮಾತೃಭೂಮಿಯನ್ನು ರಕ್ಷಿಸುವುದು.




*ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು*



*ದೇಶದ ರಕ್ಷಣೆ*

@KTBS NOT TO BE REPUBLISHED

5 ಭಾರತೀಯರಾದ ನಾವೆಲ್ಲ ಸಹೋದರರು ಎಂಬ ಭಾವನೆಯನ್ನು ಬೆಳೆಸುವುದು.



*ನಾವೆಲ್ಲಾ ಭಾರತೀಯರು*

6 ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ಐತಿಹಾಸಿಕ ಸ್ಮಾರಕಗಳನ್ನು ರಕ್ಷಿಸುವುದು.

7 ಪ್ರಾಕೃತಿಕ ಪರಿಸರವನ್ನು ಸಂರಕ್ಷಿಸಿ, ಅಭಿವೃದ್ಧಿ ಪಡಿಸುವುದು.

© KTBS NOT TO BE REPUBLISHED



*ಪರಿಸರ ಸಂರಕ್ಷಣೆ*

**ಚಟುವಟಿಕೆ:** 'ಪರಿಸರ ಸಂರಕ್ಷಣೆಯಲ್ಲಿ ಇಂದು ವಿದ್ಯಾರ್ಥಿಗಳ ಪಾತ್ರ' ಎಂಬ ವಿಚಾರದಲ್ಲಿ ಒಂದು ವಿಚಾರಸಂಕಿರ್ಣವನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.

8 ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯನ್ನು ಬೆಳೆಸುವುದು.

9 ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು.

10 ವ್ಯಕ್ತಿಯು ತನ್ನ ಶ್ರೇಷ್ಠತೆಯನ್ನು ಸಾಧಿಸಲು ಸತತ ಪ್ರಯತ್ನ ನಡೆಸುವುದು.

11 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಹೆತ್ತವರು ಅಥವಾ ಪೋಷಕರು ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡುವುದು.

ಪ್ರಜೆಯು ತನ್ನ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸದಿದ್ದರೆ ಸರ್ಕಾರವು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಆದರೂ ದೇಶದ ಎಲ್ಲ ಪ್ರಜೆಗಳು ಸ್ವಯಂಸ್ಫೂರ್ತಿಯಿಂದ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸಬೇಕು.

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಮೂಲಭೂತ ಹಕ್ಕುಗಳು ಎಂದರೇನು?

2 ಮೂಲಭೂತ ಕರ್ತವ್ಯಗಳನ್ನು ಸ್ವಯಂಸ್ಫೂರ್ತಿಯಿಂದ ನಾವೇಕೆ ಮಾಡಬೇಕು?

3 ಸಮಾನತೆಯ ಹಕ್ಕು ಎಂದರೇನು?

4 ಸಾಮಾಜಿಕ ಮತ್ತು ಆರ್ಥಿಕ ಶೋಷಣೆ ಹೇಗೆ ನಡೆಯುತ್ತದೆ? ಉದಾಹರಣೆಗಳನ್ನು ಕೊಡಿ.

5 ಯಾವುದಾದರೂ ಮೂರು ಮೂಲಭೂತ ಕರ್ತವ್ಯಗಳನ್ನು ತಿಳಿಸಿ.

### ಚರ್ಚಿಸಿ

1 ಮೂಲಭೂತ ಹಕ್ಕುಗಳ ಮಹತ್ವ.

2 ಶಾಲಾವಠಾರದಲ್ಲಿ ವಿದ್ಯಾರ್ಥಿಗಳು ಮಾಡಬೇಕಾದ ಕರ್ತವ್ಯಗಳು.

3 ಮಾಹಿತಿ ಹಕ್ಕು.

### ಚಟುವಟಿಕೆಗಳು

1 ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳ ಕುರಿತು ವಿದ್ಯಾರ್ಥಿಗಳಿಂದ ಒಂದೆರಡು ನಿಮಿಷ ಭಾಷಣ ಮಾಡಿಸುವುದು.

2 ಪ್ರಜೆಗಳು ಮೂಲಭೂತ ಕರ್ತವ್ಯಗಳ ಪಾಲನೆ ಮಾಡದಿರುವ ಪ್ರಸಂಗಗಳನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು. (ಉದಾ: ಊರಿನ ಸಾರ್ವಜನಿಕ ಕೆರೆಯಲ್ಲಿ ತ್ಯಾಜ್ಯ ವಸ್ತುಗಳನ್ನು ಎಸೆಯುವುದು; ಪ್ರಾಚೀನ ಕೋಟೆಯ ಕಲ್ಲುಗಳನ್ನು ಒಂದೊಂದಾಗಿ ಕದ್ದೊಯ್ಯುವುದು, ಮತದಾನ ಮಾಡದಿರುವುದು).

3 ನಮ್ಮ ಸಂಸ್ಕೃತಿಯಲ್ಲಿ ಹಕ್ಕುಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಕರ್ತವ್ಯಗಳಿಗೆ ನೀಡಿದ್ದಾರೆ. ಇದನ್ನು ನೀವು ಒಪ್ಪುವಿರಾ? ಚರ್ಚಿಸಿ.

NOT TO BE REPUBLISHED ©KTBS

| ಅಧ್ಯಾಯ 19 | ರಾಷ್ಟ್ರೀಯ ಭಾವೈಕ್ಯ |
| --- | --- |

S4A9F2

### ಪಾಠದ ಪರಿಚಯ

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಉತ್ಕಟ ದೇಶಪ್ರೇಮದ ಭಾವನೆ ಕಂಡುಬಂದಿದೆ. ನಮ್ಮ ಪರಂಪರಾಗತ ರಾಷ್ಟ್ರೀಯ ಮನೋಭಾವ ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಪುಟಿದೆದ್ದ ಉತ್ಕಟ ರಾಷ್ಟ್ರೀಯತೆಯನ್ನು ಅಡಿಪಾಯವಾಗಿಟ್ಟುಕೊಂಡು, ಹೊಸ ನಾಡೊಂದನ್ನು ಕಟ್ಟುವ ನಿಟ್ಟಿನಲ್ಲಿ ನಾವು ಕಿರಿಹಿರಿಯರನ್ನು ರಾಷ್ಟ್ರಪ್ರೇಮದತ್ತ ಕೊಂಡೊಯ್ಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಭಾವೈಕ್ಯ, ವೈವಿಧ್ಯ ಹಾಗೂ ಏಕತೆಯ ವಿವಿಧ ಮುಖಗಳನ್ನು ಮತ್ತು ಏಕತೆಗೆ ಸವಾಲೊಡ್ಡುವ ಮಾರಕ ಅಂಶಗಳನ್ನು ಈ ಪಾಠದಲ್ಲಿ ನಿರೂಪಿಸಲಾಗಿದೆ.

### ಸಾಮರ್ಥ್ಯಗಳು

1 ರಾಷ್ಟ್ರೀಯ ಭಾವೈಕ್ಯ ಎಂಬುದು ರಾಷ್ಟ್ರೀಯ ಏಕತೆಯನ್ನು ಹಾಗೂ ರಾಷ್ಟ್ರಕ್ಕೆ ಸೇರಿದವರೆಂಬ ಭಾವನೆಯನ್ನು ಪ್ರತಿನಿಧಿಸುವ ಪರಿಕಲ್ಪನೆ ಎಂದು ತಿಳಿಯುವುದು.

2 ರಾಷ್ಟ್ರೀಯ ಭಾವೈಕ್ಯದ ಮಹತ್ವವನ್ನು ಅರಿಯುವುದು.

3 ಮತಧರ್ಮ, ಭಾಷೆ, ಲಿಂಗ ಮುಂತಾದ ಭೇದಗಳ ಹೊರತಾಗಿಯೂ ಜನರ ಹೃದಯಗಳನ್ನು ಒಂದುಗೂಡಿಸುವ ಪ್ರಯತ್ನ 'ರಾಷ್ಟ್ರೀಯ ಭಾವೈಕ್ಯ'ದಲ್ಲಿದೆ ಎಂದು ಅರಿಯುವುದು.

4 ರಾಷ್ಟ್ರೀಯ ಭಾವೈಕ್ಯಕ್ಕೆ ಸವಾಲನ್ನೊಡ್ಡುವ ಜಾತೀಯತೆ, ಕೋಮುವಾದ, ಪ್ರಾದೇಶಿಕವಾದದ ಬಗ್ಗೆ ತಿಳಿಯುವುದು.

NOT TO BE REPUBLISHED ©KTBS

**ರಾಷ್ಟ್ರೀಯ ಭಾವೈಕ್ಯದ ಅರ್ಥ:** ರಾಷ್ಟ್ರೀಯ ಭಾವೈಕ್ಯವೆಂದರೆ ಒಬ್ಬರು ಇನ್ನೊಬ್ಬರ ಬಗ್ಗೆ ಅಥವಾ ಒಂದು ಜನಾಂಗ ಇನ್ನೊಂದು ಜನಾಂಗದ ಬಗ್ಗೆ ದ್ವೇಷ, ಅಸೂಯೆ ಮತ್ತು ಪೂರ್ವಾಗ್ರಹ ಪೀಡಿತರಾಗಿರಬಾರದು. ಬದಲಾಗಿ ಒಬ್ಬರು ಇನ್ನೊಬ್ಬರನ್ನು ಗೌರವಿಸುವುದು ಹಾಗೂ ಪರಸ್ಪರ ಸೌಹಾರ್ದತೆಯಿಂದ ಬಾಳುವುದು. ಎಲ್ಲರೂ ಒಂದೇ ರಾಷ್ಟ್ರವೆಂಬ ಕುಟುಂಬದ ಸಮಸದಸ್ಯರು ಎನ್ನುವ ಭಾವನೆಯನ್ನು ಹೊಂದುವುದು.

### ವೈವಿಧ್ಯ

ಭಾರತದ ವಿವಿಧತೆಯು ಪ್ರಾಕೃತಿಕ ವೈವಿಧ್ಯ, ಜೀವ ವೈವಿಧ್ಯ ಹಾಗೂ ಜನಜೀವನ ವೈವಿಧ್ಯದಲ್ಲಿ ಪ್ರಕಟಗೊಂಡಿದೆ.

♦ **ಪ್ರಾಕೃತಿಕ ವೈವಿಧ್ಯ:** ಭಾರತದಲ್ಲಿ ಬಲು ಎತ್ತರದ ಪರ್ವತ ಶ್ರೇಣಿಗಳು, ಅತಿ ಉದ್ದದ ನದಿಗಳು ಮತ್ತು ವಿಶಾಲವಾದ ಮೈದಾನಗಳಿವೆ. ಅಂತೆಯೇ ಅತ್ಯಂತ ಚಳಿಯ ಹಾಗೂ ಸೆಕೆಯ ಪ್ರದೇಶಗಳಿವೆ. ಸುಡುವ ಮರುಭೂಮಿಯು ಇಲ್ಲಿದೆ. ದಟ್ಟಕಾಡು, ತಂಪಿನ ಸರೋವರ, ಧುಮುಕುವ ಜಲಪಾತ, ಮನಸೆಳೆಯುವ ಕರಾವಳಿ, ನೂರಾರು ಚಿಕ್ಕಪುಟ್ಟ ದ್ವೀಪಗಳು–ಇವು ನಮಗೆ ಪ್ರಕೃತಿಯು ನೀಡಿದ ಕೊಡುಗೆಗಳು.



**ಪ್ರಾಕೃತಿಕ ವೈವಿಧ್ಯ**

♦ **ಜೀವ ವೈವಿಧ್ಯ:** ಭಾರತದ ಜೀವ ವೈವಿಧ್ಯ ಅಪಾರವಾದದ್ದು. ಜಗತ್ತಿನಲ್ಲಿ ಇಷ್ಟೊಂದು ಜೀವವೈವಿಧ್ಯದ ದೇಶಗಳು ಇರುವುದು ಕೆಲವು ಮಾತ್ರ.

ಈವರೆಗೆ 47,000 ಹೆಚ್ಚು ಸಸ್ಯವರ್ಗಗಳನ್ನು ಗುರುತಿಸಿ ವರ್ಣಿಸಲಾಗಿದೆ. ದೇಶದಲ್ಲಿ ಸುಮಾರು 90,000 ಬಗೆಯ ವೈವಿಧ್ಯಮಯ ಪ್ರಾಣಿಗಳಿವೆ. ಅವುಗಳಲ್ಲಿ 1,232 ಬಗೆಯ ಪಕ್ಷಿವರ್ಗಗಳು ಮತ್ತು 2,546 ಬಗೆಯ ಮೀನುವರ್ಗಗಳು ಒಳಗೊಂಡಿವೆ. ವರ್ಣಮಯ ಜೀವಸಂಕುಲ ಭಾರತದ ಅಮೂಲ್ಯ ಆಸ್ತಿ.

♦ **ಜನ ವೈವಿಧ್ಯ:** ವಿಶಾಲ ಭಾರತದಲ್ಲಿ ವಿವಿಧ ಬಗೆಯ ಸಮುದಾಯಕ್ಕೆ ಸೇರಿದ ಜನರಿದ್ದಾರೆ. ಅವರ ರೂಪ, ಮೈಕಟ್ಟು, ಭಾಷೆ, ವೇಷಭೂಷಣ, ಆಹಾರ, ರೀತಿನೀತಿ, ಆಚಾರ ವಿಚಾರ, ಮತಧರ್ಮಗಳು ಬಗೆಬಗೆಯದಾಗಿದೆ. ನಮ್ಮ ಜನಜೀವನದ ಸೊಗಸನ್ನು ಕಣ್ಣಾರೆ ಕಂಡು ಸವಿಯಲು ಭಾರತವನ್ನು ಸುತ್ತಾಡಿ ಬರಬೇಕು.

@KTBS NOT TO BE REPUBLISHED

## ವಿವಿಧತೆಯಲ್ಲಿ ಏಕತೆ

ನಾವೆಲ್ಲ ಒಂದೇ ಎಂಬ ಸಾಂಸ್ಕೃತಿಕ ಜಾಗೃತ ಭಾವನೆ ಹಿಂದಿನಿಂದ ಬಂದಿದೆ. ಈ ದೇಶದಲ್ಲಿ ಇಲ್ಲಿನ ನದಿಗಳ ಬಗ್ಗೆ, ಪರ್ವತಗಳ ಬಗ್ಗೆ ಪೂಜ್ಯಭಾವ ಇರುವುದನ್ನು ನಾವು ಕಾಣುತ್ತೇವೆ. ದಕ್ಷಿಣ ಭಾರತೀಯರು ಕಾಶಿ, ಗಂಗಾನದಿ, ಹಿಮಾಲಯದಲ್ಲಿರುವ ಬದರಿ, ಕೇದಾರ ಕ್ಷೇತ್ರಗಳನ್ನು ಪವಿತ್ರವೆಂದು ನಂಬುತ್ತಾರೆ. ಉತ್ತರ ಭಾರತೀಯರೂ ಕಾವೇರಿ ನದಿ, ತಿರುಪತಿ, ಶ್ರೀಶೈಲ, ರಾಮೇಶ್ವರ, ಕಾಂಚಿ ಮುಂತಾದ ಕ್ಷೇತ್ರಗಳನ್ನು ಪವಿತ್ರವೆಂದು ನಂಬುತ್ತಾರೆ. ನಾಗ, ಗೋವು ಮುಂತಾದ ಪ್ರಾಣಿಗಳು ಮತ್ತು ಅರಳಿ(ಅಶ್ವತ್ಥ)ಮರ ಹಾಗೂ ಕೆಲವೊಂದು ವೃಕ್ಷಗಳನ್ನು ಪೂಜಿಸುವ ಸಂಪ್ರದಾಯ ಸಾರ್ವತ್ರಿಕವಾಗಿದೆ.

ಸಂಸ್ಕೃತ ಭಾಷೆ ಪ್ರಾಚೀನ ಭಾರತದ ಪ್ರಮುಖ ಸಾಹಿತ್ಯಕ ಭಾಷೆಯಾಗಿತ್ತು. ಭಾರತ ಮೂಲದ ಎಲ್ಲ ಭಾಷೆಗಳ ಲಿಪಿಗಳೂ ಅಶೋಕನ ಕಾಲದಷ್ಟು ಹಿಂದಿನ ಬ್ರಾಹ್ಮೀ ಲಿಪಿಯಿಂದ ಹುಟ್ಟಿದವು. ಹಿಂದಿ, ಕನ್ನಡ, ತೆಲಗು, ಭಾಷೆಗಳ ಮೇಲೆ ಸಂಸ್ಕೃತದ ಪ್ರಭಾವವಿದೆ. ಸಂವಿಧಾನ ಸಭೆಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಪ್ರತಿಪಾದಿಸಿದ್ದು ಏನೆಂದರೆ ಯಾವುದೇ ಭಾಷೆಯು ಭಾರತದ ರಾಷ್ಟ್ರೀಯ ಭಾಷೆಯೆಂದು ಎನಿಸಿಕೊಳ್ಳುವ ಅರ್ಹತೆ ಹೊಂದಿದ್ದರೆ ಅದು ಸಂಸ್ಕೃತ ಭಾಷೆ.

ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ನಮ್ಮ ನಾಟಕ, ಸಂಗೀತ, ಶಿಲ್ಪ, ಸಾಹಿತ್ಯ, ಜಾನಪದ ಹಾಗೂ ಕಲಾಕೃತಿಗಳ ಮೇಲೆ ಪ್ರಭಾವಗಳನ್ನು ಗಾಢವಾಗಿ ಬೀರಿವೆ. ಹಿರಿಯರು, ಮಕ್ಕಳು ಮತ್ತು ಮಹಿಳೆಯರನ್ನು ಗೌರವಿಸುವುದು, ಅತಿಥಿ ಸತ್ಕಾರ, ಸೋದರ ಪ್ರೇಮ ಮುಂತಾದ ಮೌಲ್ಯಗಳು ಇಡಿ ದೇಶದಲ್ಲಿ ಮಾನ್ಯವಾಗಿವೆ.

"ಬಾಳು, ಬಾಳುಗೊಡು" ಎಂಬ ನಿಲುವು ಭಾರತೀಯ ಸಂಸ್ಕೃತಿಯದು. ಯಾವುದೇ ಧಾರ್ಮಿಕ ಮಾರ್ಗದ ಬಗ್ಗೆ ಇಲ್ಲಿ ಅಸಹಿಷ್ಣುತೆ ಇಲ್ಲ. ತೀರ ಅಲ್ಪಸಂಖ್ಯಾತರಾದ ಪಾರ್ಸಿಗಳು, ಯಹೂದ್ಯರೂ ಇಲ್ಲಿನ ಭಾಷೆಗಳಲ್ಲೇ ಮಾತನಾಡಿ ಸಮಾಜ ಜೀವನದಲ್ಲಿ ಬೆರೆತಿದ್ದಾರೆ. ಆದರೆ ಅವರು ತಮ್ಮ ಧಾರ್ಮಿಕ ಆಚರಣೆಗಳನ್ನು ಬಿಟ್ಟುಕೊಟ್ಟಿಲ್ಲ.

ಭಾರತ ಸಹಿಷ್ಣುತೆಗೆ ಪ್ರಸಿದ್ಧವಾದ ದೇಶ. ಇದರಿಂದ ಐಕ್ಯಸಾಧನೆ ಸಾಧ್ಯವಾಗಿದೆ. ಎಲ್ಲ ವಿಧದ ಭೇದ, ವೈವಿಧ್ಯಗಳನ್ನು ಬಂಧಿಸುವ ಏಕಸೂತ್ರತೆ ಇಲ್ಲಿನ ವೈಶಿಷ್ಟ್ಯ.

## ರಾಷ್ಟ್ರೀಯ ಏಕತೆಗೆ ಮಾರಕವಾದ ಅಂಶಗಳು

- **ಜಾತೀಯತೆ:** ಜಾತೀಯತೆಯೆಂದರೆ ಬೇರೆ ಜಾತಿಯ ವಿರುದ್ಧವಾಗಿ ತಮ್ಮ ಜಾತಿಯನ್ನು ಎತ್ತಿ ಕಟ್ಟುವುದು. ಜಾತೀಯತೆಯು ಏಕತೆಗೆ ಮಾರಕವಾಗಿದೆ. ದುರದೃಷ್ಟವೆಂದರೆ ಇಂದು ಜಾತೀಯತೆ ಎಲ್ಲಾ ಕ್ಷೇತ್ರಗಳನ್ನು ಆವರಿಸಿದೆ. (ಜಾತೀಯತೆ ಮತ್ತು ಮತೀಯವಾದದ ಬಗ್ಗೆ ಹಿಂದಿನ ತರಗತಿಯಲ್ಲಿ ತಿಳಿಸಲಾಗಿದೆ).

NOT TO BE REPUBLISHED ©KTBS

• **ಮತೀಯವಾದ:** ಬೇರೆ ಧರ್ಮದ ವಿರುದ್ಧ ತಮ್ಮ ಧರ್ಮವೇ ಶ್ರೇಷ್ಠವಾದುದು ಎಂದು ನಂಬುವುದು ಮತ್ತು ಕೇವಲ ತಮ್ಮ ಧರ್ಮದ ಸಲುವಾಗಿ ಮಾತ್ರ ಹೊಡೆದಾಡುವುದು ಮತೀಯವಾದ ಅಥವಾ ಕೋಮುವಾದ. ಕೋಮುವಾದವು ಶಾಂತಿಯನ್ನು ಕದಡಿಸುತ್ತದೆ. ಇದರಿಂದ ಜೀವ ಮತ್ತು ಆಸ್ತಿಪಾಸ್ತಿಗಳ ನಾಶ ಸಂಭವಿಸುತ್ತದೆ. ಅಷ್ಟೇ ಅಲ್ಲ ಇದು ಜನರ ನಡುವಿನ ಸ್ನೇಹ ಸೌಹಾರ್ದವನ್ನು ಹಾಳುಮಾಡುತ್ತದೆ. ನಾನಾ ಮತಧರ್ಮದ ಜನರಲ್ಲಿ ಹೊಂದಾಣಿಕೆ ಇಲ್ಲದಂತೆ ಮಾಡಿ, ಇದು ದೇಶದ ಪ್ರಗತಿಗೆ ತೊಡಕಾಗಿದೆ.

• **ಪ್ರಾದೇಶಿಕವಾದ**: ರಾಷ್ಟ್ರೀಯ ಭಾವೈಕ್ಯತೆಗೆ ಮಾರಕವಾದ ಮತ್ತೊಂದು ಅಂಶ ಪ್ರಾದೇಶಿಕವಾದ. ತನ್ನ ಪ್ರದೇಶದ ಕಾಳಜಿ ಕುರಿತು ವ್ಯಕ್ತಿಗಿರುವ ತೀವ್ರವಾದ ನಿಷ್ಠೆ ಮತ್ತು ಸಂಕುಚಿತ ಭಾವನೆಯೇ ಪ್ರಾದೇಶಿಕವಾದ. ಪ್ರಾದೇಶಿಕವಾದ ಆರೋಗ್ಯಕರವಲ್ಲ. ನಾವು 'ಮೊದಲು ಭಾರತೀಯರು ಅನಂತರ ಒಂದು ರಾಜ್ಯ ಅಥವಾ ಪ್ರದೇಶಕ್ಕೆ ಸೇರಿದವರು' ಎಂಬುದನ್ನು ಅರಿಯಬೇಕು. ಪ್ರಾಂತೀಯ ಭಾವನೆಗಳನ್ನು ಬೆಳೆಯಲು ಬಿಟ್ಟರೆ, ರಾಷ್ಟ್ರೀಯ ಏಕತೆಗೆ ತೀವ್ರ ಧಕ್ಕೆ ಉಂಟಾಗುವುದು.

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 'ವಿವಿಧತೆಯಲ್ಲಿ ಏಕತೆ' ಎಂದರೇನು?

2 ಭಾರತದಲ್ಲಿ ಏಕತೆಗೆ ಪೂರಕವಾದ ಅಂಶಗಳು ಯಾವುವು?

3 ರಾಷ್ಟ್ರೀಯ ಏಕತೆಗೆ ಮಾರಕವಾದ ಅಂಶಗಳು ಯಾವುವು?

### ಚರ್ಚಿಸಿ

ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸುವ ನಿಟ್ಟಿನಲ್ಲಿ ಯಾವ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬಹುದು?

### ಚಟುವಟಿಕೆಗಳು

1. ಏಕತೆಗೆ ಮಾರಕವಾದ ನಿಮ್ಮ ಗ್ರಾಮದ ಸ್ಥಳೀಯ ಸಮಸ್ಯೆಗಳನ್ನು ಪಟ್ಟಿಮಾಡಿ ಪರಿಹಾರಗಳನ್ನು ಗುರುತಿಸಿ.
2. ಇಂದು ಭಾರತದಲ್ಲಿ ಭಾವೈಕ್ಯದ ದೃಷ್ಟಿಯಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿರುವ ವಿಚಾರ. ಇದಕ್ಕೆ ಕಾರಣಗಳೇನು? ಅದನ್ನು ಸರಿಪಡಿಸುವುದು ಹೇಗೆ? ದೇಶದಲ್ಲಿ ಭಾವೈಕ್ಯ ಹೇಗೆ ಮೂಡಿಸಬಹುದು? ಒಂದು ಚರ್ಚಾಕೂಟವನ್ನು ಏರ್ಪಡಿಸಿ ಮೂಡಿಬಂದ ಸಲಹೆಗಳ ಪಟ್ಟಿಮಾಡಿ.

©KTBS NOT TO BE REPUBLISHED

| ಅಧ್ಯಾಯ 20 | ರಾಷ್ಟ್ರೀಯ ಚಿಹ್ನೆಗಳು |
|---|---|

C8I7J7

**ಪಾಠದ ಪರಿಚಯ**

ಈ ಪಾಠದಲ್ಲಿ ನಮ್ಮ ರಾಷ್ಟ್ರಧ್ವಜ, ರಾಷ್ಟ್ರಲಾಂಛನ, ರಾಷ್ಟ್ರಗೀತೆ, ರಾಷ್ಟ್ರೀಯ ಹಬ್ಬಗಳು ಹಾಗೂ ದಿನಾಚರಣೆಗಳನ್ನು ಪರಿಚಯ ಮಾಡಲಾಗಿದೆ.

**ಸಾಮರ್ಥ್ಯಗಳು**

1 ರಾಷ್ಟ್ರಧ್ವಜದ ವಿಶೇಷತೆಯನ್ನು ಅರ್ಥೈಸಿಕೊಳ್ಳುವುದು.

2 ರಾಷ್ಟ್ರಧ್ವಜ ಸಂಹಿತೆಯನ್ನು ತಿಳಿದುಕೊಂಡು ಅದನ್ನು ಪಾಲಿಸುವುದು.

3 ರಾಷ್ಟ್ರಲಾಂಛನದ ವಿವರಗಳು ಮತ್ತು ಮಹತ್ವವನ್ನು ಅರಿತುಕೊಂಡು ಮೆಚ್ಚುವುದು.

4 ರಾಷ್ಟ್ರಗೀತೆ ಮತ್ತು ರಾಷ್ಟ್ರಸ್ತವದ ಹಿನ್ನೆಲೆ ಮತ್ತು ಮಹತ್ವವನ್ನು ತಿಳಿದುಕೊಳ್ಳುವುದು.

5 ರಾಷ್ಟ್ರಗೀತೆ ಮತ್ತು ರಾಷ್ಟ್ರಸ್ತವವನ್ನು ಸೂಕ್ತವಾಗಿ ಹಾಡಲು ಸಮರ್ಥವಾಗುವುದು.

6 ರಾಷ್ಟ್ರೀಯ ಹಬ್ಬಗಳು ಮತ್ತು ದಿನಾಚರಣೆಗಳ ಮಹತ್ವವನ್ನು ತಿಳಿಯುವುದು.

©KTBS NOT TO BE REPUBLISHED

ರಾಷ್ಟ್ರೀಯ ಚಿಹ್ನೆಗಳು: ಸಾಮಾನ್ಯವಾಗಿ ಒಂದು ದೇಶವು ತನ್ನ ಸಂಸ್ಕೃತಿ ಮತ್ತು ಪರಂಪರೆಗಳ ವಿಶೇಷತೆಗಳನ್ನು ಪ್ರತಿಬಿಂಬಿಸುವ ಕೆಲವು ಚಿಹ್ನೆಗಳನ್ನು ಬಳಕೆ ಮಾಡುತ್ತದೆ. ಅವುಗಳನ್ನು ರಾಷ್ಟ್ರೀಯ ಚಿಹ್ನೆಗಳು ಎನ್ನುವರು. ಮುಖ್ಯವಾಗಿ ರಾಷ್ಟ್ರಧ್ವಜ ಮತ್ತು ರಾಷ್ಟ್ರಲಾಂಛನವು ಒಂದು ದೇಶದ ರಾಷ್ಟ್ರೀಯ ಚಿಹ್ನೆಗಳು. ಹಾಗೆಯೇ ಪ್ರತಿ ದೇಶಕ್ಕೂ ತನ್ನದೇ ಆದ ರಾಷ್ಟ್ರಗೀತೆಯಿದೆ. ಕೆಲವು ದೇಶಗಳಿಗೆ ರಾಷ್ಟ್ರೀಯ ಪ್ರಾಣಿ, ರಾಷ್ಟ್ರೀಯ ಪಕ್ಷಿ ಮತ್ತು ರಾಷ್ಟ್ರೀಯ ಪುಷ್ಪಗಳಿರುವುದೂ ಉಂಟು. ಪ್ರಜೆಗಳಲ್ಲಿ ದೇಶಾಭಿಮಾನ ಮತ್ತು ಭಾವೈಕ್ಯ ಬೇರೂರಲು ಇವು ಪೋಷಕ.

## ನಮ್ಮ ರಾಷ್ಟ್ರಧ್ವಜ

ಧ್ವಜವು ಒಂದು ರಾಷ್ಟ್ರದ ಲಾಂಛನ. ರಾಷ್ಟ್ರಧ್ವಜವು ಸ್ವಾತಂತ್ರ್ಯ, ದೇಶಪ್ರೇಮ, ಒಗ್ಗಟ್ಟು ಹಾಗೂ ನಿಷ್ಠೆಯ ಪ್ರತೀಕವಾಗಿದೆ. ಧ್ವಜವು ಸ್ತಂಭದ ಮೇಲೇರಿದಾಗ ಪ್ರತಿಯೊಬ್ಬ ಪ್ರಜೆಯ ಹೃದಯ ತುಂಬಿಬರುತ್ತದೆ.

**ಸ್ವತಂತ್ರ ಭಾರತದ ತ್ರಿವರ್ಣ ಧ್ವಜ ವರ್ಣನೆ:** ನಮ್ಮದು ಮೂರು ಬಣ್ಣಗಳಿಂದ ಕೂಡಿದ ಧ್ವಜವಾಗಿದೆ. ಮೇಲೆ ಕಡುಕೇಸರಿ, ಮಧ್ಯ ಬಿಳಿ ಮತ್ತು ಕೆಳಗೆ ಕಡುಹಸಿರು ಬಣ್ಣಗಳಿವೆ. ಬಿಳಿ ಬಣ್ಣದ ಮಧ್ಯದಲ್ಲಿ ನೀಲಿ ಬಣ್ಣದ ಚಕ್ರವಿದೆ. ಚಕ್ರದಲ್ಲಿ ಇಪ್ಪತ್ತನಾಲ್ಕು ಅರಗಳಿವೆ. ಚಕ್ರದ ವ್ಯಾಸ ಬಿಳಿ ಪಟ್ಟಿಯ ಅಗಲದಷ್ಟೇ ಇದೆ.

# ರಾಷ್ಟ್ರಧ್ವಜ



ಧ್ವಜವು ಆಯತಾಕಾರವಾಗಿದೆ. ಅದರ ಉದ್ದಗಲಗಳ ಅನುಪಾತ 3:2 ಇರುತ್ತದೆ. ಮೂರು ಬಣ್ಣದ ಪಟ್ಟಿಗಳು ಸಮಪ್ರಮಾಣದಲ್ಲಿರುತ್ತವೆ. ಧ್ವಜದ ಬಟ್ಟೆಯು ಹತ್ತಿ ಮತ್ತು ರೇಷ್ಮೆಯದಾಗಿರಬೇಕು. ಜೊತೆಗೆ ಅದು ಕೈನೇಯ್ಗೆಯದಾಗಿರಬೇಕು. ಅದರ ದಾರ ಕೈಯಿಂದಲೇ ಮಾಡಿದ್ದಾಗಿರಬೇಕು.

@KTBS NOT TO BE REPUBLISHED

## ರಾಷ್ಟ್ರಧ್ವಜದ ವಿಶೇಷತೆ

ನಮ್ಮ ಧ್ವಜದ ಬಣ್ಣಗಳು ಏನನ್ನು ಹೇಳುತ್ತವೆ? ಕೇಸರಿ ಬಣ್ಣವು ನಿಸ್ವಾರ್ಥ ಹಾಗೂ ತ್ಯಾಗವನ್ನು ಸಂಕೇತಿಸಿದರೆ, ಬಿಳಿ ಬಣ್ಣವು ಸತ್ಯ, ಶಾಂತಿ, ಪರಿಶುದ್ಧತೆಯ ಪ್ರತೀಕವಾಗಿದೆ. ಹಸಿರು ಸಸ್ಯಶ್ಯಾಮಲೆಯಾದ ಭೂಮಿಯ ಸಂಕೇತ; ಕೃಷಿ, ಕೈಗಾರಿಕೆಗಳ ಸಮೃದ್ಧಿಯ ಗುರುತು. ಚಕ್ರವು ಸಾರನಾಥದ ಅಶೋಕ ಸ್ತಂಭದಲ್ಲಿರುವ ಚಕ್ರದ ಪ್ರತಿರೂಪವಾಗಿದೆ. ಅಶೋಕಚಕ್ರವು 'ಧರ್ಮಚಕ್ರ'ವಾಗಿದೆ; ಅಲ್ಲದೆ ಅದು ನಿರಂತರ ಚಲನೆಯ ಪ್ರತೀಕವೂ ಹೌದು.

## ರಾಷ್ಟ್ರಧ್ವಜ ಸಂಹಿತೆ

- ಧ್ವಜ ಕೊಳೆಯಾಗಿರಬಾರದು, ಹರಿದಿರಬಾರದು.
- ಹಾರಿಸುವಾಗ ಯಾವಾಗಲೂ ಕೇಸರಿ ಬಣ್ಣ ಮೇಲೆ ಬರುವಂತೆ ಹಾರಿಸಬೇಕು.
- ರಾಷ್ಟ್ರಧ್ವಜದ ಎತ್ತರಕ್ಕೆ ಬೇರಾವ ಧ್ವಜವನ್ನು ಹಾರಿಸಬಾರದು.
- ಕಂಬದ ತುದಿಯವರೆಗೂ ಮೇಲೇರಿಸಿ ಹಾರಿಸಬೇಕು.
- ಯಾವಾಗಲೂ ಸೂರ್ಯೋದಯದ ನಂತರ ರಾಷ್ಟ್ರಧ್ವಜವನ್ನು ಹಾರಿಸಬೇಕು; ಸೂರ್ಯಾಸ್ತಕ್ಕೆ ಮೊದಲು ಇಳಿಸಿ ಮಡಿಚಿಡಬೇಕು.

- ರಾಷ್ಟ್ರೀಯ ಶೋಕವನ್ನು ಆಚರಿಸುವ ಸಮಯದಲ್ಲಿ ಧ್ವಜವನ್ನು ಅರ್ಧ ಎತ್ತರಕ್ಕೆ ಹಾರಿಸುವುದು.
- ಧ್ವಜವನ್ನು ಬಲಗೈಲಿ ಹಿಡಿದು ನಡೆಯಬೇಕು.
- ಧ್ವಜವನ್ನು ನೆಲಕ್ಕೆ ತಾಗಿಸಬಾರದು.

ಪ್ಲಾಸ್ಟಿಕ್ ಧ್ವಜವನ್ನು ಬಳಸಬಾರದು.

## ನಮ್ಮ ರಾಷ್ಟ್ರಲಾಂಛನ

ನಮ್ಮ ರಾಷ್ಟ್ರಲಾಂಛನವನ್ನೊಮ್ಮೆ ಗಮನಿಸಿ. ಇದು ಸಾರನಾಥದ ಅಶೋಕನ ಶಿಲಾಸ್ತಂಭದ ಬೋದಿಗೆಯ (ಮೇಲುಭಾಗದ) ರೂಪಾಂತರವಾಗಿದೆ. ಬೋದಿಗೆಯಲ್ಲಿ ಸಿಂಹಗಳಿರುವುದರಿಂದ ಇದನ್ನು 'ಸಿಂಹ ಬೋದಿಗೆ' ಎನ್ನುವರು. ಸಾರನಾಥದ ಸಿಂಹ ಬೋದಿಗೆಯು ನಮ್ಮ ರಾಷ್ಟ್ರಲಾಂಛನ ಅಥವಾ ಮುದ್ರೆ.

ಮೂಲ ಶಿಲ್ಪಕೃತಿಯಲ್ಲಿ ನಾಲ್ಕು ಸಿಂಹಗಳು ನಾಲ್ಕು ದಿಕ್ಕುಗಳಿಗೆ ಮುಖಮಾಡಿ, ಒಂದಕ್ಕೊಂದು ಬೆನ್ನು ಮಾಡಿ, ಪೀಠವೊಂದರ ಮೇಲೆ ನಿಂತಿವೆ. ಪೀಠವು ಗುಂಡಾಗಿದೆ. ಅದರ ನಾಲ್ಕು ದಿಕ್ಕುಗಳಲ್ಲೂ ಒಂದೊಂದು ಚಕ್ರವಿದೆ. ಆ ಚಕ್ರಗಳ ನಡುವೆ ಆನೆ, ಗೂಳಿ, ಕುದುರೆ, ಸಿಂಹಗಳ ಚಿತ್ರಣವಿದೆ. ಪೀಠದಲ್ಲಿರುವ ಚಕ್ರವನ್ನು 'ಧರ್ಮಚಕ್ರ'ವೆಂದೂ ಕರೆಯುತ್ತಾರೆ. ನಮ್ಮ ರಾಷ್ಟ್ರಧ್ವಜದ ಬಿಳಿಯ ಪಟ್ಟಿಯ ನಡುವೆ ಇದೇ ಚಕ್ರದ ಚಿಹ್ನೆಯಿದೆ.



ರಾಷ್ಟ್ರಲಾಂಛನ

ಭಾರತ ಸರ್ಕಾರವು ನಮ್ಮ ರಾಷ್ಟ್ರಲಾಂಛನವನ್ನು 26 ಜನವರಿ 1950ರಂದು ಅಂಗೀಕರಿಸಿತು. ಚಿತ್ರದಲ್ಲಿ ಮೂರೇ ಸಿಂಹಗಳು ಮಾತ್ರ ಕಾಣಿಸುತ್ತವೆ. ಪೀಠದ ಕೆಳಗೆ ದೇವನಾಗರಿ ಲಿಪಿಯಲ್ಲಿ ಬರೆದ "ಸತ್ಯಮೇವ ಜಯತೇ" (ಸತ್ಯವೊಂದೇ ಗೆಲ್ಲುತ್ತದೆ) ಎಂಬ ಮುಂಡಕ ಉಪನಿಷತ್ತಿನ ವಾಕ್ಯವಿದೆ.

## ನಮ್ಮ ರಾಷ್ಟ್ರಗೀತೆ (Our National Anthem)

ಜನಗಣಮನ ಭಾರತದ ರಾಷ್ಟ್ರಗೀತೆ. ಇದನ್ನು ರವೀಂದ್ರನಾಥ ಠಾಕೂರ್ ಅವರು 1911 ರಲ್ಲಿ ಬಂಗಾಲಿ ಭಾಷೆಯಲ್ಲಿ ರಚಿಸಿದರು. ಈ ದೀರ್ಘಗೀತೆಯ ಐದು ವೃತ್ತಗಳಲ್ಲಿ ಮೊದಲ ವೃತ್ತವನ್ನು ಮಾತ್ರ ರಾಷ್ಟ್ರಗೀತೆಯೆಂದು ಸಂವಿಧಾನ ಸಭೆಯು 24 ಜನವರಿ 1950ರಂದು ಅಂಗೀಕರಿಸಿತು. ಗೀತೆಯನ್ನು ಹಾಡಲು ಬೇಕಾಗುವ ಕಾಲಾವಧಿ 52 ಸೆಕೆಂಡುಗಳು. ಕೆಲವು ಸಂದರ್ಭಗಳಲ್ಲಿ ಸಂಕ್ಷಿಪ್ತವಾಗಿ ಗೀತೆಯ ಮೊದಲ ಮತ್ತು ಕೊನೆಯ ಸಾಲುಗಳನ್ನು ಮಾತ್ರವೇ ಹಾಡಲಾಗುವುದು. ಇದಕ್ಕೆ ಸುಮಾರು 20 ಸೆಕೆಂಡುಗಳು ತಗಲುತ್ತದೆ.

©KTBS NOT TO BE REPUBLISHED

ರಾಷ್ಟ್ರಗೀತೆಗೆ ಗೌರವ ಸಲ್ಲಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಅಗೌರವ ಸೂಚಿಸುವುದು, ಅದರ ಹಾಡುವಿಕೆಗೆ ಅಡ್ಡಿಪಡಿಸುವುದು ಶಾಸನದ ಪ್ರಕಾರ ಶಿಕ್ಷಾರ್ಹ ಅಪರಾಧ.

- ರಾಷ್ಟ್ರಗೀತೆಯನ್ನು ಹಾಡುವಾಗ ಶಿಸ್ತಿನಿಂದ ನೇರವಾಗಿ ನಿಲ್ಲಬೇಕು.
- ಉಚ್ಚಾರದಲ್ಲಿ ತಪ್ಪಿಲ್ಲದಂತೆ ಹಾಡಬೇಕು.

## ನಮ್ಮ ರಾಷ್ಟ್ರಸ್ತವ (Our National Song)

ಸಂವಿಧಾನದಲ್ಲಿ ರಾಷ್ಟ್ರಗೀತೆಗೆ ಸಮಾನ ಸ್ಥಾನಮಾನ ಪಡೆದಿರುವ 'ವಂದೇ ಮಾತರಂ' ರಾಷ್ಟ್ರಸ್ತವ ಎನಿಸಿದೆ. ಸಮಾರಂಭಗಳಲ್ಲಿ 'ವಂದೇ ಮಾತರಂ' ಪ್ರಾರಂಭದಲ್ಲಿ ಪ್ರಾರ್ಥನೆಯಾಗಿಯೂ 'ಜನಗಣಮನ' ಕೊನೆಯಲ್ಲಿ ಮಂಗಳಗೀತೆಯಾಗಿಯೂ ಹಾಡಲಾಗುತ್ತದೆ.

'ವಂದೇ ಮಾತರಂ' ಗೀತೆಯನ್ನು ರಚಿಸಿದವರು ಖ್ಯಾತ ಸಾಹಿತಿ **ಬಂಕಿಮಚಂದ್ರ ಚಟರ್ಜಿ**. ಅವರ 'ಆನಂದಮಠ' ಕಾದಂಬರಿಯಲ್ಲಿನ ಈ ಗೀತೆ ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರಗೀತೆಯ ಸ್ಥಾನಮಾನ ಪಡೆದುಕೊಂಡಿತು. ಇದು ಭರತಖಂಡದ ಚೆಲುವನ್ನೂ ತಾಯ್ನಾಡ ಪ್ರೇಮವನ್ನೂ ವರ್ಣಿಸುತ್ತದೆ. ಲಕ್ಷಾಂತರ ಜನರಲ್ಲಿ ದೇಶಭಕ್ತಿಯನ್ನು ಈ ಗೀತೆ ಉದ್ದೀಪನಗೊಳಿಸಿತು.

ರಾಷ್ಟ್ರಪ್ರೇಮಕ್ಕಾಗಿ, ದೇಶದ ರಕ್ಷಣೆಗಾಗಿ ಜನರು ತಮ್ಮ ಪ್ರಾಣವನ್ನು ಪಣವಾಗಿಟ್ಟು ತಮ್ಮ ಕೊನೆಯ ಉಸಿರು ಇರುವ ತನಕ 'ವಂದೇ ಮಾತರಂ' ಹಾಡಿದ್ದುಂಟು. ನಾಡಿನ ಜನರಲ್ಲಿ ಇದು ಕೇವಲ ಗೀತೆ ಮಾತ್ರ ಆಗಿರಲಿಲ್ಲ; ಬೆಂಕಿಯ ಜ್ವಾಲೆಯಾಗಿತ್ತು. ಸಮರ್ಪಣೆಯ ಮಂತ್ರವಾಗಿತ್ತು. ಈ ಗೀತೆಯನ್ನು ರಾಷ್ಟ್ರಗೀತೆಯನ್ನಾಗಿ ಅಂಗೀಕರಿಸಲು ಕೆಲವರು ಒಪ್ಪಲಿಲ್ಲ. ಸಂವಿಧಾನದಲ್ಲಿ ಇದನ್ನು ರಾಷ್ಟ್ರಸ್ತವವಾಗಿ ಅಂಗೀಕರಿಸಲಾಗಿದೆ.

## ರಾಷ್ಟ್ರೀಯ ಪ್ರಾಣಿ, ಪಕ್ಷಿ ಮತ್ತು ಹೂ

ಹುಲಿ ನಮ್ಮ ರಾಷ್ಟ್ರೀಯ ಪ್ರಾಣಿ. ನೋಡಲು ಅದು ಆಕರ್ಷಕ. ಅದರ ಮೈಕಟ್ಟು ಬಲಿಷ್ಠ. ನವಿಲು ಭಾರತದ ರಾಷ್ಟ್ರೀಯ ಪಕ್ಷಿ. ಕೆಂಪು ಮತ್ತು ಹಳದಿ ಮಿಶ್ರ ಬಣ್ಣದ ರೆಕ್ಕೆ; ತಲೆಯ ಮೇಲೆ ತುರಾಯಿಯಂತಿರುವ ಗರಿಯುಳ್ಳ ನವಿಲು ನೋಡಲು ಮನೋಹರ. ಭಾರತೀಯ ಪರಂಪರೆಯಲ್ಲಿ ಮಹತ್ವವೆನಿಸಿದ ತಾವರೆ ನಮ್ಮ ರಾಷ್ಟ್ರೀಯ ಹೂ.

©KTBS NOT TO BE REPUBLISHED



**ರಾಷ್ಟ್ರೀಯ ಪ್ರಾಣಿ**
**ಹುಲಿ**



**ರಾಷ್ಟ್ರೀಯ ಪಕ್ಷಿ**
**ನವಿಲು**



**ರಾಷ್ಟ್ರೀಯ ಹೂ**
**ತಾವರೆ**

ರಾಷ್ಟ್ರೀಯ ಪಂಚಾಂಗ: ಭಾರತದಾದ್ಯಂತ ಅನೇಕ ರೀತಿಯ ಪಂಚಾಂಗಗಳು ಬಳಕೆಯಲ್ಲಿವೆ. ದಿನನಿತ್ಯದ ಬಳಕೆಗೆ ಇಡಿ ರಾಷ್ಟ್ರಕ್ಕೆ ಅನ್ವಯಿಸುವ ಏಕರೂಪದ ಪಂಚಾಂಗ ಇರಬೇಕೆಂದು ಭಾರತ ಸರ್ಕಾರವು 1957 ಮಾರ್ಚ್ 22ರಲ್ಲಿ 'ರಾಷ್ಟ್ರೀಯ ಪಂಚಾಂಗ'ವನ್ನು ಆಚರಣೆಗೆ ತಂದಿತು. ಈ ಪಂಚಾಂಗವನ್ನು ಸಿದ್ಧಗೊಳಿಸುವುದರಲ್ಲಿ ಖ್ಯಾತ ವಿಜ್ಞಾನಿ ದಿವಂಗತ ಮೇಘನಾದ ಸಹಾ ಅವರು ಪ್ರಮುಖ ಪಾತ್ರವಹಿಸಿದ್ದರು. ರಾಷ್ಟ್ರೀಯ ಪಂಚಾಂಗವು ಶಕವರ್ಷವನ್ನು ಅಳವಡಿಸಿಕೊಂಡಿದೆ. ಶಕವರ್ಷವು ಕ್ರೈಸ್ತವರ್ಷಕ್ಕಿಂತ 78 ವರ್ಷಗಳ ಅನಂತರ ಪ್ರಾರಂಭವಾಗುತ್ತದೆ. ರಾಷ್ಟ್ರೀಯ ಪಂಚಾಂಗದಲ್ಲಿ ವರ್ಷದ ಮೊದಲ ತಿಂಗಳು ಚೈತ್ರ ಮಾಸ. ವರ್ಷಾರಂಭ ಸಾಮಾನ್ಯವಾಗಿ ಮಾರ್ಚ್ 22ರಂದು. ಅಧಿಕ ವರ್ಷದಲ್ಲಿ ಅದು ಮಾರ್ಚ್ 21ರಂದು. ಭಾರತ ಸರ್ಕಾರವು ರಾಷ್ಟ್ರೀಯ ಪಂಚಾಂಗದ ದಿನಾಂಕ ಹಾಗೂ ಕ್ರಿಸ್ತಶಕ ದಿನಾಂಕಗಳೆರಡನ್ನೂ ತನ್ನ ಪತ್ರವ್ಯವಹಾರ ಮತ್ತು ದಾಖಲೆಗಳಲ್ಲಿ ಬಳಕೆ ಮಾಡುತ್ತದೆ.

## ರಾಷ್ಟ್ರೀಯ ಹಬ್ಬಗಳು

ದೇಶದ ಎಲ್ಲಾ ಕಡೆಯಲ್ಲೂ ಸಾರ್ವತ್ರಿಕವಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು.

- **ಗಣರಾಜ್ಯ ದಿನಾಚರಣೆ:** 1950 ಜನವರಿ 26ರಂದು ಗಣರಾಜ್ಯದ ಸಂವಿಧಾನ ಜಾರಿಗೆ ಬಂದಿತು. ಅದರ ನೆನಪಿಗೆ ಪ್ರತಿವರ್ಷ ಜನವರಿ 26ರಂದು ಭಾರತ ರಾಷ್ಟ್ರದಾದ್ಯಂತ ಗಣರಾಜ್ಯ ದಿನವನ್ನು ಆಚರಿಸುತ್ತಾರೆ. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಆ ದಿನ ಪಾರಿತೋಷಕಗಳನ್ನು ನೀಡಲಾಗುತ್ತದೆ. ಮುಖ್ಯ ಅತಿಥಿಗಳ ಸಮ್ಮುಖದಲ್ಲಿ ರಾಷ್ಟ್ರಪತಿ ಧ್ವಜಾರೋಹಣ ಮಾಡಿದ ಮೇಲೆ ಮೆರವಣಿಗೆ ಪ್ರಾರಂಭ ಆಗುತ್ತದೆ. ರಾಷ್ಟ್ರದ ರಾಜಧಾನಿಯಾದ ಹೊಸದೆಹಲಿಯಲ್ಲಿ ನಡೆಯುವ ಮೆರವಣಿಗೆ ಭವ್ಯವಾಗಿರುತ್ತದೆ. ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲೂ ಪ್ರಮುಖ ಕಾರ್ಯಕ್ರಮಗಳು ನಡೆಯುತ್ತವೆ.



ಗಣರಾಜ್ಯೋತ್ಸವದ ಪರೇಡ್

© KTBS NOT TO BE REPUBLISHED

• **ಸ್ವಾತಂತ್ರ್ಯ ದಿನಾಚರಣೆ:** ಪ್ರತಿವರ್ಷ ಆಗಸ್ಟ್ 15ರಂದು ನಮ್ಮ ರಾಷ್ಟ್ರದಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯುತ್ತದೆ. ದೆಹಲಿಯ ಕೆಂಪುಕೋಟೆಯಲ್ಲಿ ವಿಶೇಷ ಸಮಾರಂಭ ಏರ್ಪಾಟಾಗಿರುತ್ತದೆ. ಸ್ವಾತಂತ್ರ್ಯ ಘೋಷಣೆ ಮಾಡಿದಾಗ ಭಾರತದ ತ್ರಿವರ್ಣ ಧ್ವಜ ಹಾರಿದ್ದೂ ಇಲ್ಲೇ. ಪ್ರತಿ ವರ್ಷ ಆಗಸ್ಟ್ 15ರಂದು ಬೆಳಗ್ಗೆ ದೇಶದ ಪ್ರಧಾನಮಂತ್ರಿ ಕೆಂಪುಕೋಟೆಯ ಮೇಲೆ ಧ್ವಜಾರೋಹಣ ಮಾಡುತ್ತಾರೆ. ಅಲ್ಲಿಗೆ ಬಂದವರನ್ನು ಹಾಗೂ ದೇಶವನ್ನುದ್ದೇಶಿಸಿ ಮಾತನಾಡುತ್ತಾರೆ. ಸ್ವಾತಂತ್ರ್ಯ ದಿನಾಚರಣೆಯು ದೇಶದಾದ್ಯಂತ ನಡೆಯುವ ಉತ್ಸವ, ಎಲ್ಲೆಲ್ಲೂ ರಾಷ್ಟ್ರಧ್ವಜ ಆರೋಹಣ, ಧ್ವಜವಂದನೆ ನಡೆಯುತ್ತದೆ.

• **ಗಾಂಧೀ ಜಯಂತಿ:** ಮೋಹನದಾಸ್ ಕರಮಚಂದ ಗಾಂಧೀಜಿ 'ಮಹಾತ್ಮ' ಎಂದು ಜಗತ್ತಿನಲ್ಲಿ ವಂದ್ಯರು. ಅವರ ನಾಯಕತ್ವದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮ ಹೊಸಶಕ್ತಿ ಪಡೆಯಿತು.



ಮಹಾತ್ಮಾ ಗಾಂಧೀಜಿ

NOT TO BE REPUBLISHED

ಇವರ ನೆನಪಿಗೆ ಗಾಂಧಿ ಹುಟ್ಟಿದ ಅಕ್ಟೋಬರ್ 2ರಂದು ದೇಶದಾದ್ಯಂತ ಗಾಂಧೀಜಯಂತಿ ಆಚರಿಸಲಾಗುತ್ತಿದೆ. ಇವರೊಂದಿಗೆ ಅದೇ ದಿನ ಜನಿಸಿದ ಲಾಲ್‌ಬಹದ್ದೂರ್ ಶಾಸ್ತ್ರೀಯವರ ಜನ್ಮದಿನಾಚರಣೆಯನ್ನು ಆಚರಿಸಲಾಗುತ್ತಿದೆ.

## ದಿನಾಚರಣೆಗಳು

• **ಅಂಬೇಡ್ಕರ್ ಜಯಂತಿ:** ಸ್ವತಂತ್ರ ಭಾರತದ ಸಂವಿಧಾನವನ್ನು ಅತ್ಯಂತ ಸಮರ್ಪಕವಾಗಿ ರಚಿಸಿದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಭೀಮರಾವ್ ರಾಮ್‌ಜೀ ಅಂಬೇಡ್ಕರ್ ಅವರ ಜನ್ಮದಿನವಾದ ಎಪ್ರಿಲ್ 14ನ್ನು ಪ್ರತಿವರ್ಷ ಅಂಬೇಡ್ಕರ್ ಜಯಂತಿಯೆಂದು ಆಚರಿಸಲಾಗುತ್ತದೆ.



ಡಾ। ಬಿ.ಆರ್.ಅಂಬೇಡ್ಕರ್



ಡಾ. ಎಸ್. ರಾಧಾಕೃಷ್ಣನ್

♦ **ಶಿಕ್ಷಕರ ದಿನಾಚರಣೆ:** ಭಾರತದ ಎರಡನೇ ರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್ ಅವರ ಪಾಂಡಿತ್ಯ ಅಗಾಧವಾದುದು. ಶ್ರೇಷ್ಠ ಶಿಕ್ಷಕರೂ, ತತ್ವಜ್ಞಾನಿಯೂ ಆದ ರಾಧಾಕೃಷ್ಣನ್ ಅವರ ಜನ್ಮದಿನವಾದ ಸೆಪ್ಟೆಂಬರ್ 5ನ್ನು 'ಶಿಕ್ಷಕರ ದಿನ' ಎಂದು ಆಚರಿಸುತ್ತಾರೆ.



ಜವಾಹರಲಾಲ್ ನೆಹರು

♦ **ಮಕ್ಕಳ ದಿನಾಚರಣೆ:** ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರ ಜನ್ಮದಿನ ನವೆಂಬರ 14ನ್ನು ಮಕ್ಕಳದಿನವೆಂದು ಆಚರಣೆ ಮಾಡಲಾಗುತ್ತದೆ. ನೆಹರೂ ನಿಸರ್ಗಪ್ರಿಯ. ಕೆಂಗುಲಾಬಿ ಅವರ ಪ್ರೀತಿಯ ಹೂ.

♦ **ಸ್ವಾಮಿ ವಿವೇಕಾನಂದರು: ರಾಷ್ಟ್ರೀಯ ಯುವ ದಿನಾಚರಣೆ:** ಸ್ವಾಮಿ ವಿವೇಕಾನಂದರು (1863–1902) ಯುವ ಪೀಳಿಗೆಗೆ ಅದಮ್ಯ ಚೇತನ ನೀಡಿ ಇಡೀ ರಾಷ್ಟ್ರವನ್ನು ಹೊಸ ದಿಶೆಯತ್ತ ಕೊಂಡೊಯ್ದರು. ಮತಧರ್ಮದ ಹೆಸರಿನಲ್ಲಿ ಅಂಧಶ್ರದ್ಧೆ ಹೋಗಲಾಡಿಸಿ, ಕ್ರಾಂತಿಕಾರಕ ವಿಚಾರಗಳನ್ನು ಪ್ರಚುರಪಡಿಸಿದ್ದರು ಹಾಗೂ ರಾಮಕೃಷ್ಣ ಮಿಷನ್ ಸಂಸ್ಥಾಪಿಸಿದರು. ಸನ್ಯಾಸ ಜೀವನಕ್ಕೆ ಸಮಾಜ ಸೇವೆಯ ಹೊಸ ಆಯಾಮವನ್ನು ನೀಡಿದವರು ಸ್ವಾಮಿ ವಿವೇಕಾನಂದರು. "ದರಿದ್ರರು, ಅಜ್ಞಾನಿಗಳು, ಅನಕ್ಷರಸ್ಥರು, ರೋಗಿಗಳು – ಇವರೇ ನಿಮ್ಮ ದೇವರಾಗಲಿ. ಇವರ ಸೇವೆಮಾಡುವುದೇ ಸರ್ವಶ್ರೇಷ್ಠ ಧರ್ಮವೆಂದು ತಿಳಿಯಿರಿ", ಎಂದು ಸ್ವಾಮೀಜಿ ಕರೆ ನೀಡಿದರು.



ಸ್ವಾಮಿ ವಿವೇಕಾನಂದ

ಅವರ ಜನ್ಮದಿನವನ್ನು ಯುವಜನದಿನವೆಂದು (ಜನವರಿ 12) ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಕರ್ನಾಟಕ ಸರ್ಕಾರ ಈ ಸಂದರ್ಭದಲ್ಲಿ ಯುವಜನರಿಗೆ ಪ್ರೋತ್ಸಾಹ ನೀಡಲು ಹೊಸ ಧೋರಣೆಯನ್ನು ಪ್ರಕಟಿಸಿದೆ.

♦ **ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ನವಂಬರ್ 1:** ಬಾಂಬೆ, ಮದ್ರಾಸು ಮತ್ತು ಹೈದರಾಬಾದ್ ಪ್ರಾಂತಗಳಲ್ಲಿದ್ದ ಕನ್ನಡ ಪ್ರದೇಶಗಳನ್ನು ಮತ್ತು ಕೊಡಗು ಪ್ರಾಂತವನ್ನು ಮೈಸೂರು ಪ್ರಾಂತದ ಜೊತೆಗೆ ಒಂದುಗೂಡಿಸಿ 1956 ನವೆಂಬರ್ 1ರಂದು ಕನ್ನಡ ರಾಜ್ಯವನ್ನು ನಿರ್ಮಾಣ

©KTBS NOT TO BE REPUBLISHED

ಮಾಡಲಾಯಿತು. ಇದನ್ನು ಮೈಸೂರು ರಾಜ್ಯ ಎಂದು ಕರೆಯಲಾಯಿತು. ಇದರ ನೆನಪಿಗಾಗಿ ಪ್ರತಿ ವರ್ಷ ನವೆಂಬರ್ 1 ನ್ನು ಕರ್ನಾಟಕ ರಾಜ್ಯೋತ್ಸವವೆಂದು ಸಂಭ್ರಮದಿಂದ ಆಚರಿಸಲಾಗುತ್ತಿದೆ. 1973 ನವೆಂಬರ್ 1 ರಂದು ಅಂದಿನ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರು ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯವೆಂದು ಮರುನಾಮಕರಣ ಮಾಡಿದರು.

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ನಮ್ಮ ರಾಷ್ಟ್ರಧ್ವಜದ ಬಿಳಿ ಬಣ್ಣವು ಯಾವುದರ ಸಂಕೇತವಾಗಿದೆ?

2 ನಮ್ಮ ರಾಷ್ಟ್ರಲಾಂಛನದೊಂದಿಗೆ ಇರುವ ಬರಹದ ಮಹತ್ವವೇನು?

3 ರಾಷ್ಟ್ರಸ್ತವವನ್ನು ಯಾರು ರಚಿಸಿದರು?

4 ರಾಷ್ಟ್ರಧ್ವಜ ಸಂಹಿತೆಯಲ್ಲಿ ಯಾವ ಅಂಶಗಳಿವೆ?

5 ರಾಷ್ಟ್ರೀಯ ಹಬ್ಬಗಳು ಯಾವುವು?

6 ಕೆಲವು ದಿನಾಚರಣೆಗಳನ್ನು ಹೆಸರಿಸಿ.

### ಚಟುವಟಿಕೆಗಳು

1 ವಿವಿಧ ದೇಶಗಳ ರಾಷ್ಟ್ರೀಯ ಧ್ವಜಗಳನ್ನು ಸಂಗ್ರಹಿಸಿ.

2 ಬೇರೆ ರಾಷ್ಟ್ರಗಳ ರಾಷ್ಟ್ರಗೀತೆಯನ್ನು ಆಲಿಸಿ.

3 ರಾಷ್ಟ್ರಸ್ತವದ ಪೂರ್ಣಪಾಠವನ್ನು ಕಂಠಪಾಠ ಮಾಡಿ – ಹಾಡಿ.

4 ನಿಮ್ಮ ಗ್ರಾಮದಲ್ಲಿ ಆಚರಿಸಲಾಗುವ ಸ್ಥಳೀಯ ಹಬ್ಬಗಳನ್ನು ತಿಳಿಯಿರಿ.

©KTBS NOT TO BE REPUBLISHED

## ಭೂಗೋಳ

| ಅಧ್ಯಾಯ 21 | ಏಷ್ಯಾ ಖಂಡ |
|---|---|

H1P3L6

**ಪಾಠದ ಪರಿಚಯ**

ಏಷ್ಯಾ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ, ಪ್ರಾದೇಶಿಕ ವಿಭಾಗಗಳು, ಪ್ರಾಕೃತಿಕ ಲಕ್ಷಣಗಳು, ಪ್ರಮುಖ ನದಿಗಳು ಮತ್ತು ವ್ಯವಸಾಯ, ವಾಯುಗುಣ ಮತ್ತು ಸಸ್ಯವರ್ಗ, ಪ್ರಮುಖ ಖನಿಜಗಳು, ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳನ್ನು ಕುರಿತ ಪರಿಚಯ ಈ ಪಾಠದಲ್ಲಿದೆ.

**ಸಾಮರ್ಥ್ಯಗಳು**

1 ಏಷ್ಯಾ ಖಂಡದ ಸ್ಥಾನ, ವಿಸ್ತೀರ್ಣ, ಭೌಗೋಳಿಕ ಸನ್ನಿವೇಶ ಹಾಗೂ ವೈವಿಧ್ಯ ಲಕ್ಷಣಗಳನ್ನು ತಿಳಿಯುವುದು.

2 ಪ್ರಾದೇಶಿಕ ವಿಭಾಗಗಳ ವಿಂಗಡಣೆ ಮತ್ತು ಅವುಗಳ ನಡುವಣ ಹೋಲಿಕೆ ಬಗ್ಗೆ ಅರಿಯುವುದು.

3 ಏಷ್ಯಾದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ಕುರಿತ ವಿವರಣೆ ಪಡೆಯುವುದು.

4 ನದಿಗಳ ವ್ಯವಸ್ಥೆ ಮತ್ತು ವ್ಯವಸಾಯಗಳ ನಡುವಣ ಸಂಬಂಧ ತಿಳಿದುಕೊಳ್ಳುವುದು.

5 ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗಗಳ ನಡುವಣ ಸಂಬಂಧ ಕುರಿತು ತಿಳಿಯುವುದು.

6 ಪ್ರಮುಖ ಖನಿಜಗಳು, ಅವುಗಳ ಹಂಚಿಕೆ. ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಜನಸಾಂದ್ರತೆ ಕುರಿತು ತಿಳಿದುಕೊಳ್ಳುವುದು.

© KTBS NOT TO BE REPUBLISHED

## 1. ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

**ಪರಿಚಯ :** ಪ್ರಪಂಚದ ಭೂಖಂಡಗಳಲ್ಲಿ ಏಷ್ಯಾ ದೊಡ್ಡದು. ಹೀಗಾಗಿ ಅದು ಪ್ರಾಕೃತಿಕ ಲಕ್ಷಣ, ವಾಯುಗುಣ, ಸಸ್ಯವರ್ಗ, ವನ್ಯಜೀವಿ, ಮಣ್ಣಿನ ಪ್ರಕಾರ ಮೊದಲಾದವುಗಳಲ್ಲಿ ವೈವಿಧ್ಯ ಹೊಂದಿದೆ. ಈ ಖಂಡದಲ್ಲಿ ಅತ್ಯಂತ ಎತ್ತರವುಳ್ಳ ಪರ್ವತ, ಪ್ರಸ್ಥಭೂಮಿಗಳು, ಫಲವತ್ತಾದ ವಿಶಾಲ ಮೈದಾನ, ಮರುಭೂಮಿ, ನದಿ ವ್ಯವಸ್ಥೆ ಮತ್ತು ಸರೋವರಗಳು ಕಂಡುಬರುತ್ತವೆ. ಜೊತೆಗೆ ಭಾಷೆ, ಧರ್ಮ, ಜನಸಂಖ್ಯೆಯ ಹಂಚಿಕೆ ಮತ್ತು ಜನಸಾಂದ್ರತೆಗಳಲ್ಲಿಯೂ ನಾವು ವೈವಿಧ್ಯವನ್ನು ಕಾಣಬಹುದು. ಆದ್ದರಿಂದ ಏಷ್ಯಾವನ್ನು "ವೈವಿಧ್ಯಗಳ ಖಂಡ" ಎಂದು ಕರೆಯುತ್ತಾರೆ.

**ಚಟುವಟಿಕೆ:** ಏಷ್ಯಾ ಖಂಡವನ್ನು ವೈವಿಧ್ಯಗಳ ಖಂಡ ಎಂದು ಕರೆಯುವ ಕಾರಣಗಳೇನೆಂಬುದನ್ನು ಚರ್ಚಿಸಿ. ಏಷ್ಯಾದ ಭೂಪಟವನ್ನು ಮುಂದಿಟ್ಟುಕೊಂಡು ಚರ್ಚಿಸಿ.

**ಸ್ಥಾನ:** ಏಷ್ಯಾ ಖಂಡವು $1^0–16'$ ಉತ್ತರದಿಂದ $77^0–41'$ ಉತ್ತರ ಅಕ್ಷಾಂಶ ಹಾಗೂ $26^0–04'$ ಪೂರ್ವದಿಂದ $169^0–40'$ ಪಶ್ಚಿಮ ರೇಖಾಂಶಗಳ ನಡುವೆ ವಿಸ್ತರಿಸಿದೆ. ಮಲೇಷ್ಯದ ಸ್ವಲ್ಪ ದಕ್ಷಿಣದಲ್ಲಿ ಭೂಮಧ್ಯರೇಖೆ ಇದೆ. ಕರ್ಕಾಟಕ ಸಂಕ್ರಾಂತಿ ವೃತ್ತವು ಭಾರತ ಮತ್ತು ಅರೇಬಿಯಗಳ ಮೂಲಕ ಹಾಯ್ದು ಹೋಗಿವೆ.

**ವಿಸ್ತೀರ್ಣ:** ಏಷ್ಯಾಖಂಡದ ಒಟ್ಟು ಭೌಗೋಳಿಕ ವಿಸ್ತೀರ್ಣ ಸುಮಾರು 44 ಮಿಲಿಯನ್ ಚ.ಕಿ.ಮೀ.ಗಳು. ಇದು ಪ್ರಪಂಚದ ಮೇಲ್ಮೈ ಭೂಭಾಗದ ವಿಸ್ತೀರ್ಣದಲ್ಲಿ ಶೇ.33 ಭಾಗದಷ್ಟಾಗಿದೆ. ಈ ಖಂಡವು ಪೂರ್ಣವಾಗಿ ಉತ್ತರಗೋಳಾರ್ಧದಲ್ಲಿದೆ.



@KTBS NOT TO BE REPUBLISHED

***ಪ್ರಪಂಚದಲ್ಲಿ ಏಷ್ಯಾದ ಸ್ಥಾನ***

**ಭೌಗೋಳಿಕ ಸನ್ನಿವೇಶ:** ಏಷ್ಯಾ ಖಂಡವು ಮೂರು ಕಡೆ ಸಾಗರಗಳು ಮತ್ತು ಒಂದು ಕಡೆ ಭೂಭಾಗದಿಂದಾವರಿಸಿದೆ. ಸುತ್ತುವರಿದಿರುವ ಸಾಗರಗಳೆಂದರೆ: ಉತ್ತರದಲ್ಲಿ ಆರ್ಕ್ಟಿಕ್, ಪೂರ್ವಭಾಗದಲ್ಲಿ ಪೆಸಿಫಿಕ್ ಮತ್ತು ದಕ್ಷಿಣದಲ್ಲಿ ಹಿಂದೂಸಾಗರಗಳು. ಪಶ್ಚಿಮಕ್ಕೆ ಯೂರೋಪ್ ಖಂಡವಿದೆ.

ಏಷ್ಯಾ ಮತ್ತು ಯೂರೋಪ್ ಖಂಡಗಳ ಗಡಿಯು ಸಾಂಪ್ರದಾಯಕವಾದ ಕಾಲ್ಪನಿಕ ರೇಖೆಯಾಗಿದ್ದು, ಅದು ಅಂಕುಡೊಂಕಾಗಿದೆ ಮತ್ತು ಯೂರಲ್ ಪರ್ವತ, ಕ್ಯಾಸ್ಪಿಯನ್ ಸಮುದ್ರ, ಕಕಾಸಸ್ ಪರ್ವತ ಮತ್ತು ಕಪ್ಪು ಸಮುದ್ರಗಳ ಮುಖಾಂತರ ಹಾಯ್ದು ಹೋಗುತ್ತದೆ.

**ಯೂರೋಪ್ ಮತ್ತು ಏಷ್ಯಾಗಳನ್ನು ಒಟ್ಟುಗೂಡಿಸಿ 'ಯೂರೇಷ್ಯ' ಎನ್ನುವರು**




*ಏಷ್ಯಾದ ಸ್ಥಾನ ಮತ್ತು ಭೌಗೋಳಿಕ ಸನ್ನಿವೇಶ*

ಏಷ್ಯಾ ಮತ್ತು ಆಫ್ರಿಕ ಖಂಡಗಳ ಗಡಿಯು ಸಾಮಾನ್ಯವಾಗಿ ಸೂಯೇಜ್ ಕಾಲುವೆಯ ಮುಖಾಂತರ ಹಾಗೂ ಏಷ್ಯಾ ಮತ್ತು ಆಸ್ಟ್ರೇಲಿಯಗಳ ಗಡಿ ರೇಖೆಯು ನ್ಯೂಗಿನಿ ಮತ್ತು ಆಸ್ಟ್ರೇಲಿಯಗಳ ನಡುವೆ ಹಾಯ್ದು ಹೋಗುತ್ತದೆ.

## 2. ಏಷ್ಯಾದ ಪ್ರಾದೇಶಿಕ ವಿಭಾಗಗಳು

ಇಂದು ಏಷ್ಯಾದಲ್ಲಿ 48 ದೇಶಗಳಿವೆ. ಅವುಗಳನ್ನು ಕೆಳಕಂಡಂತೆ ಐದು ಪ್ರಾದೇಶಿಕ ಗುಂಪುಗಳಾಗಿ ವಿಂಗಡಿಸಲಾಗಿದೆ.

**1. ಪೂರ್ವ ಏಷ್ಯಾ:** ಇದರಲ್ಲಿ ಚೀನ, ಉತ್ತರ ಮತ್ತು ದಕ್ಷಿಣ ಕೊರಿಯ, ಜಪಾನ್, ಹಾಂಕ್‌ಕಾಂಗ್, ತೈವಾನ್ ಮತ್ತು ಮಂಗೋಲಿಯ ದೇಶಗಳು ಸೇರಿವೆ. ಇದು ಉತ್ತರದಲ್ಲಿ ವಿಶಾಲವಾದ ರಷ್ಯ, ದಕ್ಷಿಣದಲ್ಲಿ ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಾಗಳ ನಡುವೆ ವಿಸ್ತರಿಸಿದೆ.

**2. ಆಗ್ನೇಯ ಏಷ್ಯಾ:** ಇದು ಮಯನ್ಮಾರ್, ಲಾವೋಸ್, ವಿಯೆಟ್ನಾಂ, ಥೈಲೆಂಡ್, ಕಾಂಬೋಡಿಯಾ, ಮಲೇಷ್ಯ, ಇಂಡೊನೇಷ್ಯ, ಸಿಂಗಾಪುರ, ಬ್ರುನ್ಹೆ ಮತ್ತು ಫಿಲಿಪ್ಪೈನ್ಸ್ ದೇಶಗಳನ್ನೊಳಗೊಂಡಿದೆ. ಇದೊಂದು ಪರ್ಯಾಯ ದ್ವೀಪ. ಅಂದರೆ ದ್ವೀಪ ಸಮೂಹಗಳ

@KTBS NOT TO BE REPUBLISHED

ಪ್ರದೇಶ. ಉದಾ: ಸುಮಾತ್ರ, ಜಾವ, ಸುಲಾವೇಶಿ, ಬೋರ್ನಿಯೊ, ಪಾಪುವ ಇತ್ಯಾದಿ. ಇದರ ಪಶ್ಚಿಮಕ್ಕೆ ಹಿಂದೂಸಾಗರ ಮತ್ತು ಪೂರ್ವಕ್ಕೆ ಪೆಸಿಫಿಕ್ ಸಾಗರಗಳಿವೆ.




*ಏಷ್ಯಾದ ಪ್ರಾದೇಶಿಕ ವಿಭಾಗಗಳು*

©KTBS Not to be republished

**3. ದಕ್ಷಿಣ ಏಷ್ಯಾ:** ಇದು ಭಾರತ, ಬಾಂಗ್ಲಾದೇಶ, ಭೂತಾನ, ನೇಪಾಲ, ಪಾಕಿಸ್ತಾನ, ಶ್ರೀಲಂಕ ಮತ್ತು ಮಾಲ್ಡೀವ್ಸ್‌ಗಳನ್ನು ಒಳಗೊಂಡಿದೆ. ಇವುಗಳಲ್ಲಿ ಭಾರತ ಅತಿ ದೊಡ್ಡದು. ಇದನ್ನು ದಕ್ಷಿಣದಲ್ಲಿ ಹಿಂದೂಸಾಗರ ಮತ್ತು ಅದರ ಉಪಭಾಗಗಳಾದ ಬಂಗಾಳ ಕೊಲ್ಲಿ ಮತ್ತು ಅರಬ್ಬಿ ಸಮುದ್ರಗಳು ಸುತ್ತುವರಿದಿವೆ. ಉತ್ತರದಲ್ಲಿ ಹಿಮಾಲಯ ಪರ್ವತ ಸರಣಿ, ಪೂರ್ವಕ್ಕೆ ಮಯನ್ಮಾರ್ ಮತ್ತು ಪಶ್ಚಿಮಕ್ಕೆ ಅಫ್‌ಘಾನಿಸ್ತಾನಗಳಿವೆ.

**4. ನೈಋತ್ಯ ಏಷ್ಯಾ:** ಅಫ್‌ಘಾನಿಸ್ತಾನ, ಬಹ್ರೇನ್, ಸೈಪ್ರಸ್, ಇರಾನ್, ಇರಾಕ್, ಇಸ್ರೇಲ್, ಜೋರ್ಡಾನ್, ಕುವೈತ್, ಲೆಬನಾನ್, ಓಮನ್, ಕಟಾರ್, ಸಿರಿಯ, ಪ್ಯಾಲೆಸ್ತೈನ್, ಸೌದಿಅರೇಬಿಯ, ಅರಬ್ ಎಮಿರೇಟ್ಸ್, ಯೆಮನ್ ಮತ್ತು ಟರ್ಕಿ ದೇಶಗಳು ಈ ವಿಭಾಗದಲ್ಲಿ ಸೇರುತ್ತವೆ. ಈ ವಿಭಾಗವು ಕಪ್ಪುಸಮುದ್ರದ ದಕ್ಷಿಣ ಭಾಗದಲ್ಲಿದ್ದು, ಪಶ್ಚಿಮಕ್ಕೆ ಮೆಡಿಟರೇನಿಯನ್ ಸಮುದ್ರ ಮತ್ತು ಪೂರ್ವಕ್ಕೆ ಭಾರತಗಳ ನಡುವೆ ವಿಸ್ತರಿಸುತ್ತದೆ. ಇದು ಬಹಳವಾಗಿ ಮರುಭೂಮಿ ಮತ್ತು ಅರೆಮರುಭೂಮಿಗಳಿಂದ ಆವರಿಸಿದ್ದರೂ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳಿಂದ ಸಮೃದ್ಧವಾಗಿದೆ.

**5. ಮಧ್ಯ ಏಷ್ಯಾ:** ಇದು ಕ್ಯಾಸ್ಪಿಯನ್ ಸಮುದ್ರದಿಂದ ಚೀನದವರೆಗೆ ಹಾಗೂ ಕಜಕಿಸ್ತಾನದಿಂದ ಇರಾನ್-ಅಫ್‌ಘಾನಿಸ್ತಾನಗಳವರೆಗೆ ವಿಸ್ತರಿಸಿದೆ. ಈ ಭಾಗದ ಪ್ರಮುಖ ದೇಶಗಳೆಂದರೆ: ಕಜಕಿಸ್ತಾನ, ಕಿರ್ಘಿಸ್ತಾನ, ತಜಕಿಸ್ತಾನ, ಟರ್ಕ್ಮೇನಿಸ್ತಾನ ಮತ್ತು ಉಜ್ಬೇಕಿಸ್ತಾನ ಹಾಗೂ ಸೈಬೀರಿಯ(ರಷ್ಯ)ಗಳು.

## 3. ಪ್ರಾಕೃತಿಕ ಲಕ್ಷಣಗಳು

ಏಷ್ಯಾದ ಪ್ರಾಕೃತಿಕ ಲಕ್ಷಣಗಳಲ್ಲಿ ಎತ್ತರವಾದ ಪರ್ವತ ಸರಣಿಗಳು ಪ್ರಮುಖ ಭೂಸ್ವರೂಪಗಳಾಗಿವೆ. ಜೊತೆಗೆ ವಿವಿಧ ಪ್ರಸ್ಥಭೂಮಿ, ಮೆಕ್ಕಲು ಮಣ್ಣುಳ್ಳ ಮೈದಾನ ಮತ್ತು ದ್ವೀಪ ಸಮೂಹಗಳನ್ನೂ ಹೊಂದಿದೆ.

**ಪ್ರಮುಖ ಪ್ರಾಕೃತಿಕ ವಿಭಾಗಗಳು:** ಭೂರಚನೆ ಮತ್ತು ಮೇಲ್ಮೈ ಲಕ್ಷಣಗಳನ್ನಾಧರಿಸಿ ಏಷ್ಯಾಖಂಡವನ್ನು ಐದು ಪ್ರಮುಖ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಬಹುದು:

1. ವಾಯವ್ಯ ತಗ್ಗು ಮೈದಾನಗಳು
2. ಕೇಂದ್ರದ ಎತ್ತರ ಭಾಗಗಳು
3. ದಕ್ಷಿಣ ಪ್ರಸ್ಥಭೂಮಿಗಳು
4. ನದಿಗಳ ಮಹಾ ಮೈದಾನಗಳು
5. ದ್ವೀಪ ಸಮೂಹಗಳು

**1. ವಾಯವ್ಯ ತಗ್ಗು ಮೈದಾನಗಳು:** ಈ ವಿಭಾಗವು ಏಷ್ಯಾದ ಪ್ರಾಕೃತಿಕ ಲಕ್ಷಣಗಳಲ್ಲಿ ಹೆಚ್ಚು ಮಹತ್ವವುಳ್ಳದ್ದು. ಬೇರಿಂಗ್ ಜಲಸಂಧಿಯಿಂದ ಕ್ಯಾಸ್ಪಿಯನ್ ಸಮುದ್ರದವರೆಗೆ ವಿಸ್ತರಿಸಿದೆ. ಕೇಂದ್ರದ ಎತ್ತರ ಭಾಗಗಳು ಮತ್ತು ಆರ್ಕ್ಟಿಕ್ ಸಾಗರದ ನಡುವೆ ಕಂಡುಬರುತ್ತದೆ. ತ್ರಿಕೋನ ಆಕಾರವುಳ್ಳ ಈ ವಿಶಾಲವಾದ ತಗ್ಗು ಮೈದಾನವನ್ನು 'ಸೈಬೀರಿಯ ಮೈದಾನ' ಎಂದು ಕರೆಯುತ್ತಾರೆ. ಉತ್ತರದ ಕಡೆಗೆ ಸಾಧಾರಣ ಇಳಿಜಾರುಳ್ಳದ್ದು. ಈ ಮೈದಾನದ ಮೂಲಕ ಕೆಲವು ನದಿಗಳು ಹರಿಯುತ್ತವೆ. ಉದಾ: ಲೀನ, ಓಬ್ ಮತ್ತು ಯೆನ್ಸಿ. ಇವು ಉತ್ತರದ ಕಡೆಗೆ ಹರಿದು ಆರ್ಕ್ಟಿಕ್ ಸಾಗರವನ್ನು ಸೇರುತ್ತವೆ.

**2. ಕೇಂದ್ರದ ಎತ್ತರ ಭಾಗಗಳು:** ಇದು ಏಷ್ಯಾದ ಎರಡನೆ ಅತಿ ಪ್ರಮುಖ ಪ್ರಾಕೃತಿಕ ವಿಭಾಗ. ವಾಯವ್ಯ ತಗ್ಗು ಮೈದಾನಗಳ ದಕ್ಷಿಣ ಭಾಗದಲ್ಲಿವೆ. ಮಧ್ಯ ಏಷ್ಯಾದಲ್ಲಿರುವ ಪರ್ವತ ಸರಣಿಗಳನ್ನು 'ಕೇಂದ್ರದ ಎತ್ತರ ಭಾಗಗಳು' ಎನ್ನುವರು. ಇದು ಏಷ್ಯಾ ಮೈನರ್‌ನಿಂದ ಬೇರಿಂಗ್ ಜಲಸಂಧಿವರೆಗೂ ವಿಸ್ತರಿಸಿದೆ. ಇಲ್ಲಿ ಅನೇಕ ಪರ್ವತ ಸರಣಿಗಳು ಪಾಮಿರ್ ಗ್ರಂಥಿಯಿಂದ ಎಲ್ಲೆಡೆಗೂ ಹಬ್ಬಿವೆ. ಪೂರ್ವದಿಕ್ಕಿನ ಸರಣಿಗಳಲ್ಲಿ ಹಿಮಾಲಯ, ಕುನ್‌ಲುನ್, ಕಾರಾಕೋರಂ, ಟಿಯೆನ್‌ಶಾನ್, ಆಲ್ಟಾಯ್, ಸಯಾನ್, ಯಬ್ಲೋನಿ, ಕಿಂಗಾನ್ ಮತ್ತು ಸ್ಟಾನ್‌ವಾಯ್ ಪರ್ವತಗಳು ಮುಖ್ಯವಾದವು. ಪಶ್ಚಿಮದ ಸರಣಿಗಳಲ್ಲಿ ಹಿಂದುಕುಶ್, ಕಿರ್ತಾರ್, ಸುಲೈಮಾನ್, ಎಲ್ಬರ್ಜ್, ಜಾಗ್ರೋಸ್, ಕಕಾಸಸ್, ಪೊಂಟಿನ್ ಮತ್ತು ತಾರಸ್ ಪರ್ವತಗಳು ಸೇರಿವೆ.

@KTBS NOT TO BE REPUBLISHED

ಮಡಿಕೆ ಪರ್ವತಗಳಾದ ಹಿಮಾಲಯದ ಸರಣಿಯು ಪಾಮಿರ್ ಗ್ರಂಥಿಯಿಂದ ಆಗ್ನೇಯಕ್ಕೆ ಹಬ್ಬಿವೆ. ಅವು ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಪರ್ವತಗಳು. ಇಲ್ಲಿನ ಮೌಂಟ್ ಎವರೆಸ್ಟ್ ಪ್ರಪಂಚದಲ್ಲೇ ಎತ್ತರವಾದ ಶಿಖರ.



ಮೌಂಟ್ ಎವರೆಸ್ಟ್

ಪರ್ವತ ಸರಣಿಗಳ ನಡುವೆ ಅನೇಕ ಪ್ರಸ್ಥ ಭೂಮಿಗಳಿವೆ. ಉದಾ: ಟಿಬೆಟ್, ಮಂಗೋಲಿಯ, ಇರಾನ್, ಅನಟೋಲಿಯ ಪ್ರಸ್ಥಭೂಮಿ ಇತ್ಯಾದಿ. ಏಷ್ಯಾ ಖಂಡದ ಅನೇಕ ನದಿಗಳು ಈ ಎತ್ತರದ ಭಾಗಗಳಲ್ಲಿ ಉಗಮವಾಗುತ್ತವೆ.




ಪ್ರಾಕೃತಿಕ ವಿಭಾಗಗಳು

**3. ದಕ್ಷಿಣ ಪ್ರಸ್ಥಭೂಮಿಗಳು:** ಇವು ಕಠಿಣ ಮತ್ತು ಸ್ಪಟಿಕ ಶಿಲೆಗಳಿಂದ ರಚನೆಗೊಂಡ ಪುರಾತನ ಪ್ರಸ್ಥಭೂಮಿಗಳು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಅರೇಬಿಯ, ದಖನ್ (ಭಾರತ), ಯುನ್ನಾನ್ (ಚೀನ) ಮತ್ತು ಶಾನ್ (ಮಯನ್ಮಾರ್) ಪ್ರಸ್ಥಭೂಮಿ.

ಅರೇಬಿಯ ಪ್ರಸ್ಥಭೂಮಿಯು ಒಂದು ಪರ್ಯಾಯ ದ್ವೀಪ ಮತ್ತು ಇದೊಂದು ಶುಷ್ಕ ಪ್ರದೇಶ.

ದಖನ್ ಪ್ರಸ್ಥಭೂಮಿಯು ಭಾರತದ ಪರ್ಯಾಯ ದ್ವೀಪದ ಹೆಚ್ಚು ಭಾಗವನ್ನಾವರಿಸಿದೆ. ಮಧ್ಯಭಾರತದ ಬೆಟ್ಟದ ಸಾಲುಗಳು, ಪಶ್ಚಿಮ ಘಟ್ಟ ಹಾಗೂ ಪೂರ್ವ ಘಟ್ಟಗಳ ನಡುವೆ ಇದೆ. ಇದು ಪೂರ್ವ ದಿಕ್ಕಿಗೆ ಇಳಿಜಾರಾಗಿದ್ದು, ಆ ಮೂಲಕ ಅನೇಕ ನದಿಗಳು ಹರಿಯುವವು.

ಚೀನದ ನೈಋುತ್ಯಕ್ಕೆ ಯುನ್ನಾನ್ ಪ್ರಸ್ಥಭೂಮಿಯಿದೆ. ಇದೊಂದು ಉನ್ನತ ಸುಣ್ಣಕಲ್ಲು ಪ್ರದೇಶ. ಇದರ ಮುಂದುವರಿದ ಭಾಗವೇ ಶಾನ್ ಪ್ರಸ್ಥಭೂಮಿ.

**4. ನದಿಗಳ ಮಹಾ ಮೈದಾನಗಳು:** ಹಿಂದೂ ಸಾಗರ ಅಥವಾ ಪೆಸಿಫಿಕ್ ಸಾಗರಗಳಿಗೆ ಸೇರುವ ಏಷ್ಯಾದ ನದಿಗಳ ಮೈದಾನಗಳನ್ನೊಳಗೊಂಡಿದೆ. ಇಲ್ಲಿ ಹರಿಯುವ ನದಿಗಳು ಮೆಕ್ಕಲು ಮಣ್ಣನ್ನು ಸಂಚಯ ಮಾಡುವುದರೊಂದಿಗೆ ಫಲವತ್ತಾದ ಮೈದಾನಗಳನ್ನು ನಿರ್ಮಿಸಿವೆ. ಈ ವಿಭಾಗದ ಪ್ರಮುಖ ಮೈದಾನಗಳೆಂದರೆ: ಸಿರಿಯ ಮತ್ತು ಇರಾಕ್‌ನ ಟೈಗ್ರಿಸ್–ಯುಫ್ರಟೀಸ್, ಭಾರತ–ಪಾಕಿಸ್ತಾನಗಳ ಸಿಂಧೂ–ಗಂಗಾ ಮೈದಾನಗಳು, ಮಯನ್ಮಾರಿನ ಇರವಾಡಿ, ಇಂಡೊಚೀನದ ಮೀನಾಮ್ ಮತ್ತು ಮೀಕಾಂಗ್, ಚೀನದ ಚಿಯಾಂಗ್–ಜಿಯಾಂಗ್ (ಯಾಂಗ್‌ಟ್ಸೆ), ಸಿಕಿಯಾಂಗ್ ಮತ್ತು ಹ್ವಾಂಗ್‌ಹೊ ನದಿ ಮೈದಾನಗಳು. ಇವು ಹೆಚ್ಚು ಜನಭರಿತವಾಗಿವೆ.

**5. ದ್ವೀಪ ಸಮೂಹ:** ಏಷ್ಯಾಖಂಡದ ಆಗ್ನೇಯ ಮತ್ತು ಪೆಸಿಫಿಕ್ ತೀರಗಳಲ್ಲಿ ಅನೇಕ ದ್ವೀಪಗಳಿವೆ. ಅವು ಉತ್ತರದಲ್ಲಿ ಕಮಚಟ್ಕದಿಂದ ದಕ್ಷಿಣದಲ್ಲಿ ಫಿಲಿಪ್ಪೈನ್ಸ್ ಮತ್ತು ಬೋರ್ನಿಯೊವರೆಗೆ ಮಾಲೆಯಂತೆ ಹಬ್ಬಿವೆ. ಅವು ಐದು ಸಮುದ್ರಗಳಿಂದ (ಓಖೋಟಸ್ಕ ಸಮುದ್ರ, ಜಪಾನ್ ಸಮುದ್ರ, ಹಳದಿ ಸಮುದ್ರ, ಪೂರ್ವ ಚೀನ ಸಮುದ್ರ ಮತ್ತು ದಕ್ಷಿಣ ಚೀನ ಸಮುದ್ರ) ಆವರಿಸಿವೆ.

ಪ್ರಮುಖ ದ್ವೀಪ ಸಮೂಹಗಳೆಂದರೆ: ಕ್ಯೂರೈಲ್, ಜಪಾನ್, ಲಾಚು, ಫಿಲಿಪ್ಪೈನ್ಸ್ ಮತ್ತು ಬೋರ್ನಿಯೊ. ಇವುಗಳಲ್ಲಿ ಬಹಳಷ್ಟು ಜ್ವಾಲಾಮುಖಿ ಜನಿತವಾದವು. ಜೊತೆಗೆ ಫಲವತ್ತಾದ ಮಣ್ಣು, ಆಳವಾದ ಕಣಿವೆ ಮತ್ತು ಶಂಕಾಕೃತಿ ಪರ್ವತಗಳನ್ನು ಹೊಂದಿವೆ.

## 4. ಪ್ರಮುಖ ನದಿಗಳು ಮತ್ತು ವ್ಯವಸಾಯ

**ಏಷ್ಯಾದ ನದಿಗಳು:** ಏಷ್ಯಾದ ನದಿ ಜಾಲಗಳಲ್ಲಿ ವೈವಿಧ್ಯವಿದೆ. ಈ ಖಂಡದ ನದಿವ್ಯವಸ್ಥೆಯ ಮೇಲೆ ಪ್ರಾಕೃತಿಕ ಲಕ್ಷಣ ಮತ್ತು ಸುತ್ತಲಿನ ಜಲರಾಶಿಗಳು ಪ್ರಭಾವ ಬೀರುತ್ತವೆ. ಆರ್ಕ್ಟಿಕ್, ಪೆಸಿಫಿಕ್ ಮತ್ತು ಹಿಂದೂ ಸಾಗರಗಳು ಏಷ್ಯಾವನ್ನು ಸುತ್ತುವರಿದಿವೆ. ಈ ಖಂಡದಲ್ಲಿ ಹರಿಯುವ

NOT TO BE REPUBLISHED © KTBS

ಹೆಚ್ಚಿನ ಸಂಖ್ಯೆಯ ನದಿಗಳು ಈ ಸಾಗರಗಳಿಗೆ ಸೇರುವವು. ಹೀಗಾಗಿ ಸಾಗರಗಳಿಗೆ ನದಿಗಳು ಸೇರುವುದನ್ನಾಧರಿಸಿ ಏಷ್ಯಾದ ನದಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

**1. ಹಿಂದೂ ಸಾಗರ ಸೇರುವ ನದಿಗಳು:** ಈ ಗುಂಪಿಗೆ ಸೇರಿದ ಮುಖ್ಯ ನದಿಗಳೆಂದರೆ: ಸಿರಿಯ ಹಾಗೂ ಇರಾಕ್ ದೇಶಗಳ ಟೈಗ್ರಿಸ್ ಮತ್ತು ಯುಫ್ರಟೀಸ್ ನದಿಗಳು ಪರ್ಷಿಯ ಖಾರಿಯನ್ನೂ, ಪಾಕಿಸ್ತಾನ ಮತ್ತು ಭಾರತದ ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರ ನದಿಗಳು ಹಿಮಾಲಯದಲ್ಲಿ ಉಗಮಿಸಿ ದಕ್ಷಿಣಕ್ಕೆ ಹರಿದು ಹಿಂದೂ ಸಾಗರವನ್ನು ಸೇರುತ್ತವೆ. ಮಯನ್ಮಾರಿನ ಸಿಟ್ಯಾಂಗ್, ಸಾಲ್ವೀನ್ ಮತ್ತು ಇರವಾಡಿ ನದಿಗಳು ಬಂಗಾಳ ಕೊಲ್ಲಿಗೆ ಸೇರುವವು.

**2. ಪೆಸಿಫಿಕ್ ಸಾಗರ ಸೇರುವ ನದಿಗಳು:** ಈ ಗುಂಪಿನಲ್ಲಿ ರಷ್ಯದ ಅಮುರ್, ಚೀನದ ಹ್ವಾಂಗ್ ಹೊ, ಚಿಯಾಂಗ್ ಜಿಯಾಂಗ್ (ಯಾಂಗ್‌ಟ್ಸೆ) ಮತ್ತು ಸಿಕಿಯಾಂಗ್ ನದಿಗಳು ಪೂರ್ವದ ಕಡೆಗೆ ಹರಿಯುತ್ತಾ ಕ್ರಮವಾಗಿ ಓಖೋಟಸ್ಕ, ಹಳದಿ ಸಮುದ್ರ ಮತ್ತು ಚೀನ ಸಮುದ್ರಗಳನ್ನು ಸೇರುತ್ತವೆ. ಇಂಡೋಚೀನದ ಮೀನಾಮ್ ಮತ್ತು ಮೀಕಾಂಗ್ ನದಿಗಳು ದಕ್ಷಿಣ ಚೀನ ಸಮುದ್ರವನ್ನು ಸೇರುತ್ತವೆ.




ಏಷ್ಯಾದ ನದಿ ವ್ಯವಸ್ಥೆ

NOT TO BE REPUBLISHED

**3. ಆರ್ಕ್ಟಿಕ್ ಸಾಗರ ಸೇರುವ ನದಿಗಳು:** ಓಬ್, ಯೆನಿಸಿ ಮತ್ತು ಲೀನ ಎಂಬುವವು ಈ ಗುಂಪಿನ ಪ್ರಮುಖ ನದಿಗಳು. ಇವು ಕೇಂದ್ರದ ಉನ್ನತ ಭಾಗಗಳಲ್ಲಿ ಉಗಮಹೊಂದಿ ಉತ್ತರಕ್ಕೆ ಹರಿದು ಆರ್ಕ್ಟಿಕ್ ಸಾಗರವನ್ನು ಸೇರುತ್ತವೆ.

**4. ಒಳನಾಡಿನ ನದಿಗಳು:** ಈ ಗುಂಪಿಗೆ ಸೇರಿದ ನದಿಗಳು ಒಳನಾಡಿನ ಸಮುದ್ರಗಳಿಗೆ ಸೇರುವವು. ಉದಾ: ವೋಲ್ಗಾ ಮತ್ತು ಯೂರಲ್ ನದಿ ಕ್ಯಾಸ್ಪಿಯನ್ ಸಮುದ್ರವನ್ನು ಮತ್ತು ಅಮುದರಿಯ ಮತ್ತು ಸಿರ್‌ದರಿಯಾ ನದಿಗಳು ಅರಲ್ ಸಮುದ್ರವನ್ನೂ ಸೇರುತ್ತವೆ.

## ಏಷ್ಯಾದ ವ್ಯವಸಾಯ

ವ್ಯವಸಾಯವು ಏಷ್ಯಾದ ಪ್ರಮುಖ ವೃತ್ತಿ. ಸುಮಾರು ನಾಲ್ಕನೇ ಮೂರು ಭಾಗದಷ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಏಷ್ಯಾದಿಂದ ರಫ್ತಾಗುವ ಸರಕುಗಳಲ್ಲಿ ಬಹುಭಾಗ ಕೃಷಿ ಉತ್ಪನ್ನಗಳಾಗಿರುತ್ತವೆ

ಏಷ್ಯಾದ ವ್ಯವಸಾಯ ಮತ್ತು ನದಿ ವ್ಯವಸ್ಥೆಗಳ ನಡುವೆ ನಿಕಟವಾದ ಸಂಬಂಧವಿದೆ. ಸೈಬೀರಿಯಾವನ್ನು ಹೊರತುಪಡಿಸಿ, ಉಳಿದ ಹೆಚ್ಚಿನ ಭಾಗಗಳಲ್ಲಿ ವ್ಯವಸಾಯವು ನದಿಬಯಲುಗಳಲ್ಲಿ ರೂಢಿಯಲ್ಲಿದೆ. ಇದಕ್ಕೆ ಇಲ್ಲಿನ ಫಲವತ್ತಾದ ಮಣ್ಣು ಮತ್ತು ನೀರಾವರಿ ಮೂಲಕ ನೀರು ಪೂರೈಕೆ ಮುಖ್ಯ ಕಾರಣಗಳು.

©KTBS NOT TO BE REPUBLISHED

ಏಷ್ಯಾದ ಅನೇಕ ದೇಶಗಳಲ್ಲಿ ರೈತರು ಸಾಗುವಳಿ ಕಾರ್ಯಗಳಿಗೆ ಕೈಯಿಂದ ಮಾಡಿದ ಉಪಕರಣ ಮತ್ತು ಪ್ರಾಣಿಗಳನ್ನು ಉಪಯೋಗಿಸುವರು. ಅವರು ಸಾಂದ್ರಬೇಸಾಯ ಪದ್ಧತಿಯನ್ನು ಅನುಸರಿಸುವರು. ರೂಢಿಯಲ್ಲಿರುವ ಇತರೆ ಬೇಸಾಯ ಕ್ರಮಗಳೆಂದರೆ; ನೀರಾವರಿ ಬೇಸಾಯ, ಒಣ ಬೇಸಾಯ, ನೆಡುತೋಟ ಬೇಸಾಯ, ಮಿಶ್ರ ಬೇಸಾಯ, ಸ್ಥಳಾಂತರ ಬೇಸಾಯ ಇತ್ಯಾದಿ. ಇತ್ತೀಚೆಗೆ ಆಧುನಿಕ ವ್ಯವಸಾಯ ಉಪಕರಣ, ರಾಸಾಯನಿಕ ಗೊಬ್ಬರ, ಅಧಿಕ ಇಳುವರಿ ನೀಡುವ ತಳಿಗಳ ಬಳಕೆ ಇತ್ಯಾದಿಗಳು ಏಷ್ಯಾದ ಕೆಲವು ದೇಶಗಳಲ್ಲಿ ಹೆಚ್ಚು ರೂಢಿಗೆ ಬಂದಿವೆ. ಆದಾಗ್ಯೂ ಇನ್ನೂ ಅನೇಕ ದೇಶಗಳಲ್ಲಿ ಹಲವು ಕಾರಣಗಳಿಂದ ಇಳುವರಿ ಕಡಿಮೆ ಇದೆ.

## ಬೆಳೆಗಳು

ಏಷ್ಯಾದಲ್ಲಿ ಅನೇಕ ವಿಧದ ಬೆಳೆಗಳ ಸಾಗುವಳಿ ಕಂಡುಬರುತ್ತದೆ. ಭತ್ತ ಮತ್ತು ಗೋಧಿಗಳು ಪ್ರಮುಖ ಆಹಾರ ಬೆಳೆಗಳು. ಚೀನ ಮತ್ತು ಭಾರತ ಭತ್ತ ಉತ್ಪಾದಿಸುವ ಪ್ರಮುಖ ದೇಶಗಳಾಗಿದ್ದು, ಪ್ರಪಂಚದ ಭತ್ತದ ಒಟ್ಟು ಉತ್ಪಾದನೆಯಲ್ಲಿ ಶೇ.90 ಭಾಗವನ್ನು ಪೂರೈಸುತ್ತವೆ. ಜಪಾನ್, ಬಾಂಗ್ಲಾದೇಶ, ಥೈಲೆಂಡ್ ಹಾಗೂ ಆಗ್ನೇಯ ಏಷ್ಯಾ ದೇಶಗಳು ಭತ್ತ ಉತ್ಪಾದಿಸುವ ಇತರ ಪ್ರಮುಖ ದೇಶಗಳು. ಚೀನ, ಭಾರತ, ಪಾಕಿಸ್ತಾನ ಮತ್ತು ಏಷ್ಯಾದ ರಷ್ಯಾ ಭಾಗಗಳು ಗೋಧಿ ಉತ್ಪಾದಿಸುವ ಪ್ರಮುಖ ದೇಶಗಳು.



*ಭತ್ತದ ಬೆಳೆ*

ಪ್ರಪಂಚದ ಸ್ವಾಭಾವಿಕ ರಬ್ಬರ್ ಮತ್ತು ಚಹ ಉತ್ಪಾದನೆಯಲ್ಲಿ ಏಷ್ಯಾ ಮುಂದಿದೆ. ಇಂಡೋನೇಷ್ಯ, ಮಲೇಷ್ಯ, ಮತ್ತು ಥೈಲೆಂಡ್‌ಗಳು ಪ್ರಮುಖ ಸ್ವಾಭಾವಿಕ ರಬ್ಬರ್ ಉತ್ಪಾದಕರು. ಪ್ರಮುಖ ಚಹ ಉತ್ಪಾದಕರೆಂದರೆ: ಚೀನ, ಇಂಡೊನೇಷ್ಯ, ಮಲೇಷ್ಯ, ಭಾರತ ಮತ್ತು ಥೈಲೆಂಡ್ ದೇಶಗಳು.



*ಚಹ ತೋಟ*



*ಕಾಫಿ ತೋಟ*

ಏಷ್ಯಾದಲ್ಲಿ ಬೆಳೆಯುವ ಇತರ ಪ್ರಮುಖ ಬೆಳೆಗಳೆಂದರೆ: ಹತ್ತಿ, ಸೆಣಬು (ನಾರುಬೆಳೆ) ಮತ್ತು ಕಬ್ಬು. ಚೀನ, ಭಾರತ, ಪಾಕಿಸ್ತಾನ, ಟರ್ಕಿ, ಟರ್ಕ್ಮೇನಿಸ್ತಾನ ಮತ್ತು ಉಜ್ಬೇಕಿಸ್ತಾನಗಳು ಪ್ರಮುಖ ಹತ್ತಿ ಉತ್ಪಾದಿಸುವ ದೇಶಗಳು. ಬಾಂಗ್ಲಾದೇಶ, ಚೀನ ಮತ್ತು ಭಾರತಗಳಿಂದ ಸೆಣಬು ಉತ್ಪಾದನೆಯಾಗುತ್ತದೆ. ಕಬ್ಬು ಬೆಳೆಯುವ ಪ್ರದೇಶಗಳು ಹೆಚ್ಚಾಗಿ ಭಾರತ, ಇಂಡೊನೇಷ್ಯ, ಫಿಲಿಪ್ಪೈನ್ಸ್ ಮತ್ತು ಬಾಂಗ್ಲಾದೇಶಗಳಲ್ಲಿ ಕಂಡುಬರುತ್ತವೆ. ಭಾರತವು ಪ್ರಪಂಚದ ಎರಡನೆಯ ಪ್ರಮುಖ ಕಬ್ಬು ಉತ್ಪಾದಿಸುವ ದೇಶ.

ಕಾಫಿ, ಕೋಕೊ, ವಿವಿಧ ತೃಣಧಾನ್ಯ (ನವಣೆ, ಸಜ್ಜೆ, ಸಾವೆ), ದ್ವಿದಳಧಾನ್ಯ, ಎಣ್ಣೆಕಾಳು ಸಾಂಬಾರು ಪದಾರ್ಥಗಳು ಮೊದಲಾದವುಗಳ ಉತ್ಪಾದನೆಗೂ ಏಷ್ಯಾ ಪ್ರಸಿದ್ಧವಾದುದು.

© KTBS NOT TO BE REPUBLISHED

## 5. ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ

**ವಾಯುಗುಣ:** ಈಗಾಗಲೇ ತಿಳಿಸಿದಂತೆ, ಏಷ್ಯಾ ವಿಶಾಲವಾದ ಭೂಖಂಡ. ಅದು ದಕ್ಷಿಣದಲ್ಲಿ ಭೂಮಧ್ಯ ರೇಖೆಯಿಂದ ಧ್ರುವೀಯ ಪ್ರದೇಶದವರೆಗೂ ವಿಸ್ತರಿಸಿದೆ. ಪರಿಣಾಮವಾಗಿ ಈ ಖಂಡದ ವಿವಿಧ ಪ್ರದೇಶಗಳಲ್ಲಿ ವಿವಿಧ ವಾಯುಗುಣದ ಪರಿಸ್ಥಿತಿಯಿದೆ. ಏಷ್ಯಾದಲ್ಲಿ ಕೆಲವು ಭಾಗಗಳು ಪ್ರಪಂಚದಲ್ಲೇ ಅತ್ಯಂತ ಶೀತ(ಧ್ರುವೀಯ)ವಾದ ಪರಿಸ್ಥಿತಿಯನ್ನು ಹೊಂದಿದ್ದರೆ ಮತ್ತೆ ಕೆಲವು ಭಾಗಗಳು ಅತಿ ಉಷ್ಣತೆಯುಳ್ಳವು (ಕೇಂದ್ರ ಮತ್ತು ನೈರುತ್ಯ). ಹಾಗೆಯೇ ಅತಿಶುಷ್ಕ ಮತ್ತು ಅಧಿಕ ಮಳೆ ಬೀಳುವ ಸ್ಥಳಗಳೂ ಸಹ ಇಲ್ಲಿ ಕಂಡುಬರುತ್ತವೆ. ಏಷ್ಯಾದ ವಿವಿಧ ವಾಯುಗುಣದ ಸ್ಥಿತಿಗೆ ಹಲವು ಅಂಶಗಳು ಕಾರಣವಾಗಿವೆ. ಉದಾ: ವಿಸ್ತೀರ್ಣ, ಅಕ್ಷಾಂಶಗಳ ವಿಸ್ತರಣೆ, ಪ್ರಾಕೃತಿಕ ಲಕ್ಷಣ, ಮಾನ್ಸೂನ್ ಮಾರುತ ಇತ್ಯಾದಿ.




*ವಾರ್ಷಿಕ ಉಷ್ಣಾಂಶದ ಹಂಚಿಕೆ*

@KTBS NOT TO BE REPUBLISHED

**ಉಷ್ಣಾಂಶ:** ಇದು ಸಹಜವಾಗಿ ಸ್ಥಳದಿಂದ ಸ್ಥಳಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುವುದು. ಜನವರಿ ತಿಂಗಳಲ್ಲಿ ಏಷ್ಯಾದ ದಕ್ಷಿಣ ದೇಶಗಳಿಗಿಂತ ಉತ್ತರದ ದೇಶಗಳಲ್ಲಿ ಶೀತವು ಹೆಚ್ಚಾಗಿರುತ್ತದೆ. ಸೈಬೀರಿಯಾದಲ್ಲಿರುವ ವರ್ಕೋಯಾನ್‌ಸ್ಕ್ ಅತ್ಯಂತ ಶೀತವಾದ ಸ್ಥಳ. ಜುಲೈ ತಿಂಗಳಲ್ಲಿ ಸೈಬೀರಿಯಾದ ಉತ್ತರ ಭಾಗ ಹಾಗೂ ಮಧ್ಯ ಏಷ್ಯಾದ ಎತ್ತರವುಳ್ಳ ಪರ್ವತ ಮತ್ತು ಪ್ರಸ್ಥಭೂಮಿ ಭಾಗಗಳನ್ನು ಹೊರತುಪಡಿಸಿ, ಏಷ್ಯಾದ ಬಹಳಷ್ಟು ಭಾಗಗಳಲ್ಲಿ ಶಾಖವು ಹೆಚ್ಚು. ಕೆಲವು ಭಾಗಗಳಲ್ಲಿ ಉಷ್ಣಾಂಶವು $40^0$ ಸೆಲ್ಸಿಯಸ್‌ಗಿಂತ ಹೆಚ್ಚಾಗಿರುತ್ತದೆ.

**ಮಳೆಯ ಹಂಚಿಕೆ:** ಏಷ್ಯಾ ಖಂಡದಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳಿಂದ ಬೇಸಿಗೆಯಲ್ಲಿ ಹೆಚ್ಚು ಮಳೆಯಾಗುತ್ತದೆ. ಆದರೆ ಮಾನ್ಸೂನ್ ಮಾರುತಗಳು ಮಧ್ಯ ಏಷ್ಯಾವನ್ನು ತಲುಪುವುದಿಲ್ಲ. ಆ ಭಾಗವು ವರ್ಷವೆಲ್ಲ ಶುಷ್ಕ ಸ್ಥಿತಿಯನ್ನು ಹೊಂದಿರುತ್ತದೆ. ಪಶ್ಚಿಮ ಏಷ್ಯಾದ ದೇಶಗಳು, ಚಳಿಗಾಲದ ಪಶ್ಚಿಮ ಮಾರುತಗಳಿಂದಲೂ ಹಾಗೂ ಚೀನದ ಪೂರ್ವಭಾಗ ಮತ್ತು ಫಿಲಿಪ್ಪೈನ್ಸ್, ಮಲೇಷ್ಯ ಮೊದಲಾದವು ಉಷ್ಣವಲಯದ ಆವರ್ತ ಮಾರುತಗಳಿಂದ ಮಳೆ ಪಡೆಯುತ್ತವೆ.




*ವಾರ್ಷಿಕ ಮಳೆಹಂಚಿಕೆ*

**ಚಳಿಗಾಲ:** ಏಷ್ಯಾದ ಹೆಚ್ಚಿನ ಭಾಗಗಳಲ್ಲಿ ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಚಳಿಗಾಲವಾಗಿರುತ್ತದೆ. ಏಷ್ಯಾದ ಬಹುಭಾಗವು ಉತ್ತರಾರ್ಧ ಗೋಳದಲ್ಲಿದೆ. ಈ ಅವಧಿಯಲ್ಲಿ ಉತ್ತರಾರ್ಧಗೋಳಕ್ಕೆ ಓರೆಯಾದ ಸೂರ್ಯನ ಕಿರಣಗಳು ಪ್ರಸರಿಸುವವು. ಹೀಗಾಗಿ ಏಷ್ಯಾದ ಹೆಚ್ಚಿನ ಭಾಗಗಳಲ್ಲಿ ಬಹಳ ಕಡಿಮೆ ಉಷ್ಣಾಂಶವಿದ್ದು, ಅತಿ ಶೀತವಾದ ವಾಯುಗುಣವಿರುತ್ತದೆ.

ಮಧ್ಯ ಏಷ್ಯಾದಲ್ಲಿ ವಾಯುವಿನ ಒತ್ತಡ ಅಧಿಕ ಮತ್ತು ಹಿಂದೂ ಸಾಗರದಲ್ಲಿ ಒತ್ತಡ ಕಡಿಮೆ ಇರುತ್ತದೆ. ಹೀಗಾಗಿ ಮಾರುತಗಳು ಭೂಭಾಗದಿಂದ ಸಮುದ್ರದ ಕಡೆಗೆ ಬೀಸುತ್ತವೆ. ಅವು ಒಣಗಾಳಿಗಳು, ಮಳೆ ತರಲಾರವು. ಚಳಿಗಾಲದಲ್ಲಿ ಮಳೆ ವಿರಳ.

**ಬೇಸಿಗೆ ಕಾಲ:** ಚಳಿಗಾಲಕ್ಕೆ ವಿರುದ್ಧ ಪರಿಸ್ಥಿತಿ ಇರುತ್ತದೆ. ಇದು ಏಪ್ರಿಲ್‌ನಲ್ಲಿ ಆರಂಭ ಮತ್ತು ಸೆಪ್ಟಂಬರ್‌ನಲ್ಲಿ ಅಂತ್ಯಗೊಳ್ಳುತ್ತದೆ. ಉತ್ತರಾರ್ಧಗೋಳದಲ್ಲಿ ಸೂರ್ಯ ನೇರವಾಗಿ ಪ್ರಕಾಶಿಸುವುದು. ಆದ್ದರಿಂದ ಏಷ್ಯಾದ ಬಹುಭಾಗಗಳಲ್ಲಿ ಉಷ್ಣಾಂಶ ಹೆಚ್ಚು ಮತ್ತು ಮಧ್ಯ ಏಷ್ಯಾದಲ್ಲಿ ಒತ್ತಡ ಕಡಿಮೆ. ಮಾರುತಗಳು ಸಮುದ್ರಗಳಿಂದ ಭೂಭಾಗಗಳಿಗೆ ಬೀಸುತ್ತವೆ. ಅವು ಹೆಚ್ಚು ಕಡಿಮೆ ಖಂಡದ ಎಲ್ಲೆಡೆಗೂ ಮಳೆಯನ್ನು ಸುರಿಸುತ್ತವೆ.

@KTBS NOT TO BE REPUBLISHED

- ಜನವರಿಯಲ್ಲಿ ಸೈಬೀರಿಯಾದ ವರ್ಕೋಯಾನಸ್ಕ್ – 51° ಸೆ ಮತ್ತು ಓಮಿಯಾಕ್ನಿ – 71° ಸೆ. ಕನಿಷ್ಠ ಉಷ್ಣಾಂಶವನ್ನು ದಾಖಲಿಸುತ್ತವೆ.
- ಭಾರತದ ಮೇಘಾಲಯ ರಾಜ್ಯದ ಮಾಸಿನ್‌ರಾಮ್ ಪ್ರಪಂಚದಲ್ಲೇ ಅತಿ ಹೆಚ್ಚು ಮಳೆ ಪಡೆಯುತ್ತದೆ. (1187 ಸೆಂ.ಮೀ)

## ಸ್ವಾಭಾವಿಕ ಸಸ್ಯವರ್ಗ

ಏಷ್ಯಾದ ಸ್ವಾಭಾವಿಕ ಸಸ್ಯವರ್ಗ ಮತ್ತು ವಾಯುಗುಣಗಳ ನಡುವೆ ಪರಸ್ಪರ ಸಂಬಂಧವಿದೆ. ಭೂಸ್ವರೂಪ, ಮಣ್ಣು ಮತ್ತು ಮಾನವನ ಪ್ರವೇಶಗಳೂ ಸಹ ಸಸ್ಯವರ್ಗದ ವಿಧ ಮತ್ತು ಹಂಚಿಕೆಯ ಮೇಲೆ ಪ್ರಭಾವ ಬೀರುವವು. ಏಷ್ಯಾದ ಸಸ್ಯವರ್ಗದಲ್ಲಿ ವೈವಿಧ್ಯ ಇದೆ. ಅವುಗಳನ್ನು ಏಳು ವಿಧಗಳಾಗಿ ವಿಂಗಡಿಸಬಹುದು.



©KTBS NOT TO BE REPUBLISHED

ಸ್ವಾಭಾವಿಕ ಸಸ್ಯವರ್ಗ

**1. ಟಂಡ್ರ ಸಸ್ಯವರ್ಗ:** ಈ ಸಸ್ಯವರ್ಗವು ಆರ್ಕ್ಟಿಕ್ ಕರಾವಳಿಯ ಉದ್ದಕ್ಕೂ ಕಿರಿದಾದ ಭಾಗದಲ್ಲಿ ಕಂಡುಬರುತ್ತದೆ. ಇದು ಬಹುವಾಗಿ ನೀರ್ಗಲ್ಲು ಮತ್ತು ಹಿಮದಿಂದಾವರಿಸಿರುತ್ತದೆ. ಹೀಗಾಗಿ ಸಸ್ಯ ಬೆಳವಣಿಗೆ ಪಾಚಿ ಮತ್ತು ಶಿಲಾವಲ್ಕಗಳಿಗೆ ಸೀಮಿತಗೊಂಡಿದೆ.

**2. ಶಂಕುವಿನಾಕಾರದ ಮರಗಳ (ಕೊನಿಫೆರಸ್) ಅರಣ್ಯಗಳು:** ಟಂಡ್ರ ಪ್ರದೇಶದಲ್ಲಿ ಹಂಚಿಕೆಯಾಗಿವೆ. ಅವುಗಳನ್ನು 'ತೈಗ ಅರಣ್ಯ' ಎಂತಲೂ ಕರೆಯಲಾಗಿದೆ. ಫರ್, ಸ್ಪ್ರೂಸ್, ಲಾರ್ಚ್ ಮತ್ತು ಪೈನ್ ಎಂಬುವವು ಇಲ್ಲಿ ಬೆಳೆಯುವ ಮುಖ್ಯ ಮರಗಳು. ಅವು ಮೃದು ತಿರುಳಿನ ಮರಗಳಾಗಿರುತ್ತವೆ.



*ತೈಗ ಅರಣ್ಯ*

**3. ಸಮಶೀತೋಷ್ಣವಲಯದ ಹುಲ್ಲುಗಾವಲು (ಸ್ಟೆಪ್ಪಿ):** ಮಧ್ಯ ಏಷ್ಯಾ ಮತ್ತು ಮರುಭೂಮಿ ಮತ್ತು ಅರೆಮರುಭೂಮಿಗಳ ಅಂಚುಗಳಲ್ಲಿ ಕಂಡುಬರುತ್ತದೆ. ಕಡಿಮೆ ಮಳೆಯಿಂದಾಗಿ ಇಲ್ಲಿ ಕಡಿಮೆ ಎತ್ತರವುಳ್ಳ ಹುಲ್ಲು ಬೆಳೆಯುತ್ತದೆ.

**4. ಮರುಭೂಮಿ ಸಸ್ಯವರ್ಗ:** ಇದು ಏಷ್ಯಾದ ಉಷ್ಣವಲಯ ಮತ್ತು ಸಮಶೀತೋಷ್ಣವಲಯಗಳ ಮರುಭೂಮಿಗಳಲ್ಲಿ ಕಂಡುಬರುತ್ತದೆ. ಉದಾ: ಅರೇಬಿಯ, ಇರಾನ್, ಥಾರ್ ಮರುಭೂಮಿ ಇತ್ಯಾದಿ. ಇಲ್ಲಿ ಮುಳ್ಳಿನ ಗಿಡಗಂಟಿ, ಕುರುಚಲು ಸಸ್ಯ ಮತ್ತು ಹುಲ್ಲುಗಳು ಮಾತ್ರ ಬೆಳೆಯುವವು. ಓಯಾಸಿಸ್‌ಗಳ ಬಳಿ ಖರ್ಜೂರ ಮತ್ತು ತಾಳೆ ಜಾತಿ ಮರಗಳು ಕಂಡುಬರುವವು.



*ಮಾನ್ಸೂನ್ ಅರಣ್ಯ*

**5. ಮಾನ್ಸೂನ್ ಅರಣ್ಯಗಳು:** ದಕ್ಷಿಣ, ನೈಋತ್ಯ ಮತ್ತು ಪೂರ್ವ ಏಷ್ಯಾ ಭಾಗಗಳಲ್ಲಿ ಕಂಡುಬರುತ್ತವೆ. ಇಲ್ಲಿ ಹೆಚ್ಚು ಶಾಖ ಮತ್ತು ಮಳೆ ಬೀಳುವುದರಿಂದ ಕಾಡುಗಳಿರುತ್ತವೆ. ತೇಗ, ಸಲೆ, ಆಲ, ಬಿದಿರು, ಶ್ರೀಗಂಧ ಹಾಗೂ ಇನ್ನೂ ಹಲವು ಗಟ್ಟಿ ಮರಗಳು ಇಲ್ಲಿ ಬೆಳೆಯುತ್ತವೆ. ಅವು ಶರತ್ಕಾಲದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ.

@KTBS NOT TO BE REPUBLISHED

**6. ಸಮಭಾಜಕ ವೃತ್ತ ಪ್ರದೇಶದ ಅರಣ್ಯಗಳು:** ಹೆಚ್ಚಾಗಿ ಪೂರ್ವ ಇಂಡೀಸ್ ಮತ್ತು ಅಧಿಕ ಮಳೆ ಬೀಳುವ ಮಾನ್ಸೂನ್ ಪ್ರದೇಶಗಳಲ್ಲಿ ಕಂಡುಬರುತ್ತವೆ. ಅವು ಸದಾ ಹಸಿರು ಮತ್ತು ಎತ್ತರಕ್ಕೆ ಬೆಳೆಯುವ ಮರಗಳಿಂದ ಕೂಡಿರುತ್ತವೆ. ಮಹೊಗನಿ, ಎಬೋನಿ, ರಬ್ಬರ್, ಬಿದಿರು, ಬೀಟೆ ಇಲ್ಲಿ ಬೆಳೆಯುವ ಪ್ರಮುಖ ಮರಗಳು.



*ಸಮಭಾಜಕ ವೃತ್ತ ಪ್ರದೇಶದ ಅರಣ್ಯ*

**7. ಮೆಡಿಟರೇನಿಯನ್ ಸಸ್ಯವರ್ಗವು** ಏಷ್ಯಾದ ನೈಋತ್ಯ ಭಾಗಗಳಲ್ಲಿ ಕಂಡುಬರುವುದು. ಇಲ್ಲಿ ಆಲಿವ್, ಫಿಗ್, ಓಕ್ ಮರಗಳು ಮತ್ತು ಕುರುಚಲು ಸಸ್ಯ ಬೆಳೆಯುತ್ತವೆ. ಮರಗಳು ಕಡಿಮೆ ಎತ್ತರಕ್ಕೆ ಬೆಳೆಯುತ್ತವೆ.

## 6. ಪ್ರಮುಖ ಖನಿಜಗಳು

**ಕಬ್ಬಿಣದ ಅದಿರು:** ಇದು ಕಬ್ಬಿಣ ಮತ್ತು ಉಕ್ಕು ತಯಾರಿಕೆಗೆ ಅಗತ್ಯವಾದ ಕಚ್ಚಾವಸ್ತು. ಏಷ್ಯಾ ಅಪಾರ ಕಬ್ಬಿಣದ ಅದಿರು ಹೊಂದಿದೆ ಮತ್ತು ಪ್ರಪಂಚದ ಶೇ.30 ಭಾಗದಷ್ಟು ಕಬ್ಬಿಣದ ಅದಿರು ನಿಕ್ಷೇಪ ಈ ಖಂಡದಲ್ಲಿದೆ. ಚೀನ ಅಧಿಕ ಕಬ್ಬಿಣದ ಅದಿರು ಉತ್ಪಾದಿಸುವ ದೇಶ. ಭಾರತ, ಟರ್ಕಿ, ಫಿಲಿಪ್ಪೈನ್ಸ್, ಮಲೇಷ್ಯ, ಥೈಲೆಂಡ್, ಇಂಡೋನೇಷ್ಯ, ಮಯನ್ಮಾರ್, ವಿಯೆಟ್ನಾಂ, ಕಜಕಿಸ್ತಾನ ಮತ್ತು ಪಾಕಿಸ್ತಾನ ಇತರೆ ಪ್ರಮುಖ ಉತ್ಪಾದಕರು. ಕೊರಿಯ, ತೈವಾನ್, ಶ್ರೀಲಂಕ, ಜಪಾನ್ ಮತ್ತು ನೈಋತ್ಯ ಏಷ್ಯಾದ ರಾಷ್ಟ್ರಗಳಲ್ಲಿ ಅಲ್ಪ ಪ್ರಮಾಣದ ಕಬ್ಬಿಣದ ಅದಿರು ದೊರೆಯುತ್ತದೆ.

@KTBS NOT TO BE REPUBLISHED




ಪ್ರಮುಖ ಖನಿಜಗಳು

**ಮ್ಯಾಂಗನೀಸ್:** ಪ್ರಮುಖ ಮಿಶ್ರಲೋಹ ಖನಿಜ. ಉತ್ತಮ ಉಕ್ಕು ತಯಾರಿಕೆಗೆ ಇದು ಅತ್ಯಾವಶ್ಯಕ. ಏಷ್ಯಾ ಖಂಡವು ಅಧಿಕ ಪ್ರಮಾಣದ ಮ್ಯಾಂಗನೀಸ್ ನಿಕ್ಷೇಪವನ್ನು ಹೊಂದಿದೆ. ಅದು ಟ್ರಾನ್ಸ್ ಕಕಾಸಸ್, ಮಧ್ಯ ಏಷ್ಯಾ, ಸೈಬೀರಿಯ, ಚೀನ ಮತ್ತು ಭಾರತಗಳಲ್ಲಿ ಹೆಚ್ಚು ಹಂಚಿಕೆಯಾಗಿದೆ. ಉತ್ಪಾದನೆಯಲ್ಲಿ ಚೀನ ಮುಂದಿದೆ.

**ಬಾಕ್ಸೈಟ್:** ಏಷ್ಯಾ ಅಪಾರವಾದ ಬಾಕ್ಸೈಟ್ ನಿಕ್ಷೇಪವುಳ್ಳ ಖಂಡ. ಅದು ಹೆಚ್ಚಾಗಿ ಕಜಕ್‌ಸ್ತಾನ ಮತ್ತು ದಕ್ಷಿಣ ಕೇಂದ್ರ ಸೈಬೀರಿಯಾಗಳಲ್ಲಿ ದೊರೆಯುತ್ತದೆ. ಅಲ್ಲದೆ ಭಾರತ, ಇಂಡೊನೇಷ್ಯ, ಟರ್ಕಿ, ಮಲೇಷ್ಯ ಹಾಗೂ ಚೀನ ದೇಶಗಳಲ್ಲಿಯೂ ಸಾಕಷ್ಟು ಬಾಕ್ಸೈಟ್ ದೊರೆಯುತ್ತದೆ.

**ಕಲ್ಲಿದ್ದಲು:** ಇದು ಪಳೆಯುಳಿಕೆ ಇಂಧನ ಖನಿಜ. ಒಂದು ಪ್ರಮುಖ ಶಕ್ತಿಮೂಲ. ಏಷ್ಯಾದಲ್ಲಿ ಅಪಾರವಾದ ಕಲ್ಲಿದ್ದಲು ದೊರೆಯುತ್ತದೆ. ಆದರೆ ಅದರ ಹಂಚಿಕೆ ಒಂದೇ ರೀತಿಯಾಗಿಲ್ಲ. ಅತ್ಯಧಿಕ ಪ್ರಮಾಣದ ಕಲ್ಲಿದ್ದಲು ನಿಕ್ಷೇಪವು ಚೀನ, ಭಾರತ, ಇಂಡೊನೇಷ್ಯ, ಸೈಬೀರಿಯ ಮತ್ತು ಮಧ್ಯ ಏಷ್ಯಾ ದೇಶಗಳಲ್ಲಿ ಕಂಡುಬರುತ್ತದೆ.

ಪ್ರಪಂಚದಲ್ಲಿ ಅತಿ ಹೆಚ್ಚು ಕಲ್ಲಿದ್ದಲು ನಿಕ್ಷೇಪ ಮತ್ತು ಉತ್ಪಾದನೆ ಎರಡರಲ್ಲೂ ಚೀನ ದೇಶ ಮೊದಲನೆಯದು. ಚೀನದ ಎಲ್ಲಾ ಪ್ರಾಂತ್ಯಗಳಲ್ಲೂ ಕಲ್ಲಿದ್ದಲು ಲಭ್ಯವಿದೆ. ಭಾರತವು ಏಷ್ಯಾದ ಎರಡನೆಯ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ದೇಶ. ಇತ್ತೀಚೆಗೆ ಮಧ್ಯ ಸೈಬೀರಿಯಾದಲ್ಲಿರುವ ಕುಜೆನೆಟ್ಸ್ ಬಯಲು ಹೆಚ್ಚು ಕಲ್ಲಿದ್ದಲು ಉತ್ಪಾದಿಸುವ ಭಾಗವಾಗಿದೆ. ಅಲ್ಪ ಪ್ರಮಾಣದ ಕಲ್ಲಿದ್ದಲು ನಿಕ್ಷೇಪವು ಉಜ್ಬೇಕಿಸ್ತಾನ, ಕಿರ್ಘಿಸ್ತಾನ, ತಜಕಿಸ್ತಾನ, ಪಾಕಿಸ್ತಾನ ಮತ್ತು ಜಪಾನ್ ದೇಶಗಳಲ್ಲಿ ದೊರೆಯುತ್ತದೆ.

©KTBS
NOT TO BE REPUBLISHED

**ಪೆಟ್ರೋಲಿಯಂ:** ಇದೊಂದು ತೈಲ ಇಂಧನ. ಸ್ವಯಂಚಾಲಿತ ವಾಹನಗಳು, ರೈಲು, ಹಡಗು ಮತ್ತು ವಿಮಾನಗಳಿಗೆ ಬೇಕಾಗುವ ಶಕ್ತಿಸಾಧನವಾಗಿದೆ. ನೈಋತ್ಯ ಏಷ್ಯಾದಲ್ಲಿ ಅಪಾರವಾದ ಪೆಟ್ರೋಲಿಯಂ ನಿಕ್ಷೇಪವಿದೆ. ಅದು ಹೆಚ್ಚಾಗಿ ಸೌದಿ ಅರೇಬಿಯ, ಇರಾನ್, ಇರಾಕ್, ಕುವೈತ್, ಬಹ್ರೇನ್, ಕಟಾರ್ ಮತ್ತು ಸಂಯುಕ್ತ ಅರಬ್ ಎಮಿರೇಟ್ಸ್ (UAE) ಗಳಲ್ಲಿ ಕಂಡುಬರುವುದು. ಇವು ಪ್ರಪಂಚದ ಒಟ್ಟು ಪೆಟ್ರೋಲ್ ನಿಕ್ಷೇಪದಲ್ಲಿ ಅರ್ಧಭಾಗವನ್ನು ಹೊಂದಿವೆ ಮತ್ತು ಪ್ರಪಂಚದ ಶೇ.25 ಭಾಗದಷ್ಟು ಪೆಟ್ರೋಲನ್ನು ಉತ್ಪಾದಿಸುತ್ತವೆ.

ಪೂರ್ವ ಮತ್ತು ಆಗ್ನೇಯ ಏಷ್ಯಾದ ಕೆಲವು ದೇಶಗಳಲ್ಲಿಯೂ ಪೆಟ್ರೋಲಿಯಂ ನಿಕ್ಷೇಪ ದೊರೆಯತ್ತದೆ. ಉದಾ: ಇಂಡೊನೇಷ್ಯ, ಮಲೇಷ್ಯ, ಚೀನ, ತೈವಾನ್, ಮಯನ್ಮಾರ್, ಸಾರ್ವಾಕ್, ಭಾರತ, ವಿಯೆಟ್ನಾಂ ಇತ್ಯಾದಿ.

ಇತ್ತೀಚೆಗೆ ಸೈಬೀರಿಯ ಭಾಗದಲ್ಲಿ ಪೆಟ್ರೋಲಿಯಂ ಉತ್ಪಾದನೆ ಹೆಚ್ಚಾಗಿದೆ.

- ಪೆಟ್ರೋಲಿಯಂ ಶಬ್ದ (Petroleum)ವು 'Petra' ಎಂದರೆ 'ಕಲ್ಲು' ಮತ್ತು 'Oleum' ಎಂದರೆ 'ತೈಲ' ಎಂಬ ಎರಡು ಲ್ಯಾಟಿನ್ ಭಾಷಾ ಪದಗಳಿಂದ ಸಂಯೋಜಿತವಾದದ್ದು.
- ಸೌದಿ ಅರೇಬಿಯ ಪ್ರಪಂಚದಲ್ಲೇ ಅತಿ ಹೆಚ್ಚು ಪೆಟ್ರೋಲಿಯಂ ಉತ್ಪಾದಿಸುವ ದೇಶ.

ಮಧ್ಯ ಏಷ್ಯಾದ ಟರ್ಕ್ಮೇನಿಸ್ತಾನ, ಉಜ್ಬೇಕಿಸ್ತಾನ, ಕಜಕಿಸ್ತಾನ ಮೊದಲಾದ ಭಾಗಗಳಲ್ಲಿಯೂ ಸಾಕಷ್ಟು ಪೆಟ್ರೋಲ್ ಲಭ್ಯವಿದೆ.

## ಪ್ರಮುಖ ಕೈಗಾರಿಕಾ ಪ್ರದೇಶಗಳು

ಏಷ್ಯಾ ಖಂಡವು ವಿಶಾಲ ಪ್ರದೇಶ. ಸಮೃದ್ಧ ಖನಿಜ ಮತ್ತು ವ್ಯವಸಾಯೋತ್ಪನ್ನಗಳನ್ನು ಹೊಂದಿದ್ದರೂ ಯೂರೋಪ್ ಖಂಡದಷ್ಟು ಕೈಗಾರಿಕೀಕರಣ ಸಾಧಿಸಿಲ್ಲ. ಇದಕ್ಕೆ ಮುಖ್ಯ ಕಾರಣಗಳೆಂದರೆ ತಂತ್ರಜ್ಞಾನ, ಬಂಡವಾಳಗಳ ಕೊರತೆ, ಸಾಂಪ್ರದಾಯಿಕ ಸ್ವಭಾವ ಮತ್ತು ಹೆಚ್ಚು ಜನರು ವ್ಯವಸಾಯದಲ್ಲಿ ತೊಡಗಿರುವುದು.

ಪ್ರಮುಖ ಕೈಗಾರಿಕೆ ಮತ್ತು ಕೈಗಾರಿಕಾ ಚಟುವಟಿಕೆಗಳನ್ನುಳ್ಳ ಪ್ರದೇಶಕ್ಕೆ 'ಕೈಗಾರಿಕಾ ಪ್ರದೇಶ' ಎನ್ನುವರು. ಇವು ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲಕರವಾದ ಕೆಲವೇ ಭಾಗಗಳಲ್ಲಿ ಕಂಡುಬರುತ್ತವೆ.

ಏಷ್ಯಾದ ಪ್ರಮುಖ ಕೈಗಾರಿಕಾ ಪ್ರದೇಶಗಳು ಈ ಕೆಳಕಂಡಂತಿವೆ.

**ಜಪಾನ್:** ಈ ದೇಶದಲ್ಲಿ ನಾಲ್ಕು ಪ್ರಮುಖ ಕೈಗಾರಿಕಾ ಪ್ರದೇಶಗಳಿವೆ.

1 **ಕಿಹೀನ್ ಪ್ರದೇಶವು** ಟೋಕಿಯೊ, ಕವಾಸಾಕಿ ಮತ್ತು ಯೋಕೊಹಾಮ ನಗರಗಳನ್ನೊಳಗೊಂಡ ದೊಡ್ಡ ಕೈಗಾರಿಕಾ ಪ್ರದೇಶ. ಇಲ್ಲಿ ಜವಳಿ, ಎಂಜಿನಿಯರಿಂಗ್, ಹಡಗುಕಟ್ಟುವುದು, ಕಾಗದ ಮತ್ತು ಸಿಮೆಂಟ್ ಕೈಗಾರಿಕೆಗಳು ಪ್ರಮುಖ.

2 **ಹಾನ್ಶಿನ್ ಪ್ರದೇಶದಲ್ಲಿ** ಒಸಾಕ, ಕೋಬೆ ಮತ್ತು ಕಿಯೋಟೊ ಮಹಾನಗರಗಳಿವೆ. ಇಲ್ಲಿ ಜವಳಿ (ಬಟ್ಟೆ) ಕೈಗಾರಿಕೆ ಪ್ರಮುಖ.

3 **ಐಸೆ ಕೊಲ್ಲಿ ಪ್ರದೇಶವು** ನಗೋಯ ನಗರದ ಸುತ್ತಮುತ್ತ ವಿಸ್ತರಿಸಿದೆ. ಇಲ್ಲಿ ಜವಳಿ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳು ಪ್ರಮುಖವಾಗಿವೆ.

4 **ಕಿಟ ಕಿಯೂಶು ಪ್ರದೇಶವು** ಯವಾಟ, ಮೋಜಿ ಮತ್ತು ಕೊಕುರ ನಗರಗಳಿಂದ ಕೂಡಿದ್ದು ಉಕ್ಕು, ಹಡಗು, ಯಂತ್ರೋಪಕರಣ ಮತ್ತು ಜವಳಿ ಉದ್ಯಮಕ್ಕೆ ಪ್ರಸಿದ್ಧ.

@KTBS NOT TO BE REPUBLISHED

**ಚೀನ:** ವ್ಯವಸಾಯ ಪ್ರಧಾನ ಮತ್ತು ಕೈಗಾರಿಕೆಯಲ್ಲಿ ಮುಂದುವರೆದ ದೇಶವಾಗಿದೆ. ಮಾವೋಯಿಸ್ಟ್ ಸರ್ಕಾರ ಬಂದ ಮೇಲೆ ಕೈಗಾರಿಕೀಕರಣದ ಕಡೆಗೆ ಆದ್ಯತೆ ನೀಡಲಾಯಿತು. ಈ ದೇಶದ ಪ್ರಮುಖ ಕೈಗಾರಿಕಾ ಪ್ರದೇಶಗಳೆಂದರೆ;

1 **ಮಂಚೂರಿಯ ಪ್ರದೇಶ:** ಇಲ್ಲಿ ಉಕ್ಕು, ಎಂಜಿನಿಯರಿಂಗ್ ಮತ್ತು ರಾಸಾಯನಿಕ ಕೈಗಾರಿಕೆಗಳು ಮುಖ್ಯವಾದವು.

2 **ಬೀಜಿಂಗ್ ಪ್ರದೇಶ:** ಎಂಜಿನಿಯರಿಂಗ್, ಹಡಗು ನಿರ್ಮಾಣ, ಜವಳಿ ಮತ್ತು ರಸಾಯನಿಕ ಕೈಗಾರಿಕೆಗಳು ಮುಖ್ಯವಾದವು.

3 **ಶಾನ್ಸಿ–ಬಾವಟೋವ್:** ಕಬ್ಬಿಣ ಮತ್ತು ಉಕ್ಕು ಹಾಗೂ ಕೃಷಿ ಉಪಕರಣಗಳು.

4 **ಚಾಂಗ್ ಜಿಯಾಂಗ್:** ಪ್ರದೇಶದಲ್ಲಿ ಜವಳಿ ಉದ್ಯಮ, ಹಡಗು ನಿರ್ಮಾಣ ಮತ್ತು ಉಕ್ಕು ತಯಾರಿಕೆ ಕಂಡುಬರುತ್ತವೆ.

5 **ವುಹಾನ್ ಪ್ರದೇಶ:** ಲೋಹ ತಯಾರಿಕೆ ಮತ್ತು ಬೃಹತ್ ಕೈಗಾರಿಕಾ ಸರಕು ತಯಾರಿಕೆ.

**ಭಾರತ – ಪ್ರಮುಖ ಕೈಗಾರಿಕಾ ಪ್ರದೇಶಗಳು :** 1. ಹೂಗ್ಲಿ – ಕೋಲ್ಕೊತ ಪ್ರದೇಶ, 2. ಮುಂಬಯಿ – ಪುಣೆ ಪ್ರದೇಶ, 3. ಅಹ್ಮದಾಬಾದ್ – ವಡೋದರ ಪ್ರದೇಶ, 4. ಮಧುರೈ – ಕೊಯಮತ್ತೂರು – ಬೆಂಗಳೂರು ಪ್ರದೇಶ, 5. ಛೋಟನಾಗಪುರ ಪ್ರದೇಶ 6. ದೆಹಲಿ – ಮೀರತ್, 7. ವಿಶಾಖಪಟ್ಟಣ ಹಾಗೂ 8. ಕೊಲ್ಲಮ್ – ತಿರುವನಂತಪುರ ಪ್ರದೇಶ.

ದಕ್ಷಿಣ ಕೊರಿಯ, ಹಾಂಕಾಂಗ್, ಸಿಂಗಾಪುರ ಮತ್ತು ಮಲೇಷ್ಯಗಳಲ್ಲಿ ಏಷ್ಯಾದ ಇತರ ಕೈಗಾರಿಕಾ ಪ್ರದೇಶಗಳಿವೆ.

## 7. ಏಷ್ಯಾದ ಜನಸಂಖ್ಯೆ

**ಬೆಳವಣಿಗೆ:** ಏಷ್ಯಾಖಂಡದಲ್ಲಿ ಸುಮಾರು 456 ಕೋಟಿ ಜನಸಂಖ್ಯೆಯಿದೆ. ಇದು ಪ್ರಪಂಚದ ಜನಸಂಖ್ಯೆಯ ಶೇ.60 ಭಾಗದಷ್ಟಾಯಿತು. ಇಂದಿನ ಜನಸಂಖ್ಯೆ ಕಳೆದ ಮೂರು ಶತಮಾನಗಳಿಗಿಂತ ಐದು ಪಟ್ಟು ಹೆಚ್ಚಾಗಿದೆ. 1950 ರಲ್ಲಿ ಏಷ್ಯಾದ ಜನಸಂಖ್ಯೆ 140 ಕೋಟಿ ಮಾತ್ರ. ಇತ್ತೀಚಿನವರೆಗೂ ಜನಸಂಖ್ಯಾ ಬೆಳವಣಿಗೆಯ ದರವು ಹೆಚ್ಚಾಗಿತ್ತು. ಆದರೆ ಈಗ ಅದು ಕಡಿಮೆಯಾಗುತ್ತಿದೆ.

**ಹಂಚಿಕೆ ಮತ್ತು ಸಾಂದ್ರತೆ:** ಏಷ್ಯಾಖಂಡದ ಜನಸಂಖ್ಯಾ ಹಂಚಿಕೆ ಒಂದೇ ರೀತಿಯಾಗಿಲ್ಲ. ಏಷ್ಯಾದ ಹೆಚ್ಚಿನ ಭಾಗಗಳಲ್ಲಿ ವಿರಳ ಜನಸಂಖ್ಯೆ ಮತ್ತು ಕಡಿಮೆ ಭಾಗಗಳಲ್ಲಿ ಅಧಿಕ ಜನಸಂಖ್ಯೆಯಿರುವುದನ್ನು ನೀವು ಕಾಣುವಿರಿ.

©KTBS NOT TO BE REPUBLISHED

ಏಷ್ಯಾ ಖಂಡದ ಸರಾಸರಿ ಜನಸಾಂದ್ರತೆ ಪ್ರತಿ ಚದರ ಕಿ.ಮೀ.ಗೆ 150 ಜನರು. ಅತ್ಯಂತ ಶೀತವಾದ ಉತ್ತರ ಮತ್ತು ಪೂರ್ವ ಸೈಬೀರಿಯ, ಮರುಭೂಮಿಗಳನ್ನುಳ್ಳ ಅರೇಬಿಯ, ಇರಾನ್ ಮತ್ತು ಥಾರ್ (ಭಾರತ) ಪ್ರದೇಶಗಳು ಹಾಗೂ ಅತ್ಯಂತ ಎತ್ತರವುಳ್ಳ ಮಧ್ಯ ಏಷ್ಯಾ ಭಾಗಗಳು ಏಷ್ಯಾದ ಅತಿ ವಿರಳ ಜನಸಂಖ್ಯಾ ಭಾಗಗಳು.

ಏಷ್ಯಾದ ಜನಭರಿತ ಭಾಗಗಳಲ್ಲಿ ಭಾರತದ ಮಹಾಮೈದಾನಗಳು, ಬಾಂಗ್ಲಾದೇಶ, ಚೀನ, ಜಪಾನ್, ಕೊರಿಯ ಹಾಗೂ ಜಾವದ್ವೀಪ(ಇಂಡೊನೇಷ್ಯ)ಗಳು ಪ್ರಮುಖವಾದವು. ಇವುಗಳಲ್ಲಿ ಹೆಚ್ಚಿನ ಭಾಗಗಳು ಫಲವತ್ತಾದ, ಸಮತಟ್ಟಾದ ಮೈದಾನ ಅಥವಾ ನದಿ ಬಯಲುಗಳನ್ನುಳ್ಳವು. ಮಯನ್ಮಾರ್, ಥೈಲೆಂಡ್, ಫಿಲಿಪ್ಪೈನ್ಸ್, ಇರಾಕ್, ಶ್ರೀಲಂಕ, ವಿಯೆಟ್ನಾಂ, ಮಲೇಷ್ಯ ಮತ್ತು ಕಾಂಬೋಡಿಯಗಳಲ್ಲಿಯೂ ಜನಸಾಂದ್ರತೆಯು ಹೆಚ್ಚಾಗಿದೆ.



ಏಷ್ಯಾದ ಜನಸಾಂದ್ರತೆ

NOT TO BE REPUBLISHED @KTBS

### ಹೊಸ ಪದಗಳು

ಶರತ್ಕಾಲ, ಬಿಲಿಯನ್, ಶಂಕುವಿನಾಕಾರದ ಮರಗಳ ಅರಣ್ಯ (ಶಂಕುಧಾರಿಕಾಡು), ಪಳೆಯುಳಿಕೆ ಇಂಧನ, ಮಡಿಕೆ ಪರ್ವತಗಳು, ಗ್ರಂಥಿ, ಸುಣ್ಣಕಲ್ಲು, ಪಾಚಿ, ಶಿಲಾವಲ್ಕ, ಓಯಾಸಿಸ್, ಕಚ್ಚಾವಸ್ತು, ತೈಗ, ಟಂಡ್ರ.

### ಇದು ನಿಮಗೆ ತಿಳಿದಿರಲಿ

- ಏಷ್ಯಾ ಖಂಡದ ಅತ್ಯಂತ ಎತ್ತರವಾದ ಬಿಂದು ಮೌಂಟ್ ಎವರೆಸ್ಟ್ (8848 ಮೀ.)
- ಏಷ್ಯಾದ ಅತ್ಯಂತ ಕೆಳಮಟ್ಟದ ಬಿಂದು ಮೃತ ಸಮುದ್ರ.
- ಪ್ರಪಂಚದಲ್ಲೇ ಹೆಚ್ಚಿನ ಸಂಖ್ಯೆಯ ಹಿಮನದಿಗಳು ಕಾರಾಕೊರಂ ಪರ್ವತ ಸರಣಿಗಳಲ್ಲಿವೆ.
- ಟಿಬೆಟ್ ಪ್ರಪಂಚದ ಅತಿ ಎತ್ತರವಾದ ಪ್ರಸ್ಥಭೂಮಿ. ಇದನ್ನು ಪ್ರಪಂಚದ ಮೇಲ್ಛಾವಣಿ ಎಂದು ಕರೆಯಲಾಗಿದೆ.
- ಕ್ಯಾಸ್ಪಿಯನ್ ಸಮುದ್ರವು ಪ್ರಪಂಚದ ಅತ್ಯಂತ ವಿಶಾಲವಾದ ಒಳನಾಡಿನ ಜಲರಾಶಿಯಾಗಿದೆ.
- ದಕ್ಷಿಣ ಸೈಬೀರಿಯಾದಲ್ಲಿರುವ ಬೈಕಲ್ ಸರೋವರವು ಪ್ರಪಂಚದಲ್ಲೇ ಆಳವುಳ್ಳದ್ದು.
- ಕ್ಷೇತ್ರ ಮತ್ತು ಜನಸಂಖ್ಯೆ ಎರಡರಲ್ಲೂ ಏಷ್ಯಾದ ಚಿಕ್ಕದೇಶ ಮಾಲ್ಡೀವ್ಸ್.

@KTBS NOT TO BE REPUBLISHED

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 'ಏಷ್ಯಾ ವೈವಿಧ್ಯಗಳ ಖಂಡ' ಎಂದು ಕರೆಯುವರು. ಏಕೆ?

2 ಏಷ್ಯಾ ಖಂಡದ ಭೌಗೋಳಿಕ ಸನ್ನಿವೇಶ ತಿಳಿಸಿ.

3 ಏಷ್ಯಾದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?

4 ಏಷ್ಯಾದ ಅತಿ ಎತ್ತರವುಳ್ಳ ಪರ್ವತ ಮತ್ತು ಪ್ರಸ್ಥಭೂಮಿಗಳಾವುವು?

5 ಏಷ್ಯಾದಲ್ಲಿ ಯಾವ ಋತುವಿನಲ್ಲಿ ಹೆಚ್ಚು ಮಳೆಯಾಗುವುದು?

6 ಏಷ್ಯಾದ ಪ್ರಮುಖ ಆಹಾರ ಬೆಳೆಗಳು ಯಾವುವು?

7 ಏಷ್ಯಾದ ಪ್ರಮುಖ ಪಳೆಯುಳಿಕೆ ಇಂಧನಗಳನ್ನು ಹೆಸರಿಸಿ?

8 ಏಷ್ಯಾ ಖಂಡದ ಯಾವ ಭಾಗಗಳಲ್ಲಿ ವಿರಳ ಜನಸಂಖ್ಯೆ ಇದೆ? ಏಕೆ?

9 ಕೈಗಾರಿಕಾ ಪ್ರದೇಶಗಳೆಂದರೇನು?

## ಚಟುವಟಿಕೆಗಳು

1 ನಿಮ್ಮ ಅಟ್ಲಾಸ್ ಪುಸ್ತಕದ ಸಹಾಯದಿಂದ ಏಷ್ಯಾ ಭೂಪಟವನ್ನು ಅಧ್ಯಯನ ಮಾಡಿ, ಪರ್ವತ, ಪ್ರಸ್ಥಭೂಮಿ, ಮೈದಾನಗಳು ಮತ್ತು ನದಿಗಳನ್ನು ಗುರುತಿಸಿ ಮತ್ತು ಪಟ್ಟಿ ಮಾಡುವುದು. ಅವುಗಳನ್ನು ಭೂಪಟದಲ್ಲಿ ಗುರುತಿಸಿ.

2 ಏಷ್ಯಾ ಖಂಡದ ಪ್ರಮುಖ ನದಿಗಳು ಮತ್ತು ಅವುಗಳ ಉಪನದಿಗಳ ವಿವರಗಳಾದ– ಉಗಮಸ್ಥಾನ, ಉದ್ದ, ಉಪನದಿಗಳು, ಮುಖಜಭೂಮಿ, ಅಣೆಕಟ್ಟುಗಳ ಮಾಹಿತಿ ಮತ್ತು ಚಿತ್ರಗಳನ್ನು ಸಂಗ್ರಹಿಸುವುದು.

3 ನೀವು ವಾಸಮಾಡುತ್ತಿರುವ ನೆರೆಹೊರೆಯನ್ನು ವೀಕ್ಷಿಸಿ, ಅಲ್ಲಿನ ಬೆಳೆ, ಸಸ್ಯವರ್ಗ ಮತ್ತು ಜಲರಾಶಿಗಳ ಬಗ್ಗೆ ಪಟ್ಟಿ ಮಾಡುವುದು.

@KTBS
NOT TO BE REPUBLISHED

| ಅಧ್ಯಾಯ 22 | ಯೂರೋಪ್ ಖಂಡ |
|---|---|

G2G8R6

**ಪಾಠದ ಪರಿಚಯ**

ಈ ಪಾಠದಲ್ಲಿ ಯೂರೋಪ್ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ. ಪ್ರಾಕೃತಿಕ ಮತ್ತು ವಾಯುಗುಣ ವಿಭಾಗಗಳು, ಸಸ್ಯವರ್ಗ, ವ್ಯವಸಾಯ, ಹೈನುಗಾರಿಕೆ ಮತ್ತು ಮೀನುಗಾರಿಕೆ. ಖನಿಜ ಮತ್ತು ಕೈಗಾರಿಕೆಗಳು ಹಾಗೂ ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳನ್ನು ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1. ಯೂರೋಪಿನ ಸ್ಥಾನ, ಗಾತ್ರ ಮತ್ತು ಭೌಗೋಳಿಕ ಸನ್ನಿವೇಶಗಳನ್ನು ತಿಳಿದುಕೊಳ್ಳುವುದು.
2. ಯೂರೋಪಿನ ಪ್ರಾಕೃತಿಕ ಮತ್ತು ವಾಯುಗುಣದ ವಿಭಾಗಗಳನ್ನು ತಿಳಿಯುವುದು.
3. ಸಸ್ಯವರ್ಗದ ಮೇಲೆ ವಾಯುಗುಣ ಪ್ರದೇಶಗಳ ಪ್ರಭಾವವನ್ನು ಸಮೀಕರಿಸುವುದು.
4. ಯೂರೋಪಿನ ಕೈಗಾರಿಕೆಗಳನ್ನು ಖನಿಜಗಳಿಂದ ನಿರ್ಧಾರವಾಗುವ ಬಗ್ಗೆ ಅರಿಯುವುದು.
5. ಯೂರೋಪಿನ ಅಸಮಾನ ಜನಸಂಖ್ಯೆ ಹಂಚಿಕೆ, ಸಾಂದ್ರತೆ ಮತ್ತು ವಲಸೆಗಳನ್ನು ನಿಯಂತ್ರಿಸುವ ಅಂಶಗಳನ್ನು ಕುರಿತ ತಿಳಿಯುವುದು.

@KTBS NOT TO BE REPUBLISHED

**ಪ್ರಸ್ತಾವನೆ:** ಪ್ರಪಂಚದ ಹೆಚ್ಚು ಜನಸಾಂದ್ರತೆ ಹಾಗೂ ನಗರೀಕರಣಗೊಂಡ ಭೂಖಂಡಗಳಲ್ಲಿ ಯೂರೋಪ್ ಒಂದಾಗಿದೆ. ಅಲ್ಲದೆ ಇದು ಸಮೃದ್ಧ ಮತ್ತು ಕೈಗಾರಿಕೀಕರಣಗೊಂಡ ಭೂಖಂಡ. ವಿಸ್ತೀರ್ಣದಲ್ಲಿ ಪ್ರಪಂಚದ ಆರನೇಯ ಸ್ಥಾನದಲ್ಲಿದೆ. ಇದು ಸಂಕೀರ್ಣ ಮತ್ತು ವೈವಿಧ್ಯ ಭೌಗೋಳಿಕ ಸನ್ನಿವೇಶ, ಸಾಮಾಜಿಕ-ಸಾಂಸ್ಕೃತಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ಹೊಂದಿದೆ. ಅನೇಕ ದೊಡ್ಡ ಹಾಗೂ ಸಣ್ಣ ದೇಶಗಳನ್ನು ಹೊಂದಿದ್ದು, ಅವುಗಳ ಒಟ್ಟು ಸಂಖ್ಯೆ 56ಗಳಾಗಿರುತ್ತದೆ.

## 1. ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

**ಸ್ಥಾನ:** ಯೂರೋಪ್ 10 ಡಿಗ್ರಿ ಪಶ್ಚಿಮದಿಂದ 60 ಡಿಗ್ರಿ ಪೂರ್ವ ರೇಖಾಂಶ ಹಾಗೂ 36 ಡಿಗ್ರಿ ಉತ್ತರದಿಂದ 72 ಡಿಗ್ರಿ ಉತ್ತರ ಅಕ್ಷಾಂಶಗಳಲ್ಲಿ ನೆಲೆಗೊಂಡಿದೆ.

ವಿಸ್ತೀರ್ಣ: ಯೂರೋಪ್ ಪ್ರಪಂಚದ ಎರಡನೆಯ ಚಿಕ್ಕ ಭೂಖಂಡ ಅದರ ಒಟ್ಟು ವಿಸ್ತೀರ್ಣ 10.4 ಮಿಲಿಯನ್ ಚ.ಕಿ.ಮೀಗಳು. ಇದು ಭಾರತದ ವಿಸ್ತೀರ್ಣಕ್ಕಿಂತ ಮೂರು ಪಟ್ಟು ದೊಡ್ಡದು. ಈ ಖಂಡವು ಪೃಥ್ವಿಯ ಒಟ್ಟು ವಿಸ್ತೀರ್ಣದಲ್ಲಿ ಶೇ. 7 ಭಾಗವನ್ನು ಹೊಂದಿದೆ. ಆದರೆ ಪ್ರಪಂಚದ ಜನಸಂಖ್ಯೆಯಲ್ಲಿ 1/4 ಭಾಗವನ್ನು ಹೊಂದಿದೆ.

**ಭೌಗೋಳಿಕ ಸನ್ನಿವೇಶ:** ಯೂರೋಪ್ ಏಷ್ಯಾಖಂಡದ ಪರ್ಯಾಯ ದ್ವೀಪ. ಈ ಖಂಡವು ಮೂರು ಕಡೆ ನೀರಿನಿಂದಾವರಿಸಿದೆ. ಉತ್ತರದಲ್ಲಿ ಬೇರೆಂಟ್ ಸಮುದ್ರ, ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ದಕ್ಷಿಣದಲ್ಲಿ ಮೆಡಿಟರೇನಿಯನ್ ಸಮುದ್ರಗಳು ಆವರಿಸಿವೆ.




**ಪ್ರಪಂಚದಲ್ಲಿ ಯೂರೋಪ್ ಖಂಡದ ಸ್ಥಾನ**




**ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ**

NOT TO BE REPUBLISHED ©KTBS

ಯೂರೋಪಿನ ಪೂರ್ವಭಾಗದಲ್ಲಿ ಏಷ್ಯಾ ಖಂಡವಿದ್ದು, ಅದನ್ನು ಯೂರಲ್ಸ್ ಪರ್ವತ, ಕಕಾಸಸ್ ಪರ್ವತ ಮತ್ತು ಕ್ಯಾಸ್ಪಿಯನ್ ಸಮುದ್ರಗಳು ಯೂರೋಪಿನಿಂದ ಬೇರ್ಪಡಿಸುತ್ತವೆ. ದಕ್ಷಿಣಭಾಗಕ್ಕೆ ಆಫ್ರಿಕ ಖಂಡವಿದೆ.

ಆದರೆ ಮೇಲೆ ಹೇಳಿದ ಭೌಗೋಳಿಕ ಸ್ವರೂಪಗಳೇನು ಯೂರೋಪ್ ಮತ್ತು ಏಷ್ಯಾಗಳ ನಡುವಣ ಸುಭದ್ರ ಗಡಿಗಳಾಗಿರುವುದಿಲ್ಲ. ಹೀಗಾಗಿ ಇದನ್ನು 'ಯೂರೇಷ್ಯ' ಎಂದು ಒಂದೇ ಹೆಸರಿನಿಂದ ಕರೆಯಲಾಗುತ್ತದೆ.

## 2. ಪ್ರಾಕೃತಿಕ ಲಕ್ಷಣಗಳು

ಯೂರೋಪ್ ಖಂಡವು ವಿಶಿಷ್ಟವಾದ ಪ್ರಾಕೃತಿಕ ಲಕ್ಷಣಗಳಿಂದ ಕೂಡಿದೆ. ಈ ಖಂಡದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಹಿಮದಿಂದಾವೃತ ಶಿಖರಗಳನ್ನುಳ್ಳ ಪರ್ವತ, ಕಂದರ, ಕಣಿವೆ ಮತ್ತು ಚಿಕ್ಕ ಮೈದಾನಗಳಿವೆ. ಆದರೆ ಈ ಖಂಡದ ಪೂರ್ವಭಾಗದ ಹೆಚ್ಚು ಭಾಗವು ಸ್ಥಿರ ಪೀಠಭೂಮಿಯಿಂದ ಆವರಿಸಿದೆ. ಅಲ್ಲಲ್ಲಿ ಸ್ವಲ್ಪ ಬದಲಾವಣೆ ಕಂಡುಬರುತ್ತದೆ.

ಯೂರೋಪ್ ಖಂಡದ ಅತಿ ಎತ್ತರವಾದ ಬಿಂದು ಕಕಾಸಸ್ ಪರ್ವತ ಸರಣಿಯ ಮೌಂಟ್ ಎಲ್‌ಬ್ರುಸ್ ಶಿಖರ (5633 ಮೀ). ಅತ್ಯಂತ ತಗ್ಗಾದ ಸ್ಥಳ ಕ್ಯಾಸ್ಪಿಯನ್ ಸಮುದ್ರ. ಇದು ಸಮುದ್ರ ಮಟ್ಟಕ್ಕೆ 28 ಮೀ. ತಗ್ಗಿನಲ್ಲಿದೆ.



ಎಲ್‌ಬ್ರುಸ್ ಶಿಖರ

ವಾಸ್ತವವಾಗಿ ಏಷಿಯನ್ ಭೂರಾಶಿಯಲ್ಲಿ ಯೂರೋಪ್ ಒಂದು ದೊಡ್ಡ ಪರ್ಯಾಯ ದ್ವೀಪ. ಈ ಖಂಡದಲ್ಲಿ ಹಲವು ಪರ್ಯಾಯ ದ್ವೀಪಗಳಿವೆ. ಉದಾ: ಸ್ಕಾಂಡಿನೇವಿಯ, ಐಬೀರಿಯ, ಜಟ್‌ಲ್ಯಾಂಡ್, ಬಾಲ್ಕನ್ ಮೊದಲಾದವು. ಆದ್ದರಿಂದ ಯೂರೋಪನ್ನು "ಪರ್ಯಾಯ ದ್ವೀಪಗಳ ಪರ್ಯಾಯ ದ್ವೀಪ" ಎಂದು ಕರೆಯಲಾಗಿದೆ.

ಯೂರೋಪಿನಲ್ಲಿ 80500 ಕಿ.ಮೀ ಉದ್ದವುಳ್ಳ ಒಳಚಾಚುಗಳನ್ನುಳ್ಳ ಸಮುದ್ರ ತೀರವಿದೆ. ಅದು ಏಷ್ಯಾ ಖಂಡದ ತೀರಕ್ಕಿಂತಲೂ ಉದ್ದವಾದುದು. ಈ ಖಂಡದ ತೀರದುದ್ದಕ್ಕೂ ಸಾವಿರಾರು ದ್ವೀಪಕಲ್ಪಗಳಿವೆ. ಅವುಗಳಲ್ಲಿ ಬ್ರಿಟನ್ ಮತ್ತು ಐರ್ಲೆಂಡ್ ದೊಡ್ಡವು. ಶೆಟ್‌ಲ್ಯಾಂಡ್, ಫೈರೋಸ್, ಓರ್ಕ್ನಿ, ಸಿಸಿಲಿ, ಸಾರ್ಡಿನಿಯ, ಕೊರ್ಸಿಕ, ಕ್ರೇಟ್ ಮತ್ತು ಚಾನೆಲ್ ದ್ವೀಪ ಇವು ಇತರೆ ಪ್ರಮುಖ ದ್ವೀಪಗಳು.

NOT TO BE REPUBLISHED @KTBS

## ಪ್ರಾಕೃತಿಕ ವಿಭಾಗಗಳು

ಮೇಲ್ಮೈ ಲಕ್ಷಣಗಳನ್ನಾಧರಿಸಿ ಯೂರೋಪನ್ನು ಸಾಮಾನ್ಯವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ.

1 ವಾಯವ್ಯದ ಎತ್ತರದ ಭಾಗಗಳು. 3 ಕೇಂದ್ರದ ಎತ್ತರವಾದ ಭಾಗಗಳು.

2 ಉತ್ತರದ ಯೂರೋಪ್ ಮೈದಾನಗಳು. 4 ದಕ್ಷಿಣದ ಪರ್ವತಗಳು.

**1. ವಾಯವ್ಯ ಎತ್ತರದ ಭಾಗಗಳು:** ಈ ಪ್ರಾಕೃತಿಕ ವಿಭಾಗವು ಅತ್ಯಂತ ಪುರಾತನ ಪರ್ವತ ಸರಣಿಗಳನ್ನುಳ್ಳ ಫಿನ್‌ಲ್ಯಾಂಡ್, ಸ್ವೀಡನ್, ನಾರ್ವೆಗಳನ್ನೊಳಗೊಂಡಿದ್ದು, ಐಸ್‌ಲ್ಯಾಂಡ್ ಮತ್ತು ಬ್ರಿಟನ್‌ವರೆಗೂ ವಿಸ್ತರಿಸಿದೆ. ಇವು ಅವಶೇಷ ಪರ್ವತಗಳು. ಹಿಮನದಿಗಳ ಸವೆತದಿಂದಾಗಿ ಕಡಿಮೆ ಎತ್ತರವನ್ನು ಹೊಂದಿವೆ. ಅವು ಪುರಾತನ ಶಿಲೆಗಳಿಂದ ರಚಿತವಾಗಿವೆ. ಸ್ಕಾಂಡಿನೇವಿಯಾದಲ್ಲಿ ಇವುಗಳ ಸಾಮಾನ್ಯ ಎತ್ತರ 2000 ಮೀ. ಮತ್ತು ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳಲ್ಲಿ 600 ಮೀ. ಮಾತ್ರ. ಗೋಲ್ಡೊಪಿಗ್ಗೆನ್ (2469 ಮೀ.) ಈ ವಿಭಾಗದ ಅತ್ಯಂತ ಎತ್ತರವಾದ ಶಿಖರ (ನಾರ್ವೆ). ಸ್ಕಾಟ್ಲೆಂಡಿನ ಬೆನ್‌ನೆವಿಸ್ (1343 ಮೀ.) ಮತ್ತು ವೇಲ್ಸ್‌ನ ಸ್ನೊಡೋನ್ (1085 ಮೀ.) ಇತರೆ ಶಿಖರಗಳು. ಈ ವಿಭಾಗವು ಉತ್ತರದ ಕಡೆಗೆ ಸಾಧಾರಣ ಇಳಿಜಾರಾಗಿದೆ. ತನ್ಮೂಲಕ ಅನೇಕ ನದಿಗಳು ಹರಿಯುತ್ತವೆ.

NOT TO BE REPUBLISHED ©KTBS




ಪ್ರಾಕೃತಿಕ ವಿಭಾಗಗಳು

**2. ಉತ್ತರ ಯೂರೋಪ್ ಮೈದಾನಗಳು:** ಇದನ್ನು 'ಕೇಂದ್ರದ ತಗ್ಗು ಭಾಗಗಳು' ಎಂತಲೂ ಕರೆಯಲಾಗುತ್ತದೆ. ಇದು ಪೂರ್ವದಲ್ಲಿ ಯೂರಲ್ ಪರ್ವತಗಳಿಂದ ಪಶ್ಚಿಮದಲ್ಲಿ ಅಟ್ಲಾಂಟಿಕ್ ತೀರದವರೆಗೆ ವಿಸ್ತರಿಸಿದೆ. ಯೂರೋಪಿನ ಬಹಳಷ್ಟು ಭಾಗವು ಈ ಭಾಗದಲ್ಲಿದೆ. ಇದರಲ್ಲಿ ಯೂರೋಪಿಯನ್ ರಷ್ಯ, ಪೋಲೆಂಡ್, ಉತ್ತರ ಜರ್ಮನಿ, ನೆದರ್ಲೆಂಡ್ಸ್ (ಹಾಲೆಂಡ್), ಡೆನ್ಮಾರ್ಕ್, ಬೆಲ್ಜಿಯಂ, ಉತ್ತರ ಫ್ರಾನ್ಸ್ ಹಾಗೂ ಇಂಗ್ಲೆಂಡ್‌ನ ಪೂರ್ವಭಾಗಗಳು ಸೇರಿವೆ.

ಈ ವಿಭಾಗದ ಪೂರ್ವಭಾಗವು ಅಗಲವಾಗಿದೆ ಮತ್ತು ಪಶ್ಚಿಮಕ್ಕೆ ಕಿರಿದಾಗುತ್ತಾ ಹೋಗುವುದು. ನೆದರ್ಲೆಂಡ್ಸ್ ಮತ್ತು ಬೆಲ್ಜಿಯಂ ದೇಶಗಳ ಕೆಲವು ಮೈದಾನಗಳು ಸಮುದ್ರಮಟ್ಟಕ್ಕೂ ತಗ್ಗಿನಲ್ಲಿವೆ. ಈ ಮೈದಾನಗಳು ಇಲ್ಲಿ ಹರಿಯುವ ನದಿಗಳ ಸಂಚಯ ಕಾರ್ಯದಿಂದಾದವು.

ಇದು ಭಾರತದ ಸಿಂಧೂ–ಗಂಗಾ ನದಿ ಬಯಲುಗಳಷ್ಟು ಸಮತಟ್ಟಾದುದಲ್ಲ. ಕೆಲವು ಭಾಗಗಳಲ್ಲಿ ಈ ಮೈದಾನಗಳು ಸಾಧಾರಣ ಇಳಿಜಾರಿನಿಂದ ಕೂಡಿದ್ದರೆ, ಮತ್ತೆ ಕೆಲವೆಡೆ ಪರ್ವತ ಮತ್ತು ಬೆಟ್ಟಗಳ ಸಾಲಿನಿಂದ ಪ್ರತ್ಯೇಕಗೊಳ್ಳುತ್ತವೆ. ಇಲ್ಲಿ ಪ್ರಪಂಚದಲ್ಲೇ ಪ್ರಖ್ಯಾತ ಫಲವತ್ತಾದ ಕೃಷಿ ಭೂಮಿಗಳಿವೆ.

**3. ಕೇಂದ್ರದ ಎತ್ತರವಾದ ಭಾಗಗಳು:** ಇದು ಪುರಾತನ ಶಿಲೆಗಳಿಂದ ರಚನೆಗೊಂಡಿದ್ದು, ಹಲವು ಪುರಾತನ ಪರ್ವತ, ಬೆಟ್ಟ ಮತ್ತು ಪೀಠ ಭೂಮಿಗಳನ್ನು ಒಳಗೊಂಡಿದೆ. ಅವುಗಳ ಸರಾಸರಿ ಎತ್ತರ ಸಮುದ್ರ ಮಟ್ಟಕ್ಕೆ 600 ಮೀಟರ್‌ಗಳಿಗೆ ಹೆಚ್ಚಿಲ್ಲ.

©KTBS NOT TO BE REPUBLISHED

ಈ ವಿಭಾಗವು ಪಶ್ಚಿಮದಲ್ಲಿ ಐರ್ಲೆಂಡ್‌ನಿಂದ ಪೂರ್ವದಲ್ಲಿ ರಷ್ಯದವರೆಗೆ ವಿಸ್ತರಿಸಿದೆ. ಇದರಲ್ಲಿ ಸ್ಪೇನ್ ಮತ್ತು ಪೋರ್ಚುಗಲ್ಲಿನ ಮೆಸೆಟ, ಫ್ರಾನ್ಸಿನ ಕೇಂದ್ರ ಮಾಸಿಫ್ ಮತ್ತು ವೊಸ್ಜೆಸ್, ಜರ್ಮನಿಯ ಬ್ಲಾಕ್‌ಫಾರೆಸ್ಟ್ ಹಾಗೂ ಜೆಕ್ ಮತ್ತು ಸ್ಲೋವೇಕಿಯ ಗಣರಾಜ್ಯಗಳಲ್ಲಿರುವ ಕಡಿಮೆ ಎತ್ತರವುಳ್ಳ ಹಲವು ಸರಣಿಗಳು ಸೇರಿವೆ.

ಈ ವಿಭಾಗದ ಕೆಲಭಾಗಗಳು ಅರಣ್ಯಗಳಿಂದ ಆವರಿಸಿವೆ. ಬಹಳಷ್ಟು ಪ್ರದೇಶವು ಕಲ್ಲುಬಂಡೆಗಳಿಂದ ಕೂಡಿದೆ. ಇಲ್ಲಿನ ಮಣ್ಣು ಕೃಷಿಗೆ ಫಲವತ್ತಾಗಿಲ್ಲ. ಆದರೆ ನದಿ ಕಣಿವೆಗಳು ಉತ್ತಮ ಕೃಷಿ ಭೂಮಿಯನ್ನು ನೀಡಿವೆ.

**4. ದಕ್ಷಿಣದ ಪರ್ವತಗಳು:** ಈ ವಿಭಾಗವನ್ನು 'ಆಲ್ಪೈನ್ ಪರ್ವತಗಳ ಭಾಗ' ವೆಂತಲೂ ಕರೆಯಲಾಗಿದೆ. ಇದರಲ್ಲಿ ಅನೇಕ ಪರ್ವತ ಸರಣಿಗಳಿವೆ – ಸಿಯೆರ್ರಮೊರೇನ, (ಸ್ಪೇನ್), ಫ್ರಾನ್ಸ್ ಮತ್ತು ಸ್ಪೇನ್‌ಗಳ ಮಧ್ಯದಲ್ಲಿ ಗಡಿಯಂತಿರುವ ಪಿರನೀಸ್ ಪರ್ವತಗಳು. ಇವು ಪಶ್ಚಿಮದಲ್ಲಿ ಅಟ್ಲಾಂಟಿಕ್ ತೀರದಿಂದ ಪೂರ್ವದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೂ ಒಂದಕ್ಕೊಂದು ಸಮಾನಾಂತರ ಸರಣಿಗಳಾಗಿ ಹಬ್ಬಿವೆ. ಇವು ಹಿಮಾಲಯಗಳಂತೆ ಮಡಿಕೆ ಪರ್ವತಗಳಾಗಿವೆ.

ಈ ಭಾಗದಲ್ಲಿ ಆಲ್ಪ್ಸ್ ಪರ್ವತಗಳುಮುಖ್ಯವಾದವು. ಇಲ್ಲಿನ ಅತ್ಯಂತ ಎತ್ತರವಾದ ಶಿಖರವೆಂದರೆ ಮೌಂಟ್ ಬ್ಲ್ಯಾಂಕ್ (4807 ಮೀ). ಆಲ್ಪ್ಸ್ ಪರ್ವತಗಳು ಫ್ರಾನ್ಸಿನ ಆಗ್ನೇಯ ಭಾಗ, ಇಟಲಿಯ ಉತ್ತರ, ಸ್ವಿಟ್ಜರ್ಲೆಂಡ್‌ನ ಬಹಳಷ್ಟು ಭಾಗ, ಜರ್ಮನಿ, ಆಸ್ಟ್ರಿಯ ಮತ್ತು ಸ್ಲೋವೇನಿಯ ಭಾಗಗಳಲ್ಲಿ ಹಂಚಿಕೆಯಾಗಿವೆ. ಇಟಲಿಯ ಹೆಚ್ಚಿನ ಭಾಗದಲ್ಲಿ ಅಪನೈನ್ ಪರ್ವತ, ಕ್ರೋಸಿಯ, ಬೋಸ್ನಿಯ ಮತ್ತು ಯುಗೋಸ್ಲಾವಿಯಗಳಲ್ಲಿ ಡಿನಾರಿಕ್ ಆಲ್ಪ್ಸ್, ಬಲ್ಗೇರಿಯಾದ ಬಾಲ್ಕನ್ ಮತ್ತು ಉತ್ತರ ಸ್ಲೋವೇನಿಯಾದಲ್ಲಿ ಕಾರ್ಪೇಥಿಯನ್ ಪರ್ವತಗಳಿವೆ.



ಬ್ಲ್ಯಾಂಕ್ ಶಿಖರ

## 3. ವಾಯುಗುಣ ಪ್ರದೇಶಗಳು ಮತ್ತು ಸ್ವಾಭಾವಿಕ ಸಸ್ಯವರ್ಗ

ಯೂರೋಪಿನ ವಾಯುಗುಣ ಪ್ರದೇಶಗಳನ್ನು ಕುರಿತು ಚರ್ಚಿಸುವುದಕ್ಕೂ ಮೊದಲು ಅದರ ಸಾಮಾನ್ಯ ವಾಯುಗುಣದ ಪರಿಸ್ಥಿತಿಯನ್ನು ತಿಳಿಯೋಣ. ಈ ಖಂಡದ ಹೆಚ್ಚಿನ ಭಾಗವು 'ಸಮಶೀತೋಷ್ಣವಲಯದ ವಾಯುಗುಣ'ವನ್ನು ಹೊಂದಿದೆ. ಇದನ್ನು 'ಹಿತಕರ ವಾಯುಗುಣ' ಎಂತಲೂ ಕರೆಯಲಾಗಿದೆ. ಇದು ಪ್ರಮುಖ ವಾಯುಗುಣ ನಿಯಂತ್ರಣ ಘಟಕಗಳ ಪರಸ್ಪರ ಪ್ರಕ್ರಿಯೆಯ ಫಲವಾಗಿದೆ. ಅವುಗಳೆಂದರೆ ಅಕ್ಷಾಂಶ, ಮೇಲ್ಮೈಲಕ್ಷಣ, ಮಾರುತಗಳು ಮತ್ತು ಸ್ಥಾನ. ಆದರೂ ಖಂಡದಾದ್ಯಂತ ಪ್ರಚಲಿತವಾಗಿರುವ ಅಟ್ಲಾಂಟಿಕ್ ಸಾಗರದಿಂದ ಬೀಸುವ ಮಾರುತಗಳು ಈ ಖಂಡದ ಬಹಳಷ್ಟು ವಾಯುಗುಣದ ಮೇಲೆ ಹೆಚ್ಚು ಪ್ರಭಾವ ಬೀರುವವು. ಇದಕ್ಕೆ ಗಲ್ಫ್ ಸ್ಟ್ರೀಮ್ ಉಷ್ಣಸಾಗರ ಪ್ರವಾಹ ಮತ್ತು ಪ್ರಬಲವಾದ ಪಶ್ಚಿಮ ಮಾರುತಗಳು ಮುಖ್ಯ ಕಾರಣವಾಗಿವೆ.

ಸಾಮಾನ್ಯವಾಗಿ ದಕ್ಷಿಣ ಯೂರೋಪಿನ ತಂಪಾದ ಅಲ್ಪಾವಧಿ ಬೇಸಿಗೆಗಿಂತ ಉತ್ತರದಲ್ಲಿ ಚಳಿಗಾಲವು ದೀರ್ಘ ಮತ್ತು ಶೀತವಾಗಿರುತ್ತದೆ. ಅಲ್ಲದೆ ಪಶ್ಚಿಮ ಯೂರೋಪ್‌ಗಿಂತ ಪೂರ್ವಭಾಗದಲ್ಲಿ ಚಳಿಗಾಲವು ದೀರ್ಘ ಮತ್ತು ಶೀತವಾಗಿದ್ದು, ಬೇಸಿಗೆಯು ಅಲ್ಪಾವಧಿ ಮತ್ತು ಶಾಖವುಳ್ಳದ್ದಾಗಿರುತ್ತದೆ.

### ವಾಯುಗುಣ ಪ್ರದೇಶಗಳು

ಯೂರೋಪನ್ನು ನಾಲ್ಕು ಪ್ರಮುಖ ವಾಯುಗುಣದ ವಲಯಗಳನ್ನಾಗಿ ವಿಂಗಡಿಸಬಹುದು.

**1. ವಾಯವ್ಯ ಯೂರೋಪಿನ ಸಾಗರೀಯ ವಾಯುಗುಣ ಪ್ರದೇಶ:** ಈ ಪ್ರದೇಶವು ನಾರ್ವೆಯ ಸಮುದ್ರ ತೀರದಿಂದ ಸ್ಪೇನಿನ ಉತ್ತರ ಮತ್ತು ಮಧ್ಯ ಯೂರೋಪಿನ ಒಳನಾಡಿನವರೆಗೆ ಹಂಚಿಕೆಯಾಗಿದೆ. ಹಿತಕರವಾದ ಚಳಿಗಾಲ, ತಂಪಾದ ಬೇಸಿಗೆ ಮತ್ತು ಸಾಕಷ್ಟು ಮಳೆ, ಮೋಡ ಕವಿದ ಮತ್ತು ಕಾವಳಗಳನ್ನುಳ್ಳ ಹಗಲುಗಳು ಈ ವಾಯುಗುಣದ ಪ್ರಮುಖ ಗುಣಲಕ್ಷಣಗಳು. ಚಳಿಗಾಲ ಮತ್ತು ಬೇಸಿಗೆ ಎರಡೂ ಕಾಲಗಳಲ್ಲಿ ಉಷ್ಣಾಂಶ ಸಾಧಾರಣ (10 ಡಿಗ್ರಿ ಸೆ ಮತ್ತು 18ಡಿಗ್ರಿ ಸೆ) ಮತ್ತು ಮಳೆಯ ಹಂಚಿಕೆ ಉತ್ತಮ (75 ಸೆಂ.ಮೀ).

©KTBS NOT TO BE REPUBLISHED




**ವಾರ್ಷಿಕ ಉಷ್ಣಾಂಶದ ಹಂಚಿಕೆ**




**ವಾರ್ಷಿಕ ಮಳೆಯ ಹಂಚಿಕೆ**

@KTBS NOT TO BE REPUBLISHED

**2. ಖಂಡಾಂತರ ವಾಯುಗುಣ ಪ್ರದೇಶ:** ಇದು ಹೆಚ್ಚಾಗಿ ಪೋಲೆಂಡ್, ಸ್ಲೋವೇಕಿಯ, ಜೆಕ್ ಗಣರಾಜ್ಯ, ಹಂಗೇರಿ, ರುಮೇನಿಯ ಮತ್ತು ಬಲ್ಗೇರಿಯಗಳಲ್ಲಿ ಕಂಡುಬರುತ್ತದೆ. ಈ ವಾಯುಗುಣದ ಗುಣಲಕ್ಷಣಗಳೆಂದರೆ ಶೀತವುಳ್ಳ ಚಳಿಗಾಲ, ಬೆಚ್ಚನೆಯ ಬೇಸಿಗೆ (–12ಡಿಗ್ರಿ ಸೆ. ಮತ್ತು 10ಡಿಗ್ರಿ ಸೆ.) ಮತ್ತು ಸರಾಸರಿ ವಾರ್ಷಿಕ ಮಳೆ 50 ಸೆಂ.ಮೀ. ಬೇಸಿಗೆಯ ಆರಂಭದಲ್ಲಿ ಅತಿ ಹೆಚ್ಚು ಪರಿಸರಣ ರೀತಿಯ ಮಳೆ ಬೀಳುವುದು.

**3. ಮೆಡಿಟರೇನಿಯನ್ ವಾಯುಗುಣ ಪ್ರದೇಶ:** ಹೆಚ್ಚು ಉಷ್ಣಾಂಶ, ಶುಷ್ಕ ಮತ್ತು ಬಿಸಿಲಿನಿಂದ ಕೂಡಿದ ಬೇಸಿಗೆ ಹಾಗೂ ಸ್ವಲ್ಪ ಮಳೆ ಬೀಳುವ ಹಿತಕರವಾದ ಚಳಿಗಾಲಗಳು ಈ ವಾಯುಗುಣದ ಪ್ರಮುಖ ಗುಣಲಕ್ಷಣಗಳು. ಮಳೆ ಹಂಚಿಕೆಯಲ್ಲಿ ಸಮಾನತೆ ಇಲ್ಲ. ಚಳಿಗಾಲದ ಸರಾಸರಿ ಉಷ್ಣಾಂಶ 8ಡಿಗ್ರಿ ಸೆಲ್ಸಿಯಸ್ ಮತ್ತು ಅದು ಬೇಸಿಗೆಯಲ್ಲಿ 22ಡಿಗ್ರಿ ಸೆಲ್ಸಿಯಸ್‌ಗಳಾಗಿರುತ್ತದೆ. ಸರಾಸರಿ ವಾರ್ಷಿಕ ಮಳೆ 75ರಿಂದ 100 ಸೆಂ.ಮೀ.ಗಳು. ಇಂತಹ ವಾಯುಗುಣವು ವಿಶೇಷವಾಗಿ ಮೆಡಿಟರೇನಿಯನ್ ಪ್ರದೇಶಗಳನ್ನೊಳಗೊಂಡ ದಕ್ಷಿಣ ಯೂರೋಪಿನಲ್ಲಿ ಕಂಡುಬರುವುದು.

**4. ಪರ್ವತ ವಾಯುಗುಣ ಪ್ರದೇಶ:** ಇಂತಹ ವಾಯುಗುಣವು ಆಲ್ಪ್ಸ್ ಮತ್ತು ಕಕಾಸಸ್ ಪರ್ವತ ಭಾಗಗಳಲ್ಲಿ ಕಂಡುಬರುತ್ತದೆ. ಇದು ಎತ್ತರ, ಸೂರ್ಯನಕಿರಣಗಳ ಕೋನ ಮತ್ತು ಮಾರುತಗಳಿಂದ ನಿಯಂತ್ರಿಸಲ್ಪಡುವುದು. ಚಳಿಗಾಲದ ಉಷ್ಣಾಂಶ–4ಡಿಗ್ರಿ ಸೆ. ಮತ್ತು ಬೇಸಿಗೆಯ ಉಷ್ಣಾಂಶ 16ಡಿಗ್ರಿ ಸೆ. ಸರಾಸರಿ ಮಳೆಯ ಹಂಚಿಕೆಯು ಪರ್ವತಗಳ ಗಾಳಿಗೆ ವಿಮುಖ ಭಾಗದಲ್ಲಿ 50 ಸೆಂ.ಮೀ. ಮತ್ತು ಗಾಳಿಗೆ ಅಭಿಮುಖ ಭಾಗಗಳಲ್ಲಿ 200 ಸೆಂ.ಮೀ. ಅತ್ಯಂತ ಎತ್ತರವುಳ್ಳ ಭಾಗಗಳಲ್ಲಿ ಉಷ್ಣಾಂಶವು ಹೆಪ್ಪುಗಟ್ಟುವ ಬಿಂದುಗಿಂತಲೂ ಕಡಿಮೆ ಇರುತ್ತದೆ.

## ಸ್ವಾಭಾವಿಕ ಸಸ್ಯವರ್ಗ

ಯೂರೋಪಿನಲ್ಲಿ ಬಹಳ ದೀರ್ಘಕಾಲದಿಂದ ಮಾನವರು ನೆಲಸಿದ್ದಾರೆ ಮತ್ತು ಇದು ಅಧಿಕ ಜನಸಾಂದ್ರತೆಯುಳ್ಳದ್ದು. ಆದ್ದರಿಂದ ಸ್ವಾಭಾವಿಕ ಸಸ್ಯವರ್ಗವು ಸಂಪೂರ್ಣವಾಗಿ ವಿನಾಶಗೊಂಡಿದೆ. ಜನವಸತಿಗೆ ಪ್ರತಿಕೂಲವಾದ ಮತ್ತು ಎತ್ತರದ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತದೆ. ಈ ಕೆಳಕಂಡಂತೆ ಯೂರೋಪಿನಲ್ಲಿ ಆರು ಪ್ರಕಾರದ ಸಸ್ಯವರ್ಗವಿದೆ.

**1. ತಂಡ್ರ ಸಸ್ಯವರ್ಗವು** ಶಿಲಾವಲ್ಕ ಮತ್ತು ಪಾಚಿಗಳಿಂದ (Lichens and mosses) ಕೂಡಿದೆ. ಇದು ಐರ್ಲೆಂಡ್, ಉತ್ತರ ನಾರ್ವೆ, ಸ್ವೀಡನ್ ಮತ್ತು ಫಿನ್‌ಲೆಂಡ್‌ಗಳನ್ನೊಳಗೊಂಡ ಕಿರಿದಾದ ಪ್ರದೇಶದಲ್ಲಿ ಕಂಡುಬರುವುದು. ಇಂತಹದೇ ಸಸ್ಯವರ್ಗ ಆಲ್ಪ್ಸ್ ಮತ್ತು ಉತ್ತರ ಯೂರಲ್ಸ್ ಪರ್ವತಗಳ ಎತ್ತರದ ಭಾಗಗಳಲ್ಲಿಯೂ ಕಂಡುಬರುವುದು.

**2. ತೈಗ ಅರಣ್ಯಗಳು** ನಾರ್ವೆ, ಸ್ವೀಡನ್ ಮತ್ತು ಫಿನ್‌ಲೆಂಡ್‌ಗಳನ್ನೊಳಗೊಂಡ ಧ್ರುವ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳನ್ನು **'ಶಂಕುವಿನಾಕಾರದ ಮರಗಳ ಕಾಡು'** ಎಂತಲೂ ಕರೆಯಲಾಗಿದೆ. ಇಲ್ಲಿ ಕೆಲವೇ ಪ್ರಭೇದದ ಮರಗಳು ಬೆಳೆಯುತ್ತವೆ. ಉದಾ: ಸ್ಕಾಟ್ಸ್‌ಪೈನ್, ಸ್ಪ್ರೂಸ್ ಮತ್ತು ಲಾರ್ಚ್. ಅವು ಮೊನಚಾದ ಎಲೆಗಳನ್ನು ಹೊಂದಿದ್ದು ಶಂಕುವಿನಾಕಾರವನ್ನು ಹೊಂದಿವೆ.

© KTBS NOT TO BE REPUBLISHED

**3. ಮಿಶ್ರ ಕಾಡುಗಳು** ದಕ್ಷಿಣದ ಕೇಂದ್ರ ಪ್ರದೇಶದಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಎಲೆ ಉದುರಿಸುವ ಮತ್ತು ಶಂಕುವಿನಾಕಾರದ ಮರಗಳು ಬೆಳೆಯುತ್ತವೆ. ಪ್ರಮುಖವಾದ ಮರಗಳೆಂದರೆ ಓಕ್, ಆಶ್, ಎಲ್ಮ್, ಪಾಪ್ಲರ್, ವಿಲ್ಲೊ, ಬೀಚ್ಇತ್ಯಾದಿ.

**4. ಮೆಡಿಟರೇನಿಯನ್ ಸಸ್ಯವರ್ಗವು** ಸಾಮಾನ್ಯವಾಗಿ ಮೆಡಿಟರೇನಿಯನ್ ಸಮುದ್ರದ ತೀರದುದ್ದಕ್ಕೂ ಕಂಡುಬರುವುದು. ಇದು ಅಗಲ ಎಲೆಗಳನ್ನುಳ್ಳ ಸದಾ ಹಸಿರಾದ ಸಸ್ಯವರ್ಗ. ಏಕೆಂದರೆ ಶರತ್ಕಾಲದಲ್ಲಿ ಮರಗಳು ತಮ್ಮ ಎಲೆಗಳನ್ನು ಉದುರಿಸುವುದಿಲ್ಲ. ಕಾರ್ಕ್ಓಕ್, ಆಲಿವ್, ಲಾರೆಲ್ ಮುಂತಾದ ಮರಗಳು ಇಲ್ಲಿ ಬೆಳೆಯುತ್ತವೆ.

**5. ಹುಲ್ಲುಗಾವಲು** ದಕ್ಷಿಣ ಭಾಗದ ಎಲೆ ಉದುರಿಸುವ ಅರಣ್ಯಗಳಲ್ಲಿ ಕಂಡು ಬರುತ್ತದೆ. ಉದಾ: ಹಂಗೇರಿ, ಬಲ್ಗೇರಿಯ, ರುಮೇನಿಯ ಮತ್ತು ಯೂರೋಪಿಯನ್ ರಷ್ಯ. ಇದು ವಿರಳ ಮರಗಳು ಮತ್ತು ಹುಲ್ಲುಗಳನ್ನುಳ್ಳ ಸ್ಟೆಪ್ಪಿ ಸಸ್ಯವರ್ಗವಾಗಿದೆ.

**6. ಆಲ್ಪೈನ್ ಸಸ್ಯವರ್ಗವು** ಯೂರೋಪಿನ ದಕ್ಷಿಣ ಭಾಗದಲ್ಲಿ ಎತ್ತರವಾದ ಪರ್ವತ ಭಾಗಗಳಲ್ಲಿ ಹಂಚಿಕೆಯಾಗಿದೆ. ಉದಾ: ಆಲ್ಪ್ಸ್, ಪಿರನೀಸ್, ಬಾಲ್ಕನ್, ಕಾರ್ಪೇಥಿಯನ್ ಮತ್ತು ಡಿನಾರಿಕ್ ಪರ್ವತಗಳು.

NOT TO BE REPUBLISHED @KTBS




ಸ್ವಾಭಾವಿಕ ಸಸ್ಯವರ್ಗ

# 4. ವ್ಯವಸಾಯ, ಹೈನುಗಾರಿಕೆ ಮತ್ತು ಮೀನುಗಾರಿಕೆ

**ವ್ಯವಸಾಯ :** ಯೂರೋಪಿನಲ್ಲಿ ಕೈಗಾರಿಕೀಕರಣದ ತರುವಾಯವೂ ವ್ಯವಸಾಯವು ಮುಖ್ಯ ವೃತ್ತಿಯಾಗಿ ಉಳಿದಿದೆ. ಈ ಖಂಡವು ವಿಶಾಲ, ಸಮತಟ್ಟಾದ, ಫಲವತ್ತಾದ ಭೂಮಿ ಹಾಗೂ ಉತ್ತಮ ನೀರಾವರಿ ಸೌಲಭ್ಯ ಹೊಂದಿರುವುದರಲ್ಲಿ ಅದೃಷ್ಟಶಾಲಿ. ಇಲ್ಲಿನ ವಾಯುಗುಣವೂ ವ್ಯವಸಾಯಕ್ಕೆ ಯೋಗ್ಯವಾಗಿದೆ.

ಸ್ಕಾಂಡಿನೇವಿಯನ್ ದೇಶಗಳನ್ನು ಹೊರತುಪಡಿಸಿ ಯೂರೋಪಿನ ಬಹಳಷ್ಟು ದೇಶಗಳು ಅವುಗಳ ವಿಸ್ತೀರ್ಣದಲ್ಲಿ ಶೇ. 50ಕ್ಕೂ ಹೆಚ್ಚು ಭಾಗ ಕೃಷಿಗೊಳಪಟ್ಟಿವೆ. ಯೂರೋಪಿನ ಸರಾಸರಿ ಭೂಹಿಡುವಳಿಯ ಗಾತ್ರ 10 ಹೆಕ್ಟೇರು.

ಪಶ್ಚಿಮ ಯೂರೋಪಿನ ದೇಶಗಳಲ್ಲಿ ಮಿಶ್ರಬೇಸಾಯವು ರೂಢಿಯಲ್ಲಿದೆ. ಇದು ಬೆಳೆಗಳ ಸಾಗುವಳಿ ಮತ್ತು ಜಾನುವಾರು ಸಾಕಣೆ ಎರಡನ್ನೂ ಒಳಗೊಂಡಿದೆ. ಇಲ್ಲಿ ಕೃಷಿ ಭೂಮಿಯನ್ನು ದನಗಳ ಮೇವಿಗಾಗಿ ಬೆಳೆಗಳನ್ನು ಬೆಳೆಯಲು, ಕೋಳಿಸಾಕಣೆ, ಹಂದಿ ಸಾಕಲು ಹಾಗೂ ವಿವಿಧ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುವುದಕ್ಕೆ ಉಪಯೋಗಿಸಲಾಗುತ್ತದೆ.

ಮೆಡಿಟರೇನಿಯನ್ ವಾಯುಗುಣವುಳ್ಳ ದಕ್ಷಿಣ ಯೂರೋಪಿನ ವ್ಯವಸಾಯವೇ ಬೇರೆಯಾಗಿರುತ್ತದೆ. ಅದು ಏಕದಳ ಧಾನ್ಯಬೆಳೆ, ಹಣ್ಣು, ತರಕಾರಿಗಳ ಸಾಗುವಳಿ ಮತ್ತು ಜಾನುವಾರು ಸಾಕಣೆಯ ಸಂಯೋಜನೆಯಿಂದ ಕೂಡಿದೆ.

ವಿಶಾಲವಾದ ಮಾರುಕಟ್ಟೆಯನ್ನು ಅವಲಂಬಿಸಿದ ವಿಶೇಷ ಮಾದರಿ ವ್ಯವಸಾಯ ಅಭಿವೃದ್ಧಿಗೊಂಡಿದೆ. ಅಧಿಕ ಜನಸಾಂದ್ರತೆವುಳ್ಳ ನಗರ ಪ್ರದೇಶಗಳಿಗೆ ಸಮೀಪದ ಭಾಗಗಳಲ್ಲಿ ವಾಣಿಜ್ಯ ಹಾಗೂ ಉತ್ತಮ ಸಂಘಟಿತ ವ್ಯವಸಾಯ ಕಂಡು ಬರುತ್ತದೆ. ಒಟ್ಟಾರೆ ಯೂರೋಪಿನ ಜನರಲ್ಲಿ ಶೇ.10ಕ್ಕೂ ಕಡಿಮೆ ಭಾಗ ವ್ಯವಸಾಯ ವೃತ್ತಿಯಲ್ಲಿ ತೊಡಗಿದ್ದಾರೆ.

ಮೇಲ್ಮೈ ಲಕ್ಷಣ, ಮಣ್ಣು, ವಾಯುಗುಣ, ಮಾರುಕಟ್ಟೆ ಮತ್ತು ಕೃಷಿ ಕಾರ್ಮಿಕರು ದೊರೆಯುವಿಕೆಯನ್ನು ಅವಲಂಬಿಸಿ ಯೂರೋಪಿನ ವಿವಿಧ ಭಾಗಗಳಲ್ಲಿ ವಿವಿಧ ಬಗೆಯ ಬೆಳೆಗಳನ್ನು ಬೆಳೆಯಲಾಗುತ್ತದೆ.

**ಗೋಧಿ**ಯು ಯೂರೋಪಿನ ಪ್ರಮುಖ ಆಹಾರ ಬೆಳೆ. ಪ್ಯಾರಿಸ್ ಮೈದಾನ, ಯೂರೋಪ್ ಮಹಾಮೈದಾನ, ಹಂಗೇರಿ ಮೈದಾನ, ತಗ್ಗು ಮೈದಾನದ ದೇಶಗಳು ಹಾಗೂ ಇಟಲಿಯ ಪೋ ನದಿ ಬಯಲುಗಳು ಯೂರೋಪಿನ ಪ್ರಮುಖ ಗೋಧಿ ಉತ್ಪಾದಿಸುವ ಪ್ರದೇಶಗಳು.

**ಮೆಕ್ಕೆಜೋಳ**ವು ಯೂರೋಪಿನ ಎರಡನೆಯ ಪ್ರಮುಖ ಏಕದಳಧಾನ್ಯ ಬೆಳೆ. ಫ್ರಾನ್ಸ್, ಇಟಲಿ, ಹಂಗೇರಿ, ಜರ್ಮನಿ ಮತ್ತು ಸ್ಪೇನ್ ಪ್ರಮುಖ ಮೆಕ್ಕೆಜೋಳ ಉತ್ಪಾದಿಸುವ ದೇಶಗಳು. ರೈ ಮತ್ತೊಂದು ಆಹಾರದ ಬೆಳೆ. ಇದನ್ನು ಹೆಚ್ಚಾಗಿ ಬ್ರೆಡ್ ಮತ್ತು ಮದ್ಯಗಳ ತಯಾರಿಕೆಗೆ ಬಳಸಲಾಗುವುದು. ಪೋಲೆಂಡ್, ಜರ್ಮನಿ, ಜೆಕ್ ಮತ್ತು ಸ್ಲೋವೇಕಿಯ ಗಣರಾಜ್ಯಗಳು ಪ್ರಮುಖ

© KTBS NOT TO BE REPUBLISHED

ರೈ ಉತ್ಪಾದಿಸುವ ದೇಶಗಳು. ಬಾರ್ಲಿ ಉತ್ಪಾದನೆಯಲ್ಲೂ ಯೂರೋಪ್ ಪ್ರಮುಖವಾದುದು. ಇದನ್ನು ಆಹಾರ ಧಾನ್ಯವನ್ನಾಗಿ, ದನಗಳಿಗೆ ಆಹಾರವಾಗಿ ಮತ್ತು ಮದ್ಯ ತಯಾರಿಕೆಯಲ್ಲಿ ಬಳಸಲಾಗುವುದು. ಕೆಲವೆಡೆ ಓಟ್ಸ್‌ನ್ನೂ ಬೆಳೆಯಲಾಗುತ್ತದೆ. ಭತ್ತವನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯಲಾಗುವುದು. ಇದು ಬೇಸಿಗೆಯ ಬೆಳೆ.

ಸಕ್ಕರೆಗೆಡ್ಡೆ ಮತ್ತು ಬಟಾಟೆ (ಆಲೂಗೆಡ್ಡೆ)ಗಳು ಯೂರೋಪಿನ ಎರಡು ಪ್ರಮುಖ ಗೆಡ್ಡೆ ಬೆಳೆಗಳು. ಸಕ್ಕರೆ ಗೆಡ್ಡೆಯನ್ನು ಸಕ್ಕರೆ ತಯಾರಿಕೆಗೆ ಮತ್ತು ದನಗಳ ಆಹಾರವಾಗಿ ಉಪಯೋಗಿಸಲಾಗುತ್ತದೆ.

ಬಟಾಟೆಯನ್ನು ಹೆಚ್ಚಾಗಿ ಕೇಂದ್ರ ಮತ್ತು ಪೂರ್ವ ಯೂರೋಪ್ ಮೈದಾನಗಳಲ್ಲಿ ಬೆಳೆಯಲಾಗುವುದು. ಯೂರೋಪ್ ಪ್ರಪಂಚದಲ್ಲೇ ಹೆಚ್ಚು ಬಟಾಟೆಯನ್ನು ಉತ್ಪಾದಿಸುವುದು. ಅಗಸೆಯು (**Flax**) ಯೂರೋಪಿನ ಪ್ರಮುಖ ನಾರು ಬೆಳೆ.

ಯೂರೋಪಿನ ಬೆಟ್ಟಗಳ ಇಳಿಜಾರುಗಳಲ್ಲಿ ದ್ರಾಕ್ಷಿ, ಸೇಬು, ಅಂಜೂರ, ಕಿತ್ತಲೆ, ನಿಂಬೆ, ದ್ವೀಪದ್ರಾಕ್ಷಿ (ಪ್ಲಮ್), ದಾಳಿಂಬೆ, ಚೆಸ್ಟ್‌ನಟ್ ಮೊದಲಾದ ಹಣ್ಣುಗಳ ಬೇಸಾಯವು ಕಂಡುಬರುತ್ತದೆ. ಬಲ್ಗೇರಿಯಾವು ಗುಲಾಬಿ ಹೂವು, ತರಕಾರಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಪ್ರಸಿದ್ಧವಾಗಿದೆ.

ಹೈನುಗಾರಿಕೆ: ಇದು ಯೂರೋಪಿನ ಮಿಶ್ರ ಬೇಸಾಯ ಪದ್ಧತಿಯಲ್ಲಿ ಅತ್ಯುತ್ತಮ ವ್ಯವಸ್ಥಿತ ಉದ್ಯಮ. ತಂಪಾದ ತೇವಾಂಶಭರಿತ ವಾಯುಗುಣ, ಅಧಿಕ ಜನಸಾಂದ್ರತೆವುಳ್ಳ ನಗರಗಳು, ಸುವ್ಯವಸ್ಥಿತ ರಸ್ತೆ ಮತ್ತು ರೈಲುಸಾರಿಗೆ ಸೌಲಭ್ಯ, ಅತ್ಯುತ್ತಮ ಜೈವಿಕ-ತಂತ್ರಜ್ಞಾನದ ಅಭಿವೃದ್ಧಿ, ಶೈತ್ಯೀಕರಣ, ವಾಣಿಜ್ಯ ಮಾದರಿ ಹೈನುಗಾರಿಕೆಯಲ್ಲಿ ಯಾಂತ್ರೀಕರಣ ಮತ್ತು ಯಥೇಚ್ಚವಾದ ಮೇವು ಪೂರೈಕೆಗಳು ಯೂರೋಪಿನ ಹೈನುಗಾರಿಕೆಯ ಅಭಿವೃದ್ಧಿಗೆ ಉತ್ತೇಜನವಾಗಿವೆ.

© KTBS NOT TO BE REPUBLISHED



**ಹೈನುಗಾರಿಕೆ**

ಡೆನ್ಮಾರ್ಕ್, ನೆದರ್ಲೆಂಡ್ಸ್, ಸ್ವಿಟ್ಜರ್ಲೆಂಡ್, ಜರ್ಮನಿ ಮತ್ತು ಬ್ರಿಟನ್‌ಗಳಲ್ಲಿ ಹೈನುಗಾರಿಕೆಯು ಹೆಚ್ಚು ಅಭಿವೃದ್ಧಿಗೊಂಡಿದೆ. ಆದರೆ ಡೆನ್ಮಾರ್ಕ್ ಅತ್ಯಂತ ಪ್ರಮುಖವಾದುದು. ಯೂರೋಪಿನ ದೇಶಗಳು ತಮ್ಮ ಹೈನದ ವಸ್ತುಗಳನ್ನು ರಫ್ತು ಮಾಡುತ್ತವೆ. ಉದಾ: ಬೆಣ್ಣೆ, ಗಿಣ್ಣು, ಸಾಂದ್ರೀಕರಿಸಿದ ಹಾಲು, ಚಾಕೊಲೇಟ್ ಮೊದಲಾದವು.

**ಮೀನುಗಾರಿಕೆ:** ಇತಿಹಾಸದ ಉದ್ದಕ್ಕೂ ಯೂರೋಪ್ ಖಂಡವು ಮೀನುಗಾರಿಕೆಯನ್ನು ತನ್ನ ಆಹಾರದ ಆರ್ಥಿಕತೆಯನ್ನಾಗಿ ರೂಢಿಸಿಕೊಂಡು ಬಂದಿದೆ. ಕಡಿಮೆ ಆಳದ ಸಮುದ್ರ ಭಾಗಗಳಲ್ಲಿ ಮೀನುಗಾರಿಕೆ ಸಾಗುತ್ತದೆ. ಪ್ರಮುಖ ಮೀನುಗಾರಿಕಾ ಪ್ರದೇಶಗಳು ವಾಯವ್ಯ ಯೂರೋಪಿನಲ್ಲಿವೆ. ಅವು ಆರ್ಕ್ಟಿಕ್ ವೃತ್ತದ ಉತ್ತರ ಭಾಗದಿಂದ ಮೆಡಿಟರೇನಿಯನ್ ಸಮುದ್ರದವರೆಗೆ ವಿಸ್ತರಿಸಿವೆ. ಉತ್ತರ ಸಮುದ್ರವು ಅತಿ ತೀವ್ರವಾದ ಮೀನುಗಾರಿಕಾ ಪ್ರದೇಶವಾಗಿದೆ. ಅದರಲ್ಲಿ ನಾರ್ವೆ, ಬ್ರಿಟನ್, ಡೆನ್ಮಾರ್ಕ್, ಸ್ವೀಡನ್ ಮತ್ತು ಜರ್ಮನಿಗಳು ಸೇರಿವೆ. ಡಾಗರ್ ಬ್ಯಾಂಕ್ ಮತ್ತು ಗ್ರೇಟ್ ಫಿಶರ್ ಬ್ಯಾಂಕ್ ಪ್ರದೇಶಗಳು ಉತ್ತರ ಸಮುದ್ರದ ಎರಡು ಪ್ರಸಿದ್ಧ ಮೀನುಗಾರಿಕಾ ಕೇಂದ್ರಗಳಾಗಿವೆ. ನಾರ್ವೆಯ ಜನರು ಮೀನುಗಾರಿಕೆಯಲ್ಲಿ ಪರಿಣಿತರಾಗಿದ್ದಾರೆ.

ಸೀಲ್ ಮತ್ತು ತಿಮಿಂಗಿಲಗಳನ್ನು ಧ್ರುವ ಪ್ರದೇಶಗಳಲ್ಲಿ ಹಿಡಿಯಲಾಗುತ್ತದೆ. ನಾರ್ವೆಯು ಅತಿ ಹೆಚ್ಚು ಮೀನುಗಳನ್ನು ಉತ್ಪಾದಿಸುವ ಮತ್ತು ರಫ್ತು ಮಾಡುವ ದೇಶವಾಗಿದೆ.

NOT TO BE REPUBLISHED @KTBS




**ಯೂರೋಪಿನ ಮೀನುಗಾರಿಕೆ ವಲಯ**

ಕೃಷಿ ಭೂಮಿ ಮತ್ತು ಆಹಾರ ಧಾನ್ಯಗಳ ಕೊರತೆಗಳಿಂದಾಗಿ ಯೂರೋಪಿನಲ್ಲಿ ಮೀನುಗಾರಿಕೆ ಪ್ರಗತಿಗೊಂಡಿದೆ.

## 5. ಖನಿಜಗಳು

**ಖನಿಜಗಳು:** ಯೂರೋಪ್ ಖಂಡದಲ್ಲಿ ವಿವಿಧ ಬಗೆಯ ಖನಿಜಗಳು ಮತ್ತು ಶಕ್ತಿಸಂಪನ್ಮೂಲಗಳು ದೊರೆಯುತ್ತವೆ.

ಈ ಖಂಡದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಬ್ಬಿಣದ ಅದಿರು ಉತ್ಪಾದನೆಯಾಗುತ್ತದೆ. ಯೂರೋಪಿನ ಬಹಳಷ್ಟು ದೇಶಗಳಲ್ಲಿ ಕಬ್ಬಿಣದ ಅದಿರು ಹಂಚಿಕೆಯಾಗಿದೆ. ಪ್ರಪಂಚದ ಶೇ. 5 ಭಾಗದಷ್ಟು ಕಬ್ಬಿಣದ ಅದಿರಿನ ನಿಕ್ಷೇಪವು ಈ ಖಂಡದಲ್ಲಿ ಲಭ್ಯವಿದೆ. ಫ್ರಾನ್ಸ್, ಜರ್ಮನಿ ಬ್ರಿಟನ್ ಮತ್ತು ಸ್ವೀಡನ್‌ಗಳು ಪ್ರಮುಖ ಕಬ್ಬಿಣದ ಅದಿರು ಉತ್ಪಾದಿಸುವ ದೇಶಗಳು.

ಬಲ್ಗೇರಿಯ ಮತ್ತು ಪೋಲೆಂಡ್‌ಗಳು ಪ್ರಮುಖ ತಾಮ್ರ ಉತ್ಪಾದಿಸುವ ದೇಶಗಳು. ಯೂರೋಪಿನಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಸಂಪತ್ತು ಬಹಳ ಕಡಿಮೆ. ಪ್ರಮುಖ ಪೆಟ್ರೋಲಿಯಂ ಉತ್ಪಾದಿಸುವ ಭಾಗಗಳೆಂದರೆ ಉತ್ತರ ಸಮುದ್ರ, ಫ್ರಾನ್ಸ್, ಇಟಲಿ, ನೆದರ್ಲೆಂಡ್ಸ್ ಮತ್ತು ಜರ್ಮನಿ.

NOT TO BE REPUBLISHED @KTBS




ಪ್ರಮುಖ ಖನಿಜಗಳ ಹಂಚಿಕೆ

ಕಲ್ಲಿದ್ದಲು ಯೂರೋಪಿನ ಪ್ರಮುಖ ವಿದ್ಯುತ್‌ಶಕ್ತಿಯ ಸಂಪನ್ಮೂಲ. ಸ್ಕಾಂಡಿನೇವಿಯ ಮತ್ತು ಮೆಡಿಟರೇನಿಯನ್ ದೇಶಗಳನ್ನು ಹೊರತುಪಡಿಸಿ ಈ ಖಂಡದಾದ್ಯಂತ ಕಲ್ಲಿದ್ದಲು ನಿಕ್ಷೇಪವು ಹಂಚಿಕೆಯಾಗಿದೆ. ಉತ್ತಮ ದರ್ಜೆಯ ಬಿಟುಮಿನಸ್ ಕಲ್ಲಿದ್ದಲು ಯೂರೋಪಿಯನ್ ರಷ್ಯ, ಜರ್ಮನಿ ಮತ್ತು ಬ್ರಿಟನ್‌ಗಳಲ್ಲಿ ಹಂಚಿಕೆಯಾಗಿದೆ. ಕೆಲವೆಡೆ ಬಾಕ್ಸೈಟ್ ಮತ್ತು ಪೊಟ್ಯಾಸ್‌ಗಳೂ ದೊರೆಯುತ್ತವೆ.

## ಪ್ರಮುಖ ಕೈಗಾರಿಕೆಗಳು

**ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ:** ಆಧುನಿಕ ಯುಗವು ಕಬ್ಬಿಣ ಮತ್ತು ಉಕ್ಕಿನ ಯುಗ. ಇದು ದೊಡ್ಡ ಪ್ರಮಾಣದ ಕೈಗಾರಿಕೆಯಾಗಿದ್ದು, ಹಲವು ಉಪಕೈಗಾರಿಕೆಗಳಿಗೆ ಅಗತ್ಯವಾದ ಕಬ್ಬಿಣ ಮತ್ತು ಉಕ್ಕುಗಳನ್ನು ಉತ್ಪಾದಿಸುತ್ತದೆ. ಪ್ರಮುಖ ಕಬ್ಬಿಣ ಮತ್ತು ಉಕ್ಕು ಉತ್ಪಾದಿಸುವ ಪ್ರದೇಶಗಳೆಂದರೆ; 1) ಜರ್ಮನಿ ರ‍್ಹೂರ್, ಸಾರ್, ವೆಸರ್ ನದಿಬಯಲುಗಳು ಮತ್ತು ಬರ್ಲಿನ್ ಪ್ರದೇಶ. 2) ಬ್ರಿಟನ್ ಬ್ಲಾಕ್‌ಕಂಟ್ರಿ, ಶೆಫೀಲ್ಡ್, ಈಶಾನ್ಯ ಕರಾವಳಿ ಮತ್ತು ವೇಲ್ಸ್ ಪ್ರದೇಶ. 3) ಫ್ರಾನ್ಸ್ ಲೊರೈನ್, ವಾಯುವ್ಯ ಮತ್ತು ಪೂರ್ವ ಗಡಿಪ್ರದೇಶಗಳು, ಪೋಲೆಂಡಿನ ಸೈಲಿಸಿಯ ಇಟಲಿಯ ಪೋ ನದಿ ಕಣಿವೆ ಮತ್ತು ಲಂಬಾರ್ಡಿ ಮೈದಾನ.

**ಹತ್ತಿ ಬಟ್ಟೆ ಕೈಗಾರಿಕೆ:** ಯೂರೋಪಿನಲ್ಲಿಯೂ ಅನೇಕ ಕೃಷಿ ಆಧಾರಿತ ಕೈಗಾರಿಕೆಗಳು ಅಭಿವೃದ್ಧಿಗೊಂಡಿವೆ. ಅವುಗಳಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯೂ ಒಂದಾಗಿದೆ. ಯೂರೋಪಿನಾದ್ಯಂತ ಹತ್ತಿಗಿರಣಿಗಳಿವೆ. ಕಚ್ಚಾಹತ್ತಿಯನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಬ್ರಿಟನ್ ಆಧುನಿಕ ಹತ್ತಿಬಟ್ಟೆ ಕೈಗಾರಿಕೆಯ ಉಗಮ ಸ್ಥಳ. ಇಲ್ಲಿನ ಲಂಕಾಷೈರ್, ಚೆಷೈರ್ ಮತ್ತು ಡರ್ಬಿಷೈರ್‌ಗಳು ಪ್ರಮುಖ ಹತ್ತಿಗಿರಣಿ ಕೇಂದ್ರಗಳು. ಜರ್ಮನಿ ಮತ್ತು ಫ್ರಾನ್ಸ್‌ಗಳು ಇತರ ಪ್ರಮುಖ ಹತ್ತಿ ಜವಳಿ ವಸ್ತುಗಳನ್ನು ಉತ್ಪಾದಿಸುವ ದೇಶಗಳು.

ಉತ್ತಮ ದರ್ಜೆಯ ರೇಷ್ಮೆ, ಉಣ್ಣೆಬಟ್ಟೆ ಮತ್ತು ಕೃತಕ ನಾರಿನ ಬಟ್ಟೆಗಳಿಗೆ ಬ್ರಿಟನ್, ಜರ್ಮನಿ, ಫ್ರಾನ್ಸ್, ಬೆಲ್ಜಿಯಂ ಮತ್ತು ಇಟಲಿಗಳು ಪ್ರಸಿದ್ಧವಾದವು.

**ಹಡಗು ಕಟ್ಟುವ ಕೈಗಾರಿಕೆ:** ಇದೊಂದು ದೊಡ್ಡ ಪ್ರಮಾಣದ ಎಂಜಿನಿಯರಿಂಗ್ ಹಾಗೂ ವಿಶೇಷವಾಗಿ ಜೋಡಣೆ ಕೈಗಾರಿಕೆ. ತಂತ್ರಜ್ಞಾನದ ಪ್ರಗತಿ, ಉತ್ತಮ ರೇವುಗಳ ಸೌಲಭ್ಯ, ಕೈಗಾರಿಕಾ ಪ್ರಗತಿ ಮೊದಲಾದವು ಈ ಉದ್ಯಮದ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿವೆ. ಯೂರೋಪಿನಲ್ಲಿ ಜರ್ಮನಿಯು ಪ್ರಮುಖ ಹಡಗು ಕಟ್ಟುವ ದೇಶ. ಸ್ವೀಡನ್, ಬ್ರಿಟನ್ ಮತ್ತು ಫ್ರಾನ್ಸ್‌ಗಳು ಯೂರೋಪಿನ ಇತರ ಹಡಗು ಕಟ್ಟುವ ದೇಶಗಳು.

**ಸ್ವಯಂಚಾಲಿತ ವಾಹನ ಕೈಗಾರಿಕೆ:** ಇದು ಕಾರು, ಟ್ರಕ್ಕು, ಬಸ್, ಸ್ಕೂಟರ್ ಮೊದಲಾದವು ಹಾಗೂ ಮೋಟಾರ್ ಎಂಜಿನ್ ನೆರವಿನಿಂದ ಚಲಿಸುವ ಯಾವುದೇ ಇತರೆ ವಾಹನಗಳನ್ನು ತಯಾರಿಸುವ ಉದ್ಯಮ. ಇದು ಒಂದು ಜೋಡಣೆಯ ಕೈಗಾರಿಕೆ. ಅತ್ಯುತ್ತಮ ತಾಂತ್ರಿಕ ಮತ್ತು ವೆಚ್ಚದಾಯಕವಾದ ಕೈಗಾರಿಕೆ. ಜರ್ಮನಿ, ಫ್ರಾನ್ಸ್, ಇಟಲಿ ಮತ್ತು ಬ್ರಿಟನ್ ಯೂರೋಪಿನ ಪ್ರಮುಖ ಸ್ವಯಂಚಾಲಿತವಾಹನ ಕೈಗಾರಿಕಾ ದೇಶಗಳು.

© KTBS NOT TO BE REPUBLISHED

## 6. ಯೂರೋಪಿನ ಪ್ರಮುಖ ಕೈಗಾರಿಕಾ ಪ್ರದೇಶಗಳು

ಯೂರೋಪಿನ ಪ್ರಮುಖ ಕೈಗಾರಿಕೆಗಳು ಮತ್ತು ಕೈಗಾರಿಕಾ ಕೇಂದ್ರಗಳು ಒಂದು ಬಗೆಯ ತ್ರಿಕೋನ ರೂಪದಲ್ಲಿ ಕೇಂದ್ರೀ ಕರಣಗೊಂಡಿವೆ. ಇದನ್ನು ಯೂರೋಪಿನ ಕೈಗಾರಿಕಾ ಹೃದಯ ಎನ್ನುವರು. ಈ ತ್ರಿಕೋನವು ಉತ್ತರ ಸಮುದ್ರದಿಂದ ಪೋಲೆಂಡಿನ ಮಧ್ಯಭಾಗದ ಮತ್ತು ದಕ್ಷಿಣದ ಇಟಲಿಯ 'ಪೊ' ನದಿ ಕಣಿವೆಯಿಂದ ಉತ್ತರದ ಸ್ವೀಡನ್‌ವರೆಗೂ ವ್ಯಾಪಿಸಿಕೊಂಡಿದೆ.

ಈ ಕೆಳಕಂಡವು ಯೂರೋಪಿನ ಪ್ರಮುಖ ಕೈಗಾರಿಕಾ ವಲಯಗಳು:

1 ಬ್ರಿಟನ್ ಕೈಗಾರಿಕಾ ವಲಯ.

2 ಪಶ್ಚಿಮದ ತ್ರಿಕೋನ ಕೈಗಾರಿಕಾ ವಲಯ.

3 ಪ್ಯಾರಿಸ್ ಕೈಗಾರಿಕಾ ವಲಯ; ಇದನ್ನು 'ಫ್ರಾನ್ಸಿನ ಕೈಗಾರಿಕಾ ಹೃದಯ' ಎನ್ನುವರು.

4 ಲೊರ್ರೈನ್-ಸಾರ್ ಕೈಗಾರಿಕಾ ವಲಯ.

5 ರ್ಹೈನ್ ನದಿಯ ಮೇಲ್ಕಣಿವೆ ವಲಯ.

6 ಸೈಲೇಸಿಯದ ಮೇಲ್ಕಣಿವೆ ವಲಯ.

7 ದಕ್ಷಿಣದ ಸ್ಕ್ಯಾಂಡಿನೆವಿಯಾ ವಲಯವು ಸ್ಟಾಕ್‌ಹೋಮ್‌ನ್ನು ಒಳಗೊಂಡಿದೆ.

8 ಪೂರ್ವ ಜರ್ಮನಿಯಿಂದ ಈಶಾನ್ಯ ಜೆಕ್ ಮತ್ತು ಸ್ಲೋವೇಕಿಯ ವಲಯ.

9 ಉತ್ತರದ ಇಟಲಿಯ ಕೈಗಾರಿಕಾ ವಲಯದಲ್ಲಿ ಪೋ ನದಿ ಬಯಲು.

©KTBS NOT TO BE REPUBLISHED

## 7. ಜನಸಂಖ್ಯೆ

ಯೂರೋಪಿನ ಭೌಗೋಳಿಕ ಕ್ಷೇತ್ರವನ್ನು ಹೋಲಿಸಿ ನೋಡಿದಾಗ ಅದರ ಜನಸಂಖ್ಯೆ ಹೆಚ್ಚಾಗಿಯೇ ಇದೆ. ಯೂರೋಪಿಯನ್ ರಷ್ಯವನ್ನು ಹೊರತುಪಡಿಸಿ ಪ್ರಪಂಚದ ಶೇ.11 ಭೂಭಾಗವನ್ನು ಹೊಂದಿದೆ. ಆದರೆ ಪ್ರಪಂಚದ ಐದನೆಯ ಒಂದು ಭಾಗದಷ್ಟು ಜನಸಂಖ್ಯೆಯನ್ನು ಹೊಂದಿದೆ. ಅದರ ಒಟ್ಟು ಜನಸಂಖ್ಯೆ 738.2 ಮಿಲಿಯನ್‌ಗಳು (2010). ಇದರಲ್ಲಿ ನಗರ ಜನಸಂಖ್ಯೆಯ ಪಾಲು ಹೆಚ್ಚು.

**ಹಂಚಿಕೆ:** ಯೂರೋಪಿನಲ್ಲಿ ಜನಸಂಖ್ಯೆಯು ಸಮನಾಗಿ ಹಂಚಿಕೆಯಾಗಿಲ್ಲ. ಜರ್ಮನಿ, ಬ್ರಿಟನ್, ಇಟಲಿ ಮತ್ತು ಫ್ರಾನ್ಸ್‌ಗಳು ಯೂರೋಪಿನ ಜನಭರಿತ ದೇಶಗಳು. ವಾಯವ್ಯ ಯೂರೋಪಿನಲ್ಲಿ ಜನಸಾಂದ್ರತೆ ಕಡಿಮೆ. ಆಲ್ಪ್ಸ್, ಕಕಾಸಸ್, ಅರೆ ಶುಷ್ಕ ಪ್ರದೇಶವುಳ್ಳ ಆಗ್ನೇಯ ಯೂರೋಪಿನ ಭಾಗಗಳಲ್ಲಿಯೂ ಜನಸಾಂದ್ರತೆ ವಿರಳ.

ಯೂರೋಪಿನ ಅಧಿಕ ಜನಸಾಂದ್ರತೆಯುಳ್ಳ ದೇಶಗಳೆಂದರೆ; ಬೆಲ್ಜಿಯಂ, ಲಕ್ಸಂಬರ್ಗ್, ನೆದರ್ಲೆಂಡ್ಸ್ ಇತ್ಯಾದಿ. ಇದಕ್ಕೆ ಕೈಗಾರಿಕೀಕರಣ, ಸಾರಿಗೆ ಸೌಲಭ್ಯ, ನೈಸರ್ಗಿಕ ಸಂಪನ್ಮೂಲಗಳು ಮತ್ತು ತಂತ್ರಜ್ಞಾನದ ಪ್ರಗತಿ ಪ್ರಮುಖ ಕಾರಣಗಳಾಗಿವೆ.

**ಬೆಳವಣಿಗೆ:** ಯೂರೋಪಿನ ಬಹಳಷ್ಟು ದೇಶಗಳು ಕಡಿಮೆ ಮತ್ತು ಇಳಿಮುಖ ಜನಸಂಖ್ಯಾ ಬೆಳೆವಣಿಗೆಯ ಲಕ್ಷಣಗಳಿಂದ ಕೂಡಿವೆ. ಜನಸಂಖ್ಯಾ ಬೆಳವಣಿಗೆಯು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತದೆ.

**ವಲಸೆ:** ಕಳೆದ 200 ವರ್ಷಗಳಲ್ಲಿ ಯೂರೋಪಿಯನ್ನರು ಬೇರೆ ದೇಶಗಳಿಗೆ ವಲಸೆ ಹೋಗಿದ್ದಾರೆ ಮತ್ತು ಅನೇಕ ಕಾರಣಗಳಿಂದ ಬೇರೆ ದೇಶದ ಜನರು ಯೂರೋಪಿಗೆ ವಲಸೆ ಬಂದು ಅಲ್ಲೆ ನೆಲೆಸಿದ್ದಾರೆ.

ದ್ವಿತೀಯ ಜಾಗತಿಕ ಯುದ್ಧದ ನಂತರ ವಿವಿಧ ಖಂಡ ಮತ್ತು ದೇಶಗಳಿಂದ ಜನರು ಬ್ರಿಟನ್‌ಗೆ ಒಳವಲಸೆ ಬಂದಿದ್ದಾರೆ. ಅವರಲ್ಲಿ ಹೆಚ್ಚಾಗಿ ಇಟಾಲಿಯನ್ನರಾಗಿದ್ದಾರೆ.

©KTBS NOT TO BE REPUBLISHED




ಜನಸಾಂದ್ರತೆ

ದ್ವಿತೀಯ ಜಾಗತಿಕ ಯುದ್ಧಕ್ಕೂ ಮುಂಚೆ ಜರ್ಮನ್ನರು ಬೇರೆ ಬೇರೆ ದೇಶಗಳಿಗೆ ವಲಸೆ ಹೋಗಿದ್ದಾರೆ. ಪೋಲೆಂಡ್, ರುಮೇನಿಯ, ಹಂಗೇರಿ, ಜೆಕ್, ಸ್ಲೋವೇಕಿಯಾ ಮತ್ತು ಯುಗೊಸ್ಲೋವಿಯಾಗಳಲ್ಲಿ ಜರ್ಮನ್ನರು ಅಲ್ಪಸಂಖ್ಯಾತರಾಗಿ ಕಾಣಿಸಿಕೊಳ್ಳುತ್ತಾರೆ.

**ಜನಸಾಂದ್ರತೆ:** ಯೂರೋಪದಲ್ಲಿ ಜನಸಾಂದ್ರತೆ ವೈವಿಧ್ಯಮಯವಾಗಿದೆ. ತೀವ್ರ ಅಭಿವೃದ್ಧಿ ಹೊಂದಿದ ನೆದರ್ಲೆಂಡ್ಸ್‌ನಲ್ಲಿ ಪ್ರತಿ ಚದರ ಕಿ.ಮೀ. 950 ಜನರು ಇದ್ದರೆ ಐಸ್‌ಲ್ಯಾಂಡ್‌ದಲ್ಲಿ ಅದು ಪ್ರತಿ ಚದರ ಕಿ.ಮೀ.ಗೆ 3 ಜನರು ಮಾತ್ರ. ಉತ್ತರ ಯೂರೋಪಿನ ತಗ್ಗು ಪ್ರದೇಶವು ಅತಿ ಹೆಚ್ಚು ಜನಸಾಂದ್ರತೆಯನ್ನು ಹೊಂದಿದೆ.

ಯೂರೋಪಿನ ಅತಿ ಹೆಚ್ಚು ಜನಸಾಂದ್ರತೆಯುಳ್ಳ ಪ್ರದೇಶಗಳೆಂದರೆ ಕೈಗಾರಿಕ ಜಿಲ್ಲೆಗಳು, ಬೆಲ್ಜಿಯಂ ಮತ್ತು ಜರ್ಮನ್ ಕಲ್ಲಿದ್ದಲು ಪ್ರದೇಶಗಳು, ಗ್ರೇಟರ್‌ಲಂಡನ್, ನೆದರ್ಲೆಂಡ್ಸ್, ರ್ಹೈನ್ ನದಿಬಯಲು, ಉತ್ತರ ಇಟಲಿ ಮತ್ತು ಸ್ಪೇನಿನ ಕರಾವಳಿ ಪ್ರದೇಶಗಳು.

ವಿರಳ ಜನಸಾಂದ್ರತೆಯುಳ್ಳ ಪ್ರದೇಶಗಳೆಂದರೆ ಮಧ್ಯ ಫ್ರಾನ್ಸ್, ಪರ್ವತಮಯ ಪ್ರದೇಶಗಳು, ಬಾಲ್ಕನ್ ವಲಯ ಮತ್ತು ಸ್ಕಾಟ್ಲೆಂಡ್‌ನ ಉನ್ನತ ಭಾಗಗಳು.

@KTBS NOT TO BE REPUBLISHED

## ಹೊಸ ಪದಗಳು

ಆಲ್ಪೈನ್, ಆಲ್ಪ್ಸ್, ಸ್ವಯಂಚಾಲಿತ ವಾಹನ ಉತ್ಪಾದನೆ, ಅಗಸೆನಾರು, ಕಾವಳ, ಮಡಿಕೆ ಪರ್ವತಗಳು, ಸಾಗರೀಯ ವಾಯುಗುಣ, ಮಾಸಿಫ್, ಮೆಸೆಟ, ವಲಸೆ, ಪರ್ಯಾಯ ದ್ವೀಪ, ತೈಗ, ಜವಳಿ ಉದ್ಯಮ.

## ನಿಮಗೆ ತಿಳಿದಿರಲಿ

1 ಸ್ಕಾಂಡಿನೇವಿಯ ಉತ್ತರ ಯೂರೋಪಿನ ಭಾಗವಾಗಿದ್ದು, ನಾರ್ವೆ, ಸ್ವೀಡನ್, ಮತ್ತು ಫಿನ್‌ಲ್ಯಾಂಡ್‌ಗಳನ್ನೊಳಗೊಂಡಿದೆ.

2 ಬ್ರಿಟನ್ ಅಥವಾ ಗ್ರೇಟ್ ಬ್ರಿಟನ್ ಯೂರೋಪಿನ ಬಹುದೊಡ್ಡ ದ್ವೀಪವಾಗಿದ್ದು ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್‌ಗಳನ್ನೊಳಗೊಂಡಿದೆ. ಉತ್ತರ ಐರ್ಲೆಂಡ್‌ನ್ನೂ ಸೇರಿಸಿಕೊಂಡು ಇದು ಸಂಯುಕ್ತ ರಾಜ್ಯ(ಯು.ಕೆ.)ವಾಗಿದೆ.

3 ಸುಮಾರು 500 ವರ್ಷಗಳಿಗೂ ಹೆಚ್ಚು ಕಾಲ ಯೂರೋಪನ್ನು ಪ್ರಪಂಚದ ಹೃದಯ ಭಾಗವೆಂದು ಕರೆಯಲಾಗಿತ್ತು.

4 ಬ್ಲಾಕ್ ಫಾರೆಸ್ಟ್ ಎನ್ನುವುದು ಅರಣ್ಯವಲ್ಲ. ಅದೊಂದು ಪರ್ವತ ಪ್ರದೇಶ. ದಕ್ಷಿಣ ಜರ್ಮನಿಯಲ್ಲಿದೆ. ಇದರ ಒಳ ಭಾಗವು ದಟ್ಟಡವಿಯಿಂದಾಗಿ ಕತ್ತಲಾಗಿರುವುದರಿಂದ ಈ ಹೆಸರು ಬಂದಿದೆ.

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ಯೂರೋಪಿನ ಭೌಗೋಳಿಕ ಸ್ಥಾನ ತಿಳಿಸಿ.

2 'ಯೂರೋಪನ್ನು ಏಷ್ಯಾದ ಪರ್ಯಾಯದ್ವೀಪ' ಎನ್ನುವರು. ಏಕೆ?

3 ಯೂರೋಪಿನ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿ.

4 ಯೂರೋಪಿನ ಪ್ರಮುಖ ಪರ್ವತ ಮತ್ತು ಶಿಖರಗಳನ್ನು ತಿಳಿಸಿ.

5 ಯೂರೋಪಿನ ಪ್ರಮುಖ ವಾಯುಗುಣ ಪ್ರದೇಶಗಳಾವುವು?

6 ಯೂರೋಪಿನ ಪ್ರಮುಖ ಸ್ವಾಭಾವಿಕ ಸಸ್ಯವರ್ಗದ ವಿಧಗಳನ್ನು ತಿಳಿಸಿ.

7 ಯೂರೋಪಿನಲ್ಲಿ ಪ್ರಸಿದ್ಧ ಹೈನುಗಾರಿಕಾ ದೇಶಗಳನ್ನು ಹೆಸರಿಸಿ.

8 ಯೂರೋಪಿನ ಪ್ರಮುಖ ಆಹಾರ ಬೆಳೆಗಳಾವುವು?

9 ಯೂರೋಪಿನ ಪ್ರಮುಖ ಮೀನುಗಾರಿಕಾ ವಲಯಗಳನ್ನು ತಿಳಿಸಿ.

10 ಯೂರೋಪಿನ ಪ್ರಮುಖ ಖನಿಜಗಳಾವುವು?

### ಚಟುವಟಿಕೆಗಳು

1 ಭೂಪಟದಲ್ಲಿ ಯೂರೋಪಿನ ಮುಖ್ಯ ಪ್ರಾಕೃತಿಕ ವಿಭಾಗಗಳನ್ನು ಗುರುತಿಸುವುದು.

2 ನಿಮ್ಮ ಉಪಾಧ್ಯಾಯರ ನೆರವನ್ನು ಪಡೆದು ಯೂರೋಪಿನ ಪ್ರಮುಖ ಪರ್ವತ ಮತ್ತು ಶಿಖರಗಳನ್ನು ಗುರುತಿಸುವುದು.

3 ನಿಮ್ಮ ವಾಸಸ್ಥಳದ ಸುತ್ತಮುತ್ತ ಗಮನಿಸಿ ಮತ್ತು ಅಲ್ಲಿನ ಭೂಸ್ವರೂಪಗಳು, ಸಸ್ಯವರ್ಗ ಮತ್ತು ಬೆಳೆಗಳ ಪಟ್ಟಿಯನ್ನು ಸಿದ್ಧಪಡಿಸಿ.

4 ಯೂರೋಪಿನ ಭೂಪಟದಲ್ಲಿ ರಾಷ್ಟ್ರಗಳ ರಾಜಧಾನಿ ಹೆಸರುಗಳು, ಪ್ರವಾಸಿ ಕೇಂದ್ರಗಳು ಮತ್ತು ಕೈಗಾರಿಕಾ ಪ್ರದೇಶಗಳನ್ನು ಗುರುತಿಸಿ.

@KTBS NOT TO BE REPUBLISHED

| ಅಧ್ಯಾಯ 23 | ಆಫ್ರಿಕ ಖಂಡ |
|---|---|

F8G2V4

**ಪಾಠದ ಪರಿಚಯ**

ಈ ಪಾಠದಲ್ಲಿ ನೀವು ಆಫ್ರಿಕದ ಭೌಗೋಳಿಕ ಸ್ಥಾನ, ವಿಸ್ತೀರ್ಣ ಹಾಗೂ ಭೌಗೋಳಿಕ ಸನ್ನಿವೇಶ. ಪ್ರಾಕೃತಿಕ ಲಕ್ಷಣಗಳು, ನದಿ ವ್ಯವಸ್ಥೆ, ವಾಯುಗುಣ ಹಾಗೂ ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿಸಂಪತ್ತು, ವ್ಯವಸಾಯ, ಕೈಗಾರಿಕೆಗಳು, ಬೆಲೆಬಾಳುವ ಖನಿಜಗಳು, ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಜನಸಾಂದ್ರತೆಗಳ ಬಗ್ಗೆ ತಿಳಿಯುವಿರಿ.

**ಸಾಮರ್ಥ್ಯಗಳು**

1 ಆಫ್ರಿಕ ಖಂಡದ ಸ್ಥಾನ, ವಿಸ್ತೀರ್ಣ, ಭೌಗೋಳಿಕ ಸನ್ನಿವೇಶ ಮತ್ತು ಪ್ರಾಕೃತಿಕ ಲಕ್ಷಣಗಳನ್ನು ತಿಳಿದುಕೊಳ್ಳುವುದು.

2 ಆಫ್ರಿಕದ ಪ್ರಮುಖ ನದಿ ವ್ಯವಸ್ಥೆ, ವಾಯುಗುಣ ಮತ್ತು ವಾಯುಗುಣ ಪ್ರದೇಶಗಳು, ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಪತ್ತುಗಳನ್ನು ಕುರಿತು ತಿಳಿಯುವುದು.

3 ವ್ಯವಸಾಯ, ಕೈಗಾರಿಕೆ ಮತ್ತು ಬೆಲೆಬಾಳುವ ಖನಿಜಗಳ ಬಗ್ಗೆ ತಿಳಿದುಕೊಳ್ಳುವುದು.

4 ಆಫ್ರಿಕದ ಜನಸಂಖ್ಯೆ, ಬೆಳೆವಣಿಗೆ, ಹಂಚಿಕೆ ಮತ್ತು ಜನಸಾಂದ್ರತೆ ತಿಳಿದುಕೊಳ್ಳುವುದು.

© KTBS NOT TO BE REPUBLISHED

**ಪೀಠಿಕೆ:** ಆಫ್ರಿಕ ಖಂಡವು ಏಷ್ಯಾದ ನಂತರ ಪ್ರಪಂಚದ ಎರಡನೆಯ ಅತ್ಯಂತ ದೊಡ್ಡ ಖಂಡವಾಗಿದೆ. ಇದು ಜನ ಸಂಖ್ಯೆಯಲ್ಲಿ ಎರಡನೆಯ ಸ್ಥಾನದಲ್ಲಿದೆ. ಇತ್ತೀಚಿನ ವರ್ಷಗಳವರೆಗೂ ಆಫ್ರಿಕ ಖಂಡವನ್ನು 'ಕತ್ತಲೆಯ ಖಂಡ'ವೆಂದು ಕರೆಯಲಾಗುತ್ತಿತ್ತು. ಇದಕ್ಕೆ ಈ ಖಂಡದಲ್ಲಿ ಪ್ರಧಾನವಾಗಿ ಕಪ್ಪು ಜನರಿರುವುದರಿಂದಲ್ಲ; ಬದಲಾಗಿ ಅದರ ಪ್ರಸ್ಥಭೂಮಿಗಳು ಸಮುದ್ರ ತೀರದವರೆಗೂ ವಿಸ್ತರಿಸಿರುವುದು ಮತ್ತು ಉತ್ತರದಲ್ಲಿ ಸಹರ ಮರುಭೂಮಿ ಇದ್ದು, ಅದು ಹೊರ ಪ್ರಪಂಚಕ್ಕೆ ಬಹಳ ದೀರ್ಘ ಅವಧಿಯವರೆಗೂ ಶೋಧನೆಗೆ ಒಳಗಾಗದೆ ಉಳಿದಿತ್ತು. ಆಫ್ರಿಕ 52 ದೇಶಗಳನ್ನು ಹೊಂದಿದೆ.

## 1. ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

**ಸ್ಥಾನ:** ಆಫ್ರಿಕ ಖಂಡವು $37^0$ಡಿಗ್ರಿ ಉತ್ತರ ಮತ್ತು $35^0$ ದಕ್ಷಿಣ ಅಕ್ಷಾಂಶ ಹಾಗೂ $17^0$ಪಶ್ಚಿಮ ಮತ್ತು $50^0$ ಪೂರ್ವ ರೇಖಾಂಶಗಳ ನಡುವೆ ನೆಲಸಿದೆ. ಆಫ್ರಿಕದ ಪಶ್ಚಿಮ ಭಾಗದಲ್ಲಿ ಪ್ರಧಾನ ರೇಖಾಂಶವು ಉತ್ತರ-ದಕ್ಷಿಣವಾಗಿ ಹಾಯ್ದು ಹೋಗುತ್ತದೆ. ವಿಶೇಷ ಸಂಗತಿ ಎಂದರೆ ಈ ಖಂಡದಲ್ಲಿ ಕರ್ಕಾಟಕ ವೃತ್ತ ಮತ್ತು ಮಕರ ವೃತ್ತಗಳೆರಡೂ ಹಾಯ್ದುಹೋಗಿವೆ. ಭೂ ಮಧ್ಯರೇಖೆಯು ಹೆಚ್ಚು ಕಡಿಮೆ ಈ ಖಂಡದ ಮಧ್ಯಭಾಗದಲ್ಲಿ ಹಾಯ್ದು ಹೋಗುವುದರಿಂದ ಇದನ್ನು 'ಕೇಂದ್ರೀಯ ಖಂಡ'ವೆನ್ನುವರು.

**ವಿಸ್ತೀರ್ಣ:** ಆಫ್ರಿಕದ ಒಟ್ಟು ವಿಸ್ತೀರ್ಣ 30.4 ಮಿಲಿಯನ್ ಚ.ಕಿ.ಮೀ. ಇದು ದಕ್ಷಿಣೋತ್ತರವಾಗಿ 8000 ಕಿ.ಮೀ. ಉದ್ದ ಹಾಗೂ ಪೂರ್ವ-ಪಶ್ಚಿಮವಾಗಿ 7400 ಕಿ.ಮೀ ಅಗಲವಾಗಿದೆ. ಆಲ್-

ಫಿರಮ್ (ಟುನಿಸಿಯ) ಆಫ್ರಿಕದ ಉತ್ತರ ತುದಿಯಾದರೆ ಅಗುಲ್ಹಾಸ್ (ದಕ್ಷಿಣ ಆಫ್ರಿಕ) ಭೂಶಿರವು ದಕ್ಷಿಣ ತುದಿಯಾಗಿದೆ.




**ಪ್ರಪಂಚದಲ್ಲಿ ಆಫ್ರಿಕದ ಸ್ಥಾನ**




**ಆಫ್ರಿಕ ಖಂಡದ ಸ್ಥಾನ ಮತ್ತು ಭೌಗೋಳಿಕ ಸನ್ನಿವೇಶ**

NOT TO BE REPUBLISHED @KTBS

ಭೌಗೋಳಿಕ ಸನ್ನಿವೇಶ: ಆಫ್ರಿಕದ ಬಹುತೇಕ ಭೂಭಾಗವು ಒಂದಿಲ್ಲೊಂದು ಸಮುದ್ರ ಅಥವಾ ಮಹಾಸಾಗರಗಳಿಂದ ಸುತ್ತುವರೆಯಲ್ಪಟ್ಟಿದೆ. ಉತ್ತರದಲ್ಲಿ ಮೆಡಿಟರೇನಿಯನ್ ಸಮುದ್ರ, ಪಶ್ಚಿಮಕ್ಕೆ ಅಟ್ಲಾಂಟಿಕ್ ಸಾಗರ, ಪೂರ್ವಕ್ಕೆ ಕೆಂಪು ಸಮುದ್ರ ಹಾಗೂ ಹಿಂದೂ ಸಾಗರಗಳು ಸುತ್ತುವರಿದಿವೆ. ಹಿಂದೆ ಈ ಖಂಡದ ಈಶಾನ್ಯ ಭಾಗವು ಸಿನಾಯ್ ಪರ್ಯಾಯ ದ್ವೀಪದಿಂದ ಏಷ್ಯಾದೊಂದಿಗೆ ಜೋಡಣೆಯಾಗಿದ್ದು, ಈಗ ಅದು ಸೂಯೇಜ್ ಕಾಲುವೆಯಿಂದ ಪ್ರತ್ಯೇಕ ಗೊಂಡಿದೆ. ಜಿಬ್ರಾಲ್ಟರ್ ಜಲಸಂಧಿಯಿಂದ ಯೂರೋಪ್ ಖಂಡವೂ ಹಾಗೂ ಕೆಂಪು ಸಮುದ್ರದಿಂದ ಅರೇಬಿಯ ಪರ್ಯಾಯ ದ್ವೀಪ ಆಫ್ರಿಕದಿಂದ ಪ್ರತ್ಯೇಕಗೊಂಡಿದೆ. ಆಫ್ರಿಕ ಖಂಡದ ಸಮುದ್ರತೀರ 30500 ಕಿ.ಮೀ. ಉದ್ದವಾಗಿದೆ.

## 2. ಪ್ರಾಕೃತಿಕ ಲಕ್ಷಣಗಳು

ಆಫ್ರಿಕ ಖಂಡದ ಪ್ರಾಕೃತಿಕ ಲಕ್ಷಣವು ಅದರ ಆಂತರಿಕ ರಚನೆಯ ಪ್ರತಿ ಬಿಂಬವಾಗಿದೆ. ಇಡಿ ಖಂಡವನ್ನೇ ವಿಶಾಲವಾದ ಪ್ರಸ್ಥಭೂಮಿಯಾಗಿ ಪರಿಗಣಿಸಲಾಗಿದೆ. ಅದು ಪುರಾತನ ಸ್ಫಟಿಕ ಶಿಲೆಗಳಿಂದ ರಚನೆಯಾಗಿದೆ. ಅದು ಕಿರಿದಾದ ಸಮುದ್ರದಂಚಿನಿಂದ ಕಡಿದಾಗಿ ಎದ್ದುಕೊಂಡ ಪೀಠಭೂಮಿ. ಹೀಗಾಗಿ ಈ ಖಂಡದ ಒಳನಾಡಿಗೆ ಪ್ರವೇಶಿಸುವುದು ಕಷ್ಟ. ಪೀಠಭೂಮಿ (ಪ್ರಸ್ಥಭೂಮಿ)ಯು ಆಗ್ನೇಯ ಭಾಗದಲ್ಲಿ ಎತ್ತರವಾಗಿದೆ ಮತ್ತು ಈಶಾನ್ಯಕ್ಕೆ ಕಡಿದಾದ ಇಳಿಜಾರನ್ನು ಹೊಂದಿದೆ. ಆಫ್ರಿಕ ಖಂಡವನ್ನು ಅದರ ವಿಸ್ತೀರ್ಣಕ್ಕೆ ಹೋಲಿಸಿದಾಗ ಅದು ಇತರೆ ಖಂಡಗಳಿಗಿಂತ ಕಡಿಮೆ ಎತ್ತರವುಳ್ಳ ಪರ್ವತ ಮತ್ತು ತಗ್ಗು ಮೈದಾನಗಳನ್ನು ಹೊಂದಿದೆ.



ಮಹಾಸೀಳು ಕಣಿವೆ

ಆಫ್ರಿಕದ ಸಮುದ್ರ ತೀರವು ಹೆಚ್ಚೂ ಕಡಿಮೆ ನೇರವಾಗಿದೆ. ಅದು ಕೆಲವೇ ದೊಡ್ಡ ತಗ್ಗು ಮೈದಾನ, ಸ್ವಾಭಾವಿಕ ಬಂದರು ಹಾಗೂ ಅಳಿವೆಗಳನ್ನು ಹೊಂದಿದೆ. ಅಲ್ಲಿ ಯಾವುದೇ ಕೊಲ್ಲಿ (Bay) ಮತ್ತು ಒಳಚಾಚುಗಳಿಲ್ಲ. ಅಲ್ಲದೆ ಕಡಲ ತೀರದ ಒಳಭಾಗಗಳು ಆಳವಾಗಿ ಕೊರೆಯಲ್ಪಟ್ಟಿವೆ.

**ಮಹಾಸೀಳು ಕಣಿವೆ:** ಎರಡು ಸಾಮಾನ್ಯ ಸ್ತರಭಂಗಗಳು ಅಥವಾ ಎರಡು ತಗ್ಗುಗಳ ನಡುವಣ ಭೂಭಾಗವು ಕುಸಿಯುವುದರಿಂದ ನಿರ್ಮಾಣಗೊಂಡ ಸಪಾಟಾದ ತಳವುಳ್ಳ ಕಣಿವೆಯನ್ನು 'ಸೀಳುಕಣಿವೆ' ಎನ್ನುವರು. ಆಫ್ರಿಕದ ಮಹಾಸೀಳು ಕಣಿವೆ ಬಹಳ ಉದ್ದವಾದುದು (6900 ಕಿ.ಮೀ). ಹೀಗಾಗಿ ಇದನ್ನು 'ಮಹಾಸೀಳು ಕಣಿವೆ' ಎಂದು ಕರೆಯಲಾಗಿದೆ.

©KTBS NOT TO BE REPUBLISHED



© KTBS NOT TO BE REPUBLISHED

**ಆಫ್ರಿಕದ ಪ್ರಾಕೃತಿಕ ಲಕ್ಷಣಗಳು**

ಇಂಗ್ಲಿಷದ ಅಕ್ಷರ **Y** ಆಕಾರದಲ್ಲಿರುವ ಬಹುದೊಡ್ಡ ಸೀಳುಕಣಿವೆಯು ಆಫ್ರಿಕ ಖಂಡದ ಎದ್ದು ಕಾಣುವ ಬಹು ಸ್ಪಷ್ಟವಾದ ಪ್ರಾಕೃತಿಕ ಲಕ್ಷಣವಾಗಿದೆ. ಇದು ದಕ್ಷಿಣದ ಮೊಜಾಂಬಿಕ್‌ದಿಂದ ಪ್ರಾರಂಭವಾಗಿ ಮಲಾವಿ, ಟಾಂಜನಿಯಾ, ಕೀನ್ಯಾ ಮತ್ತು ಇಥಿಯೋಪಿಯಗಳ ಮೂಲಕ ಹಾಯ್ದು ಕೆಂಪು ಸಮುದ್ರದವರೆಗೆ ಹಬ್ಬಿದೆ. ಅಲ್ಲಿಂದ ಆಕ್ಯುಬಾ ಖಾರಿ, ಮೃತ ಸಮುದ್ರ ಹಾಗೂ ಗಾಲಿಲೀ ಸಮುದ್ರದಿಂದ ಮುಂದುವರೆದು ಜೋರ್ಡಾನದ ಸಿರಿಯ ಕಣಿವೆಯಲ್ಲಿ ಅಂತ್ಯವಾಗುತ್ತದೆ.

**ಆಫ್ರಿಕದ ತಗ್ಗುಪ್ರದೇಶಗಳು:** ಆಫ್ರಿಕದಲ್ಲಿ ಐದು ಪ್ರಮುಖ ತಗ್ಗು ಪ್ರದೇಶಗಳಿವೆ. ಅವುಗಳ ವಿವರ ಕೆಳಕಂಡಂತಿದೆ.

**1. ಸುಡಾನ್ ತಗ್ಗುಪ್ರದೇಶವು** ಬಿಳಿ ಮತ್ತು ನೀಲಿ ನೈಲ್‌ನದಿಗಳು ಹರಿಯುವ ಪ್ರದೇಶ. ಪ್ರಪಂಚದಲ್ಲೇ ಅತಿ ವಿಸ್ತಾರವಾಗಿರುವ ಈ ಜವುಗು ಭೂಮಿಯನ್ನು 'ಸಡ್' (**Sudd**) ಎಂದು ಕರೆಯುವರು.

**2. ಚಾಡ್ ತಗ್ಗುಪ್ರದೇಶವು** ಚಾಡ್ ಸರೋವರದಿಂದಾವರಿಸಿದೆ. ಇದೂ ಸಹ ಜವುಗು ಪ್ರದೇಶವಾಗಿದ್ದು, ಇದನ್ನು ಸಹಾರಾ ಮರುಭೂಮಿಯು ಆಕ್ರಮಿಸುತ್ತಿದೆ.

**3. ಜೋಫ್ (Djouf) ತಗ್ಗು ಪ್ರದೇಶವು** ಸಹಾರಾ ಮರುಭೂಮಿಯ ಪಶ್ಚಿಮ ಭಾಗವನ್ನೊಳಗೊಂಡಿದೆ ಮತ್ತು ಮಾರಿಟಾನಿಯ-ಮಾಲಿ ಗಡಿಯ ಉದ್ದಕ್ಕೂ ಸಾಕಷ್ಟು ವಿಸ್ತರಿಸಿದೆ. ಈ ಮೂಲಕ ನೈಜರ್ ನದಿ ಹರಿಯುತ್ತದೆ.

**4. ಕಾಂಗೊ(ಜೈರೆ) ತಗ್ಗು ಪ್ರದೇಶವು** ಒಂದು ರಚನಾತ್ಮಕ ಭೂಸ್ವರೂಪವಾಗಿದ್ದು ಅದು ಪ್ರಸ್ಥಭೂಮಿಯಿಂದ ಸುತ್ತುವರಿಯಲ್ಪಟ್ಟಿದೆ. ಈ ಮೂಲಕ ಕಾಂಗೊ ಮತ್ತು ಅದರ ಉಪನದಿಗಳು ಹರಿಯುತ್ತವೆ. ಇದೊಂದು ಅರಣ್ಯ ಪ್ರದೇಶ.

**5. ಕಲಹರಿ ತಗ್ಗು ಪ್ರದೇಶವು** ಬಹಳಷ್ಟು ಮಟ್ಟಿಗೆ ಮರುಭೂಮಿ ಮತ್ತು ಸ್ಟೆಪ್ಪಿ ಹುಲ್ಲುಗಾವಲಿನ ಭಾಗ. ಇದು ಪ್ರಸ್ಥಭೂಮಿಗಳಿಂದ ಸುತ್ತುವರಿದಿದೆ.




ಆಫ್ರಿಕದ ತಗ್ಗುಪ್ರದೇಶಗಳು

**ಸರೋವರಗಳು:** ಆಫ್ರಿಕ ಖಂಡವು ಆರ್ಥಿಕ ಸಾಮರ್ಥ್ಯವನ್ನು ವೃದ್ಧಿಸುವ ಅನೇಕ ಸರೋವರಗಳನ್ನು ಹೊಂದಿದೆ. ಅವುಗಳಲ್ಲಿ ಎಂಟು ಪ್ರಮುಖವಾದವು. ಪೂರ್ವ ಆಫ್ರಿಕದಲ್ಲಿ ಅತೀ ದೊಡ್ಡ ಮತ್ತು ಆಳವುಳ್ಳ ಸರೋವರಗಳಿವೆ. ಅವುಗಳೆಲ್ಲ ಸಾಧಾರಣವಾಗಿ ಸೀಳು ಕಣಿವೆಯೊಂದಿಗೆ ಸಂಬಂಧವನ್ನು ಹೊಂದಿದೆ. ಸೀಳು ಕಣಿವೆಯ ಪಶ್ಚಿಮಕ್ಕೆ ಅಲ್ಬರ್ಟ್, ಎಡ್ವರ್ಡ್, ಕಿವು, ಟಾಂಗನಿಕ ಮತ್ತು ನ್ಯಾಸ ಸರೋವರಗಳಿವೆ. ಅಲ್ಲದೆ ಸೀಳು ಕಣಿವೆಯ ಪೂರ್ವಕ್ಕೆ ರುಡಾಲ್ಫ್ (ಟುರ್ಕಾನ) ನಟ್ರೋನ್ ಮತ್ತು ಇಯಾಸಿ ಸರೋವರಗಳಿವೆ.

ಟಾಂಗನಿಕ ಸರೋವರವು ಪ್ರಪಂಚದ ಎರಡನೆಯ ಅತಿ ಆಳವಾ ಸರೋವರವಾಗಿದೆ. ಅದು ಸುಮಾರು

NOT TO BE REPUBLISHED © KTBS

1,436 ಮೀ ಆಳವಾಗಿದೆ. ಸೀಳುಕಣಿವೆಯ ಎರಡೂ ಸಾಲುಗಳ ನಡುವೆ ಇರುವ ವಿಕ್ಟೋರಿಯಾ ಸರೋವರವು ಆಫ್ರಿಕದ ಬಹು ದೊಡ್ಡ ಸರೋವರವಾಗಿದೆ. ಅದು ಸುಮಾರು 69,481 ಚ. ಕಿ.ಮೀ ವಿಸ್ತಾರವಾಗಿದೆ. ಇಲ್ಲಿಂದ ನೈಲ್‌ನದಿ ಉಗಮವಾಗುತ್ತದೆ.

**ಪರ್ವತಗಳು:** ಆಫ್ರಿಕ ಖಂಡವು ಹಲವು ಪರ್ವತಗಳನ್ನು ಹೊಂದಿದೆ. ಆಫ್ರಿಕದ ಸಮತಟ್ಟಾದ ಮೈದಾನದ ಏಕತಾನತೆಯನ್ನು ಮುರಿಯುವಲ್ಲಿ ಕೆಲವು ಸಣ್ಣ ಸಣ್ಣ ಬೆಟ್ಟ ಶ್ರೇಣಿಗಳು ಇವೆ. ಅವುಗಳಲ್ಲಿ ಅಟ್ಲಾಸ್ ಸರಣಿ, ಡ್ರೇಕನ್ಸ್‌ಬರ್ಗ್ ಪರ್ವತ ಮತ್ತು ಕಿಲಿಮಾಂಜರೋ ಪರ್ವತಗಳು ಪ್ರಮುಖವಾಗಿವೆ.

**ಅಟ್ಲಾಸ್ ಸರಣಿ:** ಇವು ನಮ್ಮ ಭಾರತದ ಹಿಮಾಲಯ ಪರ್ವತಗಳಂತೆಯೇ ಮಡಿಕೆ ಪರ್ವತಗಳಾಗಿವೆ. ಇವು ದಕ್ಷಿಣ ಯುರೋಪಿನ ಪರ್ವತಗಳ ಮುಂದುವರಿಕೆಗಳಾಗಿವೆ. ಮೌಂಟ್ ಟಾಬ್ಕಾಲ್ ಎತ್ತರವಾದ ಶಿಖರ. ಅಟ್ಲಾಸ್ ಸರಣಿಗಳು ಅಲ್ಜೀರಿಯ, ಮೊರಾಕೊ ಮತ್ತು ಟುನಿಸಿಯಗಳಲ್ಲಿ ಹಬ್ಬಿವೆ.

ಡ್ರೇಕನ್ಸ್ ಬರ್ಗ್ ಪರ್ವತಗಳು: ಆಫ್ರಿಕದ ಆಗ್ನೇಯ ಸಮುದ್ರ ತೀರದ ಉದ್ದಕ್ಕೂ ಇವು ಹಬ್ಬಿವೆ. ಇವು ಹೆಸರಿಗಷ್ಟೇ ಪರ್ವತಗಳು. ಪೀಠ ಭೂಮಿಗಳ ಓರೆಯಾದ ಅಂಚುಗಳಾಗಿವೆ.

**ಕಿಲಿಮಾಂಜರೊ ಪರ್ವತಗಳು:** ಈ ಪರ್ವತ ಶ್ರೇಣಿಯು ಆಫ್ರಿಕದ ಪೂರ್ವ ಭಾಗದಲ್ಲಿದೆ. ಇದು ಆಫ್ರಿಕ ಖಂಡದ ಅತ್ಯಂತ ಎತ್ತರವಾದ ಶಿಖರವನ್ನು ಹೊಂದಿದೆ. ಅದರ ಎತ್ತರ 5,895 ಮೀಟರುಗಳು ಇದು ಸಮಭಾಜಕ ವೃತ್ತದ ಸಮೀಪ ಇದ್ದರೂ ಇದರ ಶಿಖರವು ಯಾವಾಗಲೂ ಹಿಮದಿಂದ ಆವರಿಸಿದೆ. ಅದಕ್ಕೆ ಕಾರಣ ಅದರ ಎತ್ತರ.



**ಕಿಲಿಮಂಜಾರೊ ಪರ್ವತ**

ಮೇಲ್ಕಂಡವುಗಳಲ್ಲದೆ ಆಹಾಗ್ಗಾರ್, ಟೆಬೆಸ್ಟಿ, ರುವೆಂಜೊರಿ, ಕೇಪ್ ಸರಣಿ ಮತ್ತು ಪೂರ್ವ ಆಫ್ರಿಕ ಸರಣಿಗಳು ಆಫ್ರಿಕದ ಇತರೆ ಪರ್ವತಗಳು.

> ಆಫ್ರಿಕದ ಅತ್ಯಂತ ಎತ್ತರವಾದ ಶಿಖರ ಕಿಲಿಮಾಂಜರೊ ಮತ್ತು ಅತ್ಯಂತ ತಗ್ಗು ಪ್ರದೇಶ ಅಸಲ್ (ಜಿಬೋಟಿ) ಸರೋವರವಾಗಿದೆ.

**ಸೂಯೇಜ್ ಭೂಕಂಠ:** ಎರಡು ವಿಶಾಲವಾದ ಭೂಭಾಗಗಳನ್ನು ಕೂಡಿಸುವ ಮತ್ತು ಎರಡು ಜಲರಾಶಿಗಳನ್ನು ಪ್ರತ್ಯೇಕಿಸುವ ಕಿರಿದಾದ ಭೂಭಾಗವೇ "ಭೂಕಂಠ". ಸೂಯೇಜ್ ಭೂಕಂಠ ಪ್ರಖ್ಯಾತವಾದುದು.

NOT TO BE REPUBLISHED ©KTBS

ಸೂಯೇಜ್ ಭೂಕಂಠವು ಮೆಡಿಟರೇನಿಯನ್ ಸಮುದ್ರ ಮತ್ತು ಕೆಂಪು ಸಮುದ್ರಗಳ ನಡುವಣ ಕಿರಿದಾದ ಭೂಭಾಗವಾಗಿದೆ. ಅದು ಆಫ್ರಿಕ ಮತ್ತು ಏಷ್ಯಾ ಖಂಡಗಳನ್ನು ಸೇರಿಸುವಂತಾದ್ದು. ಪ್ರಸ್ತುತ ಆಫ್ರಿಕ ಖಂಡದ ದೇಶಗಳಲ್ಲಿ ಒಂದಾದ ದೇಶಕ್ಕೆ ಈ ಭೂಕಂಠ ಭಾಗವು ಸೇರಿದೆ ಮತ್ತು ಆಫ್ರಿಕದ ಈಶಾನ್ಯ ಭಾಗದಲ್ಲಿದೆ. ಅದನ್ನು ಸೂಯೇಜ್ ಕಾಲುವೆ ನಿರ್ಮಿಸಲು ತೋಡಲಾಗಿದೆ. ಈ ಕಾಲುವೆ ಅಸಾಧಾರಣ ಮಾನವ ನಿರ್ಮಿತವಾದುದು ಮತ್ತು ಅದು ಮೆಡಿಟರೇನಿಯನ್ ಸಮುದ್ರ ಮತ್ತು ಕೆಂಪು ಸಮುದ್ರಗಳನ್ನು ಸಂಪರ್ಕಿಸುತ್ತದೆ. ಇದು ಪ್ರಪಂಚದಲ್ಲೇ ಹೆಚ್ಚು ಹಡಗು ಸಂಚರಿಸುವ ಪ್ರಮುಖ ಸಾಗರ ಮಾರ್ಗವಾಗಿದ್ದು ಯೂರೋಪ್ ಮತ್ತು ಏಷ್ಯಾಗಳನ್ನು ಕಡಿಮೆ ಅಂತರದಿಂದ ಸಂಪರ್ಕಿಸುತ್ತದೆ.




ಸೂಯೇಜ್ ಭೂಕಂಠ




ಸೂಯೇಜ್ ಕಾಲುವೆ

©KTBS NOT TO BE REPUBLISHED

## 3. ಜಲಸಂಪನ್ಮೂಲಗಳು

### ಆಫ್ರಿಕದ ನದಿಗಳು

ಆಫ್ರಿಕದ ನದಿ ವ್ಯವಸ್ಥೆಗಳು ತಮ್ಮದೇ ಆದ ವೈಚಿತ್ರ್ಯಗಳನ್ನು ಹೊಂದಿವೆ. ಬಹಳಷ್ಟು ನದಿಗಳು ತಮ್ಮ ಮೇಲ್ಕಣಿವೆ ಪಾತ್ರದಲ್ಲಿ ಆಳವಾದ ಕಂದರಗಳನ್ನು ನಿರ್ಮಿಸಿವೆ. ಜಲಪಾತಗಳು, ತ್ವರಿತ ಪ್ರವಾಹಗಳನ್ನು (Rapids) ಹೊಂದಿವೆ. ಋತುಕಾಲಿಕ ಮಳೆಯ ಹಂಚಿಕೆಯ ಪರಿಣಾಮದಿಂದ

ಅರೆಕಾಲಿಕವಾಗಿ ಹರಿಯುತ್ತವೆ. ಮುಕ್ತ ನೌಕಯಾನಕ್ಕೆ ಸೂಕ್ತವಲ್ಲ. ಸರ್ವಕಾಲಿಕ ನದಿಗಳು ಕಡಿಮೆ. ಇಲ್ಲಿ ಒಳನಾಡಿನ ನದಿಗಳೇ ಹೆಚ್ಚು.

ಆಫ್ರಿಕ ಖಂಡವು ನಾಲ್ಕು ಪ್ರಮುಖ ನದಿಗಳನ್ನು ಹೊಂದಿದೆ. ಅವುಗಳೆಂದರೆ – ನೈಲ್, ಕಾಂಗೊ (ಜೈರೆ), ನೈಜರ್ ಮತ್ತು ಝಾಂಬೆಜಿ ನದಿಗಳು

ಆಫ್ರಿಕದ ಇತರ ಮಹತ್ವದ ನದಿಗಳೆಂದರೆ: ಸೆನೆಗಲ್, ಆರೆಂಜ್ ಮತ್ತು ಲಿಂಪೋಪೋಗಳಾಗಿವೆ.

**ನೈಲ್ ನದಿ:** ನೈಲ್ ನದಿಯು ಜಗತ್ತಿನ ಅತ್ಯಂತ ಉದ್ದವಾದ ನದಿ. ಇದು 6,650 ಕಿ.ಮೀ ಉದ್ದ ಹರಿಯುತ್ತದೆ. ವಿಕ್ಟೋರಿಯ ಸರೋವರದಲ್ಲಿ ನೈಲ್‌ನದಿಯಾಗಿ ಉಗಮಗೊಂಡು ಸಹರಾ ಮರುಭೂಮಿಯಗುಂಟ ಉತ್ತರಾಭಿಮುಖವಾಗಿ ಹರಿದು ಮೆಡಿಟರೇನಿಯನ್ ಸಮುದ್ರದಲ್ಲಿ ಸಂಗಮಗೊಳ್ಳುತ್ತದೆ. ನೈಲ್‌ನದಿಯ ಬಯಲೂ ಅತ್ಯಂತ ಫಲವತ್ತಾಗಿದೆ. ಸಹಸ್ರಾರು ಜನರ ಬದುಕಿಗೆ ನೆರವಾಗಿದ್ದು, ಜನರು ಅದರ ನೀರನ್ನು ನೀರಾವರಿಗಾಗಿ ಬಳಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಅಲ್–ಗಜಲ್ ಎಂಬುದು ಎಡದಂಡೆಯ ಉಪನದಿ ಮತ್ತು ಸೂಬತ್, ನೀಲಿನೈಲ್ ಮತ್ತು ಅಟ್ಬಾರ ಎಂಬುವವು ಬಲದಂಡೆಯ ಉಪನದಿಗಳು.

ನೀಲಿ ನೈಲ್ ನದಿಯು ಥಾನಾ ಸರೋವರದಲ್ಲಿ (ಇಥಿಯೋಪಿಯ) ಉಗಮ ಹೊಂದುತ್ತದೆ ಮತ್ತು ಕಾರ್ಟೂಮ್ ಎಂಬಲ್ಲಿ ಬಿಳಿ ನೈಲ್ ನದಿಯನ್ನು ಕೂಡಿಕೊಳ್ಳುತ್ತದೆ. ನೈಲ್ ನದಿಯು ಪ್ರಪಂಚದಲ್ಲೆ ಪ್ರಸಿದ್ದ ಮುಖಜ ಭೂಮಿಯನ್ನು ನಿರ್ಮಿಸಿದೆ. ಈ ನದಿಗೆ ನಿರ್ಮಿಸಿರುವ ಅಣೆಕಟ್ಟೆಗಳಲ್ಲಿ ಅಸ್ವಾನ್ ಅಣೆಕಟ್ಟೆ ದೊಡ್ಡದು.

©KTBS NOT TO BE REPUBLISHED

**ಕಾಂಗೋ ನದಿ:** ಕಾಂಗೋ ಅಥವಾ ಜೈರೆ ನದಿಯು ಆಫ್ರಿಕದ ಎರಡನೆಯ ಉದ್ದವಾದ ನದಿ. ಆಫ್ರಿಕದ ಜನ ಈ ನದಿಯನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಉಗಮ ಸ್ಥಾನದಲ್ಲಿ ಈ ನದಿಯನ್ನು ಲುಆಪುಲಾ ಎಂದು ಮತ್ತು ಉಳಿದ ಎಲ್ಲ ಕಡೆಗೆ ಲುಆಲಾಬ ಎಂದು ಕರೆಯುತ್ತಾರೆ.

ಕಾಂಗೋ ನದಿಯು ಸಮಭಾಜಕ ವೃತ್ತಕ್ಕೆ ಸಮೀಪದಲ್ಲಿ ಉಗಮಹೊಂದಿ ಮೊದಲು ಉತ್ತರಕ್ಕೆ, ಅನಂತರ ನೈಋತ್ಯಕ್ಕೆ 4640 ಕಿ.ಮೀ ದೂರ ಹರಿಯುತ್ತ ಅಟ್ಲಾಂಟಿಕ್ ಸಾಗರ ಸೇರುತ್ತದೆ. ಇದು ಆಫ್ರಿಕದ ಮಧ್ಯಭಾಗದಲ್ಲಿ ಸಮಭಾಜಕ ವೃತ್ತದ ಅರಣ್ಯಗಳ ನಡುವೆ ಹರಿಯುತ್ತದೆ. ಪ್ರಸಿದ್ಧ ಲಿವಿಂಗ್‌ಸ್ಟನ್ ಜಲಪಾತವನ್ನು ನಿರ್ಮಿಸುತ್ತದೆ. ಆದರೆ ನದಿ ಮುಖಜ ಭೂಮಿ ಹೊಂದಿಲ್ಲ.




©KTBS NOT TO BE REPUBLISHED

**ಆಫ್ರಿಕದ ನದಿಗಳು**

**ನೈಜರ್ ನದಿ:** ಆಫ್ರಿಕದ ಮೂರನೇ ಉದ್ದವಾದ ನದಿ ಇದಾಗಿದೆ. ಈ ನದಿಯು ಪಶ್ಚಿಮ ಕರಾವಳಿಯ ಎತ್ತರದ ಭಾಗದಲ್ಲಿ ಉಗಮಹೊಂದುತ್ತದೆ. ಇದು ಕೂಡಾ ಅಟ್ಲಾಂಟಿಕ್ ಮಹಾಸಾಗರವನ್ನು ಕೂಡಿಕೊಳ್ಳುತ್ತದೆ. ಇದು ವರ್ಷವಿಡಿ ತುಂಬಿ ಹರಿಯುವ ನದಿಯಲ್ಲ. ಈ ನದಿಯ ಉದ್ದ 4000 ಕಿ.ಮೀ.

**ಜಾಂಬೆಜಿ ನದಿ:** ಆಫ್ರಿಕದ ನಾಲ್ಕನೆಯ ಪ್ರಮುಖ ನದಿ. ಇದು ಆಫ್ರಿಕದ ದಕ್ಷಿಣಭಾಗದ ಮಹತ್ವದ ನದಿಯಾಗಿದೆ. ಇದು ಕೇಂದ್ರ ಆಫ್ರಿಕ ಪ್ರದೇಶದಲ್ಲಿ ಹುಟ್ಟಿ ಆಗ್ನೇಯದ ಕಡೆಗೆ ಹರಿಯುತ್ತದೆ. ಹಿಂದೂ ಮಹಾಸಾಗರದಲ್ಲಿ ಸೇರುತ್ತದೆ. ಇದು ತನ್ನ ಪಾತ್ರದ ಉದ್ದಕ್ಕೂ ಸಾಕಷ್ಟು ಪ್ರವಾಹ ಹಾಗೂ ಜಲಪಾತಗಳನ್ನು ಉಂಟುಮಾಡಿದೆ. ಅವುಗಳಲ್ಲಿ ಅತ್ಯಂತ ವಿಶಿಷ್ಟವಾದುದು ವಿಕ್ಟೋರಿಯ ಜಲಪಾತ. ಈ ನದಿಯು ಹಲವು ಆಳವಾದ ಕಂದರಗಳ ಮುಖಾಂತರ ಹರಿಯುತ್ತದೆ. ಅವುಗಳಲ್ಲಿ 'ಕರಿಬ ಕಂದರ' ಪ್ರಸಿದ್ಧವಾದುದು. ಈ ನದಿಯ ಉದ್ದ ಸುಮಾರು 3500 ಕಿ.ಮೀ ಗಳು.



**ವಿಕ್ಟೋರಿಯ ಜಲಪಾತ**

**ಸೆನೆಗಲ್‌ನದಿ:** ಇದು ಗಿನಿಯ ಫೌಟಾ ಜಾಲ್ಲೊನ್ ಪ್ರಸ್ಥಭೂಮಿಯಲ್ಲಿ ಉಗಮ ಹೊಂದುತ್ತದೆ. ಅನಂತರ ವಾಯವ್ಯಕ್ಕೆ ಸುಮಾರು 1640 ಕಿ.ಮೀ. ಹರಿದು, ಅಂತಿಮವಾಗಿ ಅಟ್ಲಾಂಟಿಕ್ ಸಾಗರ ಸೇರುವುದು. ಮಾರಿಟಾನಿಯ ಮತ್ತು ಸೆನೆಗಲ್ ಪ್ರಾಂತ್ಯಗಳ ನಡುವೆ ಗಡಿಯಾಗಿ ಹರಿಯುವುದು.

## 4. ವಾಯುಗುಣ, ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಪತ್ತು

**ವಾಯುಗುಣ:** ಅತ್ಯಂತ ಉದ್ದ ಮತ್ತು ಅಗಲವನ್ನುಳ್ಳ ಆಫ್ರಿಕ ಖಂಡವು ಉತ್ತರಾರ್ಧಗೋಳ ಮತ್ತು ದಕ್ಷಿಣಾರ್ಧಗೋಳಗಳಲ್ಲಿ ವಿಸ್ತರಿಸಿಕೊಂಡಿದೆ. ಹೀಗಾಗಿ ಇದನ್ನು ಕೇಂದ್ರಸ್ಥಾನ ಭೂಖಂಡವೆಂದು ಕರೆಯಲಾಗಿದೆ. ಈ ಭೂಖಂಡದ ಮಧ್ಯಭಾಗದಲ್ಲಿ ಸಮಭಾಜಕ ವೃತ್ತವು ಹಾಯ್ದು ಹೋಗಿರುವುದರಿಂದ ಸೂರ್ಯನ ಕಿರಣಗಳು ಲಂಬವಾಗಿ ಪ್ರಸರಿಸುತ್ತವೆ. ಆದ್ದರಿಂದ ಈ ಖಂಡದಲ್ಲಿ ಉಷ್ಣವಲಯದ ವಾಯುಗುಣವಿದೆ. ಜೊತೆಗೆ ಇನ್ನೂ ಹಲವು ಅಂಶಗಳು ಆಫ್ರಿಕದ ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ. ಉದಾ: ಎತ್ತರವುಳ್ಳ ಪರ್ವತಗಳು ಇಲ್ಲದಿರುವುದು, ಪ್ರವಾಹಗಳು, ಪೂರ್ವ-ಪಶ್ಚಿಮಕ್ಕೆ ಹೆಚ್ಚು ವಿಸ್ತರಣೆ ಮತ್ತು ಸನ್ನಿವೇಶ. ಸಹರಾದ ಪಶ್ಚಿಮದಂಚಿನ ಉದ್ದಕ್ಕೂ ಹರಿಯುವ (ಕೆನರಿ ಪ್ರವಾಹ) ಹಾಗೂ ಕಲಹರಿಯ ಪಶ್ಚಿಮ ಕರಾವಳಿಗೆ ಹೊಂದಿಕೊಂಡಂತೆ ಹರಿಯುವ ಶೀತಸಾಗರ (ಬೆಂಗ್ವಲಪ್ರವಾಹ) ಪ್ರವಾಹಗಳು ಕರಾವಳಿಯ ತಗ್ಗು ಪ್ರದೇಶಗಳಿಗೆ ಹೊಂದಿಕೊಂಡಿರುವ ಭಾಗಗಳ ಉಷ್ಣಾಂಶವನ್ನು ಕಡಿಮೆಗೊಳಿಸುವವು. ಈ ಎರಡೂ ಶೀತ ಪ್ರವಾಹಗಳಾಗಿರುವುದರಿಂದ ಅವು ಹೆಚ್ಚು ತೇವಾಂಶವನ್ನು ತರಲಾರವು. ಆದರೆ ಆಗ್ನೇಯ ಕರಾವಳಿಗೆ ಹೊಂದಿಕೊಂಡು ಹರಿಯುವ ಮೊಸಾಂಬಿಕ್ ಉಷ್ಣಸಾಗರ ಪ್ರವಾಹವು ಹೆಚ್ಚು ತೇವಾಂಶವನ್ನು ತರುವುದರೊಂದಿಗೆ ಮಳೆ ಸುರಿಸುತ್ತದೆ.

© KTBS NOT TO BE REPUBLISHED

ಎತ್ತರವುಳ್ಳ ಪರ್ವತಗಳು ಇಲ್ಲದಿರುವುದು ಹಾಗೂ ವಾಯುಗುಣದ ಇತರೆ ವಿಭಾಜಕಗಳ ಕೊರತೆಯು ಇಲ್ಲಿ ಉಷ್ಣವಲಯದ ವಾಯುವಿನ ಮುಕ್ತಚಲನೆಗೆ ಅನುವು ಮಾಡಿಕೊಡುತ್ತದೆ. ಹೀಗಾಗಿ ವಾಯುಗುಣದಲ್ಲಿ ಬದಲಾವಣೆಯು ನಿಧಾನವಾಗಿ ಸಾಗುವುದು.

ಆಫ್ರಿಕದ ವಾಯುಗುಣದ ಮೇಲೆ ಮಳೆಯ ಹಂಚಿಕೆಯೂ ಮಹತ್ವದ ಪಾತ್ರವಹಿಸುತ್ತದೆ. ಸಮಭಾಜಕ ವೃತ್ತದ ಬಳಿ ಮಳೆಯು ಹೆಚ್ಚಾಗಿರುತ್ತದೆ. ಈ ಪ್ರದೇಶದಲ್ಲಿ ವಾರ್ಷಿಕ ಸರಾಸರಿ ಮಳೆಯು 200 ಸೆಂ.ಮೀ., ಆಗಿರುತ್ತದೆ ಮತ್ತು ಸಮಭಾಜಕ ವೃತ್ತದಿಂದ ದೂರ ಹೋದಂತೆ ಮಳೆ ಕಡಿಮೆಯಾಗುತ್ತದೆ. ಸಹರ, ಕಲಹರಿ ಮತ್ತು ನಮೀಬಿಯ ಪ್ರದೇಶಗಳಲ್ಲಿ ಮಳೆ ಕೇವಲ 15 ಸೆಂ. ಮೀ ಆಗಿರುತ್ತದೆ. ಆದಾಗ್ಯೂ ಕ್ಯಾಮರೂನ್ ಆಫ್ರಿಕದ ಅತ್ಯಂತ ತೇವದ ಪ್ರದೇಶವಾಗಿದ್ದು 1016 ಸೆಂ.ಮೀ ವಾರ್ಷಿಕ ಸರಾಸರಿ ಮಳೆಯನ್ನು ಪಡೆಯುತ್ತದೆ.

ವಾಯುಗುಣದ ಪರಿಸ್ಥಿತಿಯನ್ನಾಧರಿಸಿ ಆಫ್ರಿಕ ಖಂಡವನ್ನು ಈ ಕೆಳಕಂಡಂತೆ ಎಂಟು ವಲಯಗಳನ್ನಾಗಿ ವಿಂಗಡಿಸಲಾಗಿದೆ.

1 ಸಮಭಾಜಕ ವೃತ್ತದ ತೇವು ಪ್ರದೇಶ.

2 ಸವನ್ನಮಾದರಿ ಪ್ರದೇಶ.

3 ಉಷ್ಣವಲಯದ ಮರುಭೂಮಿ ಪ್ರದೇಶ.

4 ಮೆಡಿಟರೇನಿಯನ್ ಪ್ರದೇಶ.

5 ಸಮಶೀತೋಷ್ಣ ಹುಲ್ಲುಗಾವಲು ಪ್ರದೇಶ

6 ಎತ್ತರವುಳ್ಳ ಪ್ರದೇಶ.

7 ಆರ್ದ್ರ ಉಪ–ಉಷ್ಣವಲಯ.

8 ಶುಷ್ಕಚಳಿಗಾಲವುಳ್ಳ ಉಪುಷ್ಣವಲಯ.

**1. ಸಮಭಾಜಕ ವೃತ್ತದ ತೇವು ಪ್ರದೇಶ:** ಇದು ಸಮಭಾಜಕ ವೃತ್ತದ ಎರಡೂ ಕಡೆಗೂ ಹರಡಿರುವ ತಗ್ಗುಪ್ರದೇಶ ಹಾಗೂ ಕಾಂಗೊ ಬಯಲಿನಿಂದ ಗಿನಿಪ್ರದೇಶದವರೆಗೆ ವಿಸ್ತರಿಸಿದೆ. ಇಲ್ಲಿನ ವಾಯುಗುಣ ವರ್ಷವೆಲ್ಲಾ ಅತಿಶಾಖ ಮತ್ತು ಮಳೆಯಿಂದ ಕೂಡಿರುತ್ತದೆ. ಇಲ್ಲಿ ನಿತ್ಯವೂ ಅಪರಾಹ್ನ ವೇಳೆಯಲ್ಲಿ ಸುರಿಮಳೆ (downpour) ಯಾಗುತ್ತದೆ. ಅದು ಪರಿಸರಣ ರೀತಿಯ ಮಳೆ. ಅತಿಶಾಖ ಮತ್ತು ತೇವು ಪರಿಸ್ಥಿತಿಯ ಈ ವಾಯುಗುಣ ಹಿತಕರವಾದುದಲ್ಲ.

**2. ಸವನ್ನಮಾದರಿ ವಾಯುಗುಣ ಪ್ರದೇಶ:** ಇದು ಸೋಮಾಲಿಯ, ಇಥಿಯೋಪಿಯ, ಸುಡಾನ್, ಚಾಡ್ ಮತ್ತು ನೈಜರ್ ಪ್ರಾಂತ್ಯಗಳ ಭಾಗಗಳನ್ನೊಳಗೊಂಡಿದೆ. ಈ ಮಾದರಿಯ ವಾಯುಗುಣವು ಹೆಚ್ಚಾಗಿ ಸುಡಾನ್‌ನಲ್ಲಿ ಕಂಡುಬರುವುದು. ಹೀಗಾಗಿ ಇದನ್ನು 'ಸುಡಾನ್ ಮಾದರಿ ವಾಯುಗುಣ' ಎಂತಲೂ ಕರೆಯುವರು. ಇಲ್ಲಿ ಉಷ್ಣಾಂಶ ಹೆಚ್ಚು. ಅದು ತಗ್ಗು ಪ್ರದೇಶಗಳಿಗಿಂತ ಪೂರ್ವಭಾಗದ ಎತ್ತರವಾದ ಪ್ರದೇಶಗಳಲ್ಲಿ ಕಡಿಮೆ, ಬೇಸಿಗೆಯಲ್ಲಿ ಮಳೆ ಹೆಚ್ಚು.

©KTBS NOT TO BE REPUBLISHED




**ಆಫ್ರಿಕದ ವಾಯುಗುಣದ ಪ್ರದೇಶಗಳು**

**3. ಉಷ್ಣವಲಯದ ಮರುಭೂಮಿ ಪ್ರದೇಶ:** ಆಫ್ರಿಕ ಖಂಡದ ಉತ್ತರಭಾಗ ಮತ್ತು ದಕ್ಷಿಣ ಭಾಗಗಳೆರಡರಲ್ಲೂ ಮರುಭೂಮಿಗಳಿವೆ. ಈ ಪ್ರದೇಶದಲ್ಲಿ ಬೇಸಿಗೆ ಅತಿ ಉಷ್ಣವಾಗಿದ್ದರೆ ಚಳಿಗಾಲವು ತಂಪಾಗಿರುತ್ತದೆ. ಬೇಸಿಗೆ ಮತ್ತು ಚಳಿಗಾಲಗಳಿಗಿಂತಲೂ ಹಗಲು ಮತ್ತು ರಾತ್ರಿಗಳ ಉಷ್ಣಾಂಶದ ಹಂಚಿಕೆಯಲ್ಲಿ ಹೆಚ್ಚು ವ್ಯತ್ಯಾಸವಿರುತ್ತದೆ. ಮಳೆ ಬಹಳ ವಿರಳ. ಆಕಾಶದಲ್ಲಿ ಮೋಡಗಳ ರಚನೆ ಬಹಳ ಅಪರೂಪ.

**4. ಮೆಡಿಟರೇನಿಯನ್ ವಾಯುಗುಣ ಪ್ರದೇಶ:** ಆಫ್ರಿಕ ಖಂಡದ ಉತ್ತರದ ಕರಾವಳಿ ಪ್ರದೇಶ ಹಾಗೂ ದಕ್ಷಿಣದ ತುದಿ ಭಾಗಗಳಲ್ಲಿ ಇಂತಹ ವಾಯುಗುಣವು ಕಂಡು ಬರುತ್ತದೆ. ಈ ಪ್ರದೇಶದಲ್ಲಿ ಮೊರಾಕೊ, ಉತ್ತರ ಅಲ್ಜೀರಿಯ ಮತ್ತು ಕೇಪ್ ಪ್ರಾಂತ್ಯಗಳು ಸೇರಿವೆ. ಅತಿ ಉಷ್ಣ ಮತ್ತು ಶುಷ್ಕವಾದ ಬೇಸಿಗೆ ಹಾಗೂ ತಂಪು ಮತ್ತು ಮಳೆ ಬೀಳುವ ಚಳಿಗಾಲಗಳು ಈ ವಾಯುಗುಣದ ಮುಖ್ಯ ಲಕ್ಷಣಗಳು. ಇದೊಂದೇ ಚಳಿಗಾಲದಲ್ಲಿ ಮಳೆ ಪಡೆಯುವ ವಾಯುಗುಣ ಪ್ರದೇಶ.

NOT TO BE REPUBLISHED @KTBS

**5. ಸಮಶೀತೋಷ್ಣ ಹುಲ್ಲುಗಾವಲು ಪ್ರದೇಶ:** ಇದನ್ನು ಉನ್ನತ ವೆಲ್ಡ್ ಪ್ರದೇಶವೆಂತಲೂ ಕರೆಯಲಾಗಿದೆ. ಡಚ್ ಭಾಷೆಯಲ್ಲಿ ವೆಲ್ಡ್ (Veldts) ಎಂದರೆ 'ಕ್ಷೇತ್ರ' ಎಂದರ್ಥ. ಈ ವಾಯುಗುಣ ಪ್ರದೇಶವು ದಕ್ಷಿಣ ಆಫ್ರಿಕದ ಒಳನಾಡಿನಲ್ಲಿ ಕಂಡುಬರುತ್ತದೆ. ಇದು ಸಮುದ್ರ ತೀರದಿಂದ ದೂರವಿರುವುದು. ಇದರಿಂದ ಚಳಿಗಾಲ ಮತ್ತು ಬೇಸಿಗೆಗಳ ಉಷ್ಣಾಂಶದ ಪ್ರಮಾಣದಲ್ಲಿ ಹೆಚ್ಚು ವ್ಯತ್ಯಾಸವಿರುತ್ತದೆ. ಬೇಸಿಗೆಯಲ್ಲಿ ತಾಪಮಾನ ಹೆಚ್ಚು ಮತ್ತು ಚಳಿಗಾಲವು ಶೀತವಾಗಿರುತ್ತದೆ. ಈ ಎರಡೂ ಕಾಲಗಳಲ್ಲಿ ಮಳೆಯ ಪ್ರಮಾಣ ಕಡಿಮೆ.

**6. ಎತ್ತರವುಳ್ಳ ವಾಯುಗುಣ ಪ್ರದೇಶ:** ಇದು ಇಥಿಯೋಪಿಯಾದ ಎತ್ತರವಾದ ಭಾಗ ಮತ್ತು ಪೂರ್ವ ಆಫ್ರಿಕದ ಭಾಗಗಳನ್ನೊಳಗೊಂಡಿದೆ. ಸಮುದ್ರ ಮಟ್ಟಕ್ಕೆ ಹೆಚ್ಚು ಎತ್ತರವುಳ್ಳ ಈ ಪ್ರದೇಶದಲ್ಲಿ ತಂಪಾದ ವಾಯುಗುಣವಿರುತ್ತದೆ. ಮಳೆಯ ಹಂಚಿಕೆ ವಿರಳ ಮತ್ತು ಅದು ಬೇಸಿಗೆಯಲ್ಲಿ ಮಾತ್ರ ಬೀಳುವುದು.

**7. ಆರ್ದ್ರ-ಉಪಉಷ್ಣವಲಯದ ವಾಯುಗುಣ ಪ್ರದೇಶ:** ಈ ಪ್ರದೇಶವು ಡ್ರೇಕನ್ಸ್ ಬರ್ಗ್ ಪರ್ವತ ಭಾಗಗಳು ಹಾಗೂ ಮಡಗಾಸ್ಕರ್ ದ್ವೀಪವನ್ನೂ ಒಳಗೊಂಡಂತೆ ಪೂರ್ವಕರಾವಳಿವರೆಗೂ ವಿಸ್ತರಿಸಿದೆ. ಇಲ್ಲಿನ ವಾಯುಗುಣದಲ್ಲಿ ಬೇಸಿಗೆ ಅತಿ ಉಷ್ಣ ಮತ್ತು ಮಳೆಯಿಂದಲೂ ಮತ್ತು ಚಳಿಗಾಲವು ತಂಪು ಮತ್ತು ಶುಷ್ಕತೆಯಿಂದ ಕೂಡಿರುತ್ತದೆ.

**8. ಶುಷ್ಕ ಚಳಿಗಾಲವುಳ್ಳ ಉಪ-ಉಷ್ಣವಲಯ:** ಇದು ಆಫ್ರಿಕದ ಆಗ್ನೇಯ ಭಾಗವನ್ನೊಳಗೊಂಡಿದೆ. ಅತಿ ಶಾಖ ಮತ್ತು ಮಳೆಬೀಳುವ ಬೇಸಿಗೆ ಹಾಗೂ ಸೌಮ್ಯ ಮತ್ತು ಶುಷ್ಕತೆಯುಳ್ಳ ಚಳಿಗಾಲಗಳು ಈ ವಾಯುಗುಣದ ಮುಖ್ಯ ಲಕ್ಷಣಗಳು. ಸಮಭಾಜಕವೃತ್ತ ಪ್ರದೇಶದ ತೇವ ವಾಯುಗುಣವಲಯದ ಮಾದರಿಯಂತಹ ಮಳೆಯ ಹಂಚಿಕೆ ಇಲ್ಲಿಯೂ ಕಂಡು ಬರುತ್ತದೆ. ಆದರೆ ಎತ್ತರ ಮತ್ತು ದಟ್ಟನೆಯ ಮಂಜುಗಳಿಂದಾಗಿ ಉಷ್ಣಾಂಶದ ಹಂಚಿಕೆಯಲ್ಲಿ ಮಾರ್ಪಾಡಾಗುವುದು.

©KTBS NOT TO BE REPUBLISHED

## ಸ್ವಾಭಾವಿಕ ಸಸ್ಯವರ್ಗ

ಆಫ್ರಿಕದ ಸ್ವಾಭಾವಿಕ ಸಸ್ಯವರ್ಗದಲ್ಲಿ ವೈವಿಧ್ಯವಿದೆ. ಏಕೆಂದರೆ ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಮೇಲೆ ವಾಯುಗುಣ, ಮಣ್ಣು, ಮೇಲ್ಮೈ ಲಕ್ಷಣಗಳು ಮತ್ತು ಮಾನವನ ಪ್ರವೇಶಗಳ ಪರಸ್ಪರ ಪೂರಕ ಪ್ರಭಾವ ನೇರವಾಗಿ ಕಂಡುಬರುತ್ತದೆ. ಈ ಖಂಡದ ಬಹಳಷ್ಟು ಭಾಗಗಳಲ್ಲಿ ಸಸ್ಯವರ್ಗದ ಸ್ವರೂಪವು ಮಾನವ ಕೃತ್ಯಗಳಿಂದ ಬದಲಾಗಿದೆ. ಬಹಳಷ್ಟು ಅರಣ್ಯ ಮತ್ತು ಹುಲ್ಲುಗಾವಲುಗಳು ವಿವಿಧ ಉದ್ದೇಶಗಳಿಗಾಗಿ ಕಡಿಯಲ್ಪಟ್ಟಿವೆ ಮತ್ತು ಸುಡಲ್ಪಟ್ಟಿವೆ. ಹೀಗಾಗಿ ಆಫ್ರಿಕ ಖಂಡದ ಪ್ರಸ್ತುತ ಸಸ್ಯವರ್ಗದಲ್ಲಿ ಎಲ್ಲವೂ 'ಸ್ವಾಭಾವಿಕವಲ್ಲ'.




ಸ್ವಾಭಾವಿಕ ಸಸ್ಯವರ್ಗ

NOT TO BE REPUBLISHED @KTBS

ಸಮಭಾಜಕ ವೃತ್ತದ ಅತಿ ಉಷ್ಣ ಮತ್ತು ಆರ್ದ್ರಭರಿತ ವಾಯುಗುಣವು ಅಲ್ಲಿ ದಟ್ಟವಾದ ಕಾಡು ಬೆಳೆಯುವಂತೆ ಮಾಡಿದೆ. ಮರಗಳು ಎತ್ತರವಾಗಿ ಬೆಳೆಯುತ್ತವೆ. ಸಮಭಾಜಕ ವೃತ್ತದ ಸದಾಹಸಿರಾಗಿರುವ ಅರಣ್ಯಗಳ ಮುಖ್ಯ ಲಕ್ಷಣವೆಂದರೆ ಅವೆಲ್ಲ ಅಗಲವಾದ ಎಲೆಗಳನ್ನು ಹೊಂದಿವೆ ಮತ್ತು ಅಪ್ಪುಸಸ್ಯ (ಅಧಿಸಸ್ಯ) ಗುಣವನ್ನು ಹೊಂದಿವೆ.

ವಿಶೇಷ ಲಕ್ಷಣವುಳ್ಳ ಪ್ರಭೇದದ ಮರಗಳು ಇಲ್ಲಿ ಬಹಳ ವಿರಳವಾಗಿವೆ. ಆದಾಗ್ಯೂ ಉಷ್ಣವಲಯದ ಬೆಲೆಬಾಳುವ ಗಟ್ಟಿ ಮರಗಳಾದ ರಬ್ಬರ್, ಬೀಟೆ, ಎಬೋನಿ, ಸಿಂಕೋನ, ತೇಗ, ತಾಳೆ, ಕರಿಮರ ಮುಂತಾದ ಮರಗಳು ಬೆಳೆಯುತ್ತವೆ. ಮ್ಯಾಂಗ್ರೋವ್ ಸಸ್ಯಗಳು ಕೂಡಾ ಸಮುದ್ರದ ಅಳಿವೆಗಳ ಜವುಗು ಪ್ರದೇಶದಲ್ಲಿ ಬೆಳೆಯುತ್ತವೆ.



**ಬೇಯೋಬಾಬ್ ಮರ**

@KTBS NOT TO BE REPUBLISHED

ಸದಾ ಹಸಿರಾಗಿರುವ ಸಮಭಾಜಕ ವೃತ್ತದ ಕಾಡುಗಳಿಂದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಜಾಲಿ ಮತ್ತು ಬೆಯೋಬಾಬ್ (ಆನೆ ಹುಣಿಸೆ) (Baobab) ಮರಗಳಿಂದ ಆವೃತ್ತವಾದ ಸವನ್ನ ಕಾಡುಗಳಿವೆ. ಮಳೆ ಕಡಿಮೆಯಾಗುವ ಪ್ರದೇಶದಲ್ಲಿ ಸವನ್ನ ಕಾಡುಗಳು ಮುಳ್ಳು ಕಂಟಿ ಮತ್ತು ಹುಲ್ಲುಗಾವಲಿಗೆ ದಾರಿ ಮಾಡಿಕೊಡುತ್ತವೆ. ಮುಳ್ಳು ಕಂಟಿಗಳು ಮತ್ತು ಪೈನ್, ಜುನಿಪರ್, ಕಾರ್ಕ್, ಸಿಡಾರ್, ಫಿಗ್ ಮತ್ತು ಆಲಿವ್ ಮರಗಳು ಮೆಡಿಟರೇನಿಯನ್ ವಾಯುಗುಣವಿರುವ ಪ್ರದೇಶದಲ್ಲಿ ಕಂಡುಬರುತ್ತವೆ.

ಪ್ರಸ್ಥಭೂಮಿಗಳ ಎತ್ತರವಾದ ಭಾಗಗಳಲ್ಲಿ ಪರ್ವತ ಸಸ್ಯವರ್ಗ ಮತ್ತು ಸಹರ ಮತ್ತು ಕಲಹರಿ ಭಾಗಗಳಲ್ಲಿ ಮರುಭೂಮಿ ಸಸ್ಯವರ್ಗವಿದೆ. ದಕ್ಷಿಣ ಆಫ್ರಿಕದ ಕರ್ರೂ ಭಾಗದಲ್ಲಿ ಪ್ರಸಿದ್ಧ ಕುರುಚಲು ಸಸ್ಯವರ್ಗ, ನೈಲ್‌ನದಿ ಬಯಲಿನಲ್ಲಿ 'ಸಡ್' ಎಂಬ ವಿಶೇಷ ಸಸ್ಯವರ್ಗವಿದೆ.

## ಪ್ರಾಣಿಸಂಪತ್ತು

ಆಫ್ರಿಕದ ವನ್ಯ ಪ್ರಾಣಿ ಸಂಪತ್ತಿನಲ್ಲಿ ಬಹಳ ವೈವಿಧ್ಯತೆ ಇದೆ. ಇಲ್ಲಿನ ವಾಯುಗುಣದ ಪರಿಸ್ಥಿತಿ, ಮೇಲ್ಮೈ ಲಕ್ಷಣ, ಅರಣ್ಯ, ಮಣ್ಣಿನ ಪ್ರಕಾರಗಳು, ಏಷ್ಯಾ ಮತ್ತು ಯುರೋಪ್ ಖಂಡಗಳ ಸಂಪರ್ಕ ಈ ಬಗೆಯ ಪ್ರಾಣಿ ವೈವಿಧ್ಯಕ್ಕೆ ಕಾರಣವಾಗಿವೆ. ಮಳೆ ಕಾಡುಪ್ರದೇಶವು ಬಹಳಷ್ಟು ಪ್ರಾಣಿಗಳ ತಾಣವಾಗಿದೆ. ಚಿಂಪಾಂಜೀ, ವಿವಿಧ ಬಗೆಯ ಮಂಗಗಳು, ಗೊರಿಲ್ಲಾ, ಕಾಡೆಮ್ಮೆ, ಚಿರತೆ ಹಾಗೂ ಇತರೆ ಗೊರಸುಳ್ಳ ಪ್ರಾಣಿಗಳು ಇಲ್ಲಿ ಕಂಡುಬರುತ್ತವೆ.

ಮೊಸಳೆಗಳು ಮತ್ತು ನೀರಾನೆಗಳು ನದಿಗಳು ಮತ್ತು ಜಲಾವೃತ ಜವುಗು ಪ್ರದೇಶಗಳಲ್ಲಿ ಕಂಡುಬಂದರೆ, ಆಕರ್ಷಕ ವಿವಿಧ ಬಣ್ಣ ಪಕ್ಷಿಗಳು ಇಲ್ಲಿ ಸರ್ವೆಸಾಮಾನ್ಯ. ಉದಾ: ಉಷ್ಟ್ರಪಕ್ಷಿ, ಗರುಡಪಕ್ಷಿ, ಮಿಂಚುಳ್ಳಿ ಇತ್ಯಾದಿ.



**ಪ್ರಮುಖ ವನ್ಯ ಜೀವಿಗಳು**

ಜೀಬ್ರಾ, ಕಾಡುಬೆಕ್ಕು, ಜಿರಾಫೆ, ಘೇಂಡಾಮೃಗ, ಆನೆ, ಇಂಪಾಲ, ಚೀತಾ ಮತ್ತು ಆಫ್ರಿಕಸಿಂಹಗಳು ಉಷ್ಣವಲಯದ ಹುಲ್ಲುಗಾವಲು ಮತ್ತು ಸವನ್ನಾ ಪ್ರದೇಶಗಳಲ್ಲಿ ಕಂಡುಬರುತ್ತವೆ.

ಮರುಭೂಮಿ ಪ್ರದೇಶದಲ್ಲಿ ಚೇಳು, ಒಂಟೆ, ಹಲ್ಲಿ, ಮರುಭೂಮಿ ನರಿ, ವಿವಿಧ ಬಗೆಯ ಕೀಟಗಳು ಕಾಣಬರುತ್ತವೆ. ಇದರೊಂದಿಗೆ ಜಿಂಕೆ ಜಾತಿಗೆ ಸೇರಿದ ಸುಂದರ ಪ್ರಾಣಿ, ಕತ್ತೆ, ಕುದುರೆ ಮತ್ತು ಅಡಾಕ್ಷಗಳು (Addax) ಕಂಡುಬರುತ್ತವೆ. ಒಂಟೆ ಬಹಳ ಮಹತ್ವದ ಹಾಗೂ ಎಲ್ಲರಿಗೂ ತಿಳಿದಿರುವ ಮರುಭೂಮಿಯ ಪ್ರಾಣಿಯಾಗಿದೆ. ಇದನ್ನು ಕೆಲವೊಮ್ಮೆ ಮರುಭೂಮಿಯ ಹಡಗು ಎಂದು ಕರೆಯಲಾಗುತ್ತದೆ.

 

ಇಂಪಾಲ ಮತ್ತು ಅಡಾಕ್ಸಗಳು

**ಉಷ್ಟ್ರಪಕ್ಷಿ**

ಇದು ಆಫ್ರಿಕದ ಮೂಲವಾಸಿ ಆಗಿದ್ದು ಕಲಹರಿ ಮರುಭೂಮಿ ಮತ್ತು ಆಫ್ರಿಕದ ದಕ್ಷಿಣ ಮೈದಾನಗಳಲ್ಲಿ ಕಂಡುಬರುತ್ತದೆ. ಇದು ಪ್ರಪಂಚದಲ್ಲಿಯೇ ಜೀವಂತವಿರುವ ಅತ್ಯಂತ ದೊಡ್ಡದಾದ ಪಕ್ಷಿಯಾಗಿದೆ. ಜಗತ್ತಿನಲ್ಲಿಯೇ ಅತಿ ದೊಡ್ಡಗಾತ್ರದ ಮೊಟ್ಟೆಯಿಡುತ್ತದೆ. ಇದು ಹಾರಲಾರದು. ಆದರೆ ಅತ್ಯಂತ ವೇಗವಾಗಿ ಓಡುವ ಪಕ್ಷಿ ಮತ್ತು ತನ್ನ ಕಾಲುಗಳಿಗೆ ಎರಡು ಬೆರಳುಗಳನ್ನು ಹೊಂದಿರುವ ಪ್ರಪಂಚದ ಏಕೈಕ ಪಕ್ಷಿಯಾಗಿದೆ.



© KTBS NOT TO BE REPUBLISHED

## 5. ವ್ಯವಸಾಯ ಮತ್ತು ಕೈಗಾರಿಕೆಗಳು

ಆಫ್ರಿಕದ ಬಹಳಷ್ಟು ದೇಶಗಳಲ್ಲಿ ವ್ಯವಸಾಯ(ಒಕ್ಕಲುತನ)ವು ಬಹಳ ಮಹತ್ವದ ಜನರ ಆರ್ಥಿಕ ಚಟುವಟಿಕೆಯಾಗಿದೆ. ಸುಮಾರು ಶೇ.75ಕ್ಕೂ ಹೆಚ್ಚು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ.

ಸಮಭಾಜಕ ವೃತ್ತದ ಪ್ರದೇಶವನ್ನು ಹೊರತು ಪಡಿಸಿ ಆಫ್ರಿಕದ ಬಹಳಷ್ಟು ದೇಶಗಳಲ್ಲಿ ಒಕ್ಕಲುತನವು ಜೀವನಾಧಾರ ಬೇಸಾಯವಾಗಿದೆ. ಆಧುನಿಕ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಉಪಯೋಗ ಬಹಳ ಕಡಿಮೆ. ಬಹಳಷ್ಟು ಕಡೆ ಒಕ್ಕಲುತನವು ಮಾನವ ಶ್ರಮದಿಂದ ನಡೆಯುತ್ತವೆ. ಪ್ರತಿ ಹೆಕ್ಟೇರ್ ಇಳುವರಿ ಕೂಡ ಬಹಳ ಕಡಿಮೆ.

ಬಹಳಷ್ಟು ಬೇಸಾಯ ಪ್ರದೇಶದಲ್ಲಿ ಆಹಾರಧಾನ್ಯ ಬೆಳೆಗಳು ಮಹತ್ವದ ಸ್ಥಾನವನ್ನು ಪಡೆದಿವೆ. ಮೆಕ್ಕೆಜೋಳ, ಭತ್ತ, ನವಣೆ, ಸಿಹಿ ಆಲೂಗಡ್ಡೆ ಮತ್ತು ಗೆಣಸು, ಕಡಲೆಕಾಯಿ, ಬಟಾಣಿ ಮತ್ತು ಹಿಟ್ಟಿನ ಬೆಳೆಗಳು ಪ್ರಧಾನ ಬೆಳೆಗಳು. ಸಮಭಾಜಕವೃತ್ತ ವಲಯದ ವಾಯುಗುಣವುಳ್ಳ ಪ್ರದೇಶದಲ್ಲಿ ನೆಡುತೋಟದ ಬೇಸಾಯವು ಪ್ರಮುಖವಾದುದು. ಬುರುಂಡಿ ಪ್ರದೇಶವು ರಫ್ತಿಗಾಗಿ ಕಾಫಿ ಬೆಳೆಗೆ, ಕೋಕೊ ಬೆಳೆಯು ಕೋಟೆ–ಡಿ–ವೋರೆ ಮತ್ತು ಘಾನದಲ್ಲಿಯೂ ಹಾಗೂ ಬಟಾಣಿಗಳಂತಹ ಬೇಳೆಕಾಳುಗಳು ಗ್ಯಾಂಬಿಯಾ ದೇಶಗಳಲ್ಲಿ ಬೆಳೆಯಲಾಗುತ್ತದೆ. ಆಫ್ರಿಕದಲ್ಲಿ ಬೆಳೆಯುವ ಇತರ ಬೆಳೆಗಳೆಂದರೆ ಕಬ್ಬು, ಬಾಳೆ, ಚಹ, ತಾಳೆಎಣ್ಣೆ ಬೆಳೆ, ಮತ್ತು ನಿಂಬೆಜಾತಿಯ ಹಣ್ಣುಗಳು. ಇವೆಲ್ಲ ದೊಡ್ಡ ಎಸ್ಟೇಟ್‌ಗಳಲ್ಲಿ ಮತ್ತು ನೀರಾವರಿ ಬೇಸಾಯದಲ್ಲಿ ಬೆಳೆಯಲಾಗುವುದು.

ಸೆನೆಗಲ್, ಮಾರಿಟಾನಿಯಾ, ಮಾಲಿ, ನೈಜರ್, ಚಾಡ್, ಉತ್ತರ ಸುಡಾನ್, ಇಥಿಯೋಪಿಯ ಮತ್ತು ಸೋಮಾಲಿಯ ದೇಶಗಳು (Sahel) ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತವೆ ಮತ್ತು ಅಲ್ಲಿಯ ಜನರು ಹಸಿವೀನಿಂದ ಬಳಲುವರು.

ಆಫ್ರಿಕವು ವಿವಿಧ ಜಾತಿಯ ಹಣ್ಣುಗಳಿಗೆ ಪ್ರಸಿದ್ಧವಾಗಿದೆ. ಮೆಡಿಟರೇನಿಯನ್ ಪ್ರದೇಶದಲ್ಲಿ ನಿಂಬೆ ಜಾತಿಗೆ ಸೇರಿದ ಹಣ್ಣುಗಳಾದ, ಆಲೀವ್, ಲಿಂಬೆ, ಕಿತ್ತಳೆ, ದ್ರಾಕ್ಷಿ ಸಾಮಾನ್ಯವಾಗಿವೆ. ಪೂರ್ವ ಆಫ್ರಿಕದಲ್ಲಿ ಗೋಡಂಬಿ ಬೆಳೆಯುತ್ತಾರೆ. ಜಾಂಜೀಬಾರ ದ್ವೀಪ ಮತ್ತು ಟಾಂಟನಿಯಾಗಳು ಲವಂಗ ಬೆಳೆಗೆ ಪ್ರಸಿದ್ಧಿ ಪಡೆದಿವೆ.

ಇಲ್ಲಿ ಗೋವಿನ ಜೋಳ (ಮೆಕ್ಕೆಜೋಳ) ಬಹಳ ಮಹತ್ವ ಪಡೆದಿದೆ. ಸ್ವಲ್ಪ ಪ್ರದೇಶದಲ್ಲಿ ಭತ್ತ ಮತ್ತು ಕಬ್ಬುಬೆಳೆಗಳನ್ನು ಬೆಳೆಯುತ್ತಾರೆ. ಹಣದ ಬೆಳೆಗಳಾದ ಕಾಫಿ, ತಾಳೆ, ನೆಲಗಡಲೆಗಳನ್ನು ಮಧ್ಯ, ಪೂರ್ವ ಹಾಗೂ ಆಫ್ರಿಕದ ಇತರೆ ಭಾಗಗಳಲ್ಲಿ ಬೆಳೆಯಲಾಗುತ್ತದೆ. ಕಾಫಿಯನ್ನು ಇಥಿಯೋಪಿಯಾದಲ್ಲಿ ಸಾವಿರಾರು ವರ್ಷಗಳಿಂದಲೂ ಬೆಳೆಯುತ್ತಾ ಬಂದಿದ್ದಾರೆ. ಈಜಿಪ್ಟ್ ದೇಶವು ಹತ್ತಿ ಬೆಳೆಗೆ ಪ್ರಸಿದ್ಧವಾಗಿದೆ.

ಯೂರೋಪಿಯನ್ನರು ನೆಲೆಗೊಂಡಿರುವಂತಹ ಕೀನ್ಯ, ದಕ್ಷಿಣ ಆಫ್ರಿಕ ಮತ್ತು ಜಿಂಬಾಬ್ವೆಗಳಲ್ಲಿ ಆಕಳು ಸಾಕಣೆ ಮುಖ್ಯ ಉದ್ಯೋಗವಾಗಿದೆ. ಪ್ರಪಂಚದ ಶೇ.15 ಭಾಗದಷ್ಟು ಆಕಳುಗಳು ಆಫ್ರಿಕ ಒಂದರಲ್ಲಿಯೇ ಇವೆ.

**ವ್ಯವಸಾಯ ಹಿಂದುಳಿಯುವುದಕ್ಕೆ ಕಾರಣಗಳು:** ಆಫ್ರಿಕದಲ್ಲಿ ವ್ಯವಸಾಯ ಹಿಂದುಳಿಯಲು ಹಳೆಯ ಕೃಷಿ ಪದ್ಧತಿ, ಜೀವನೋಪಾಯ ಬೇಸಾಯದ ವಿಧಾನ, ಹಳೆಯ ಕೃಷಿ ಉಪಕರಣಗಳ ಬಳಕೆ, ಅನರಕ್ಷರತೆ, ಬುಡಕಟ್ಟು ಪದ್ಧತಿ, ಬಂಡವಾಳ ಹಾಗೂ ವಿದೇಶೀ ಬಂಡವಾಳದ ಹೂಡುವಿಕೆಯ ಕೊರತೆ ಇತ್ಯಾದಿಗಳು ಕಾರಣ.

@KTBS NOT TO BE REPUBLISHED

### ಕೈಗಾರಿಕೆಗಳ ನಿಧಾನ ಅಭಿವೃದ್ಧಿಗೆ ಕಾರಣಗಳು

- ಆಫ್ರಿಕದ ಅನೇಕ ದೇಶಗಳು ನೀರು, ಅರಣ್ಯ ಮತ್ತು ಖನಿಜ ಸಂಪತ್ತಿನಲ್ಲಿ ಶ್ರೀಮಂತವಾಗಿವೆ. ಈ ನೈಸರ್ಗಿಕ ಸಂಪತ್ತಿನ ಹಂಚಿಕೆ ಸಮನಾಗಿಲ್ಲ. ಇಲ್ಲಿಯ ಬಹಳಷ್ಟು ದೇಶಗಳ ಆರ್ಥಿಕತೆಯು ಬೇಸಾಯ ಅವಲಂಬಿತ ಗುಣಲಕ್ಷಣವನ್ನು ಹೊಂದಿದೆ.
- ಕಳೆದ ಶತಮಾನದ ಮಧ್ಯಕಾಲದವರೆಗೂ ಆಫ್ರಿಕದ ನೈಸರ್ಗಿಕ ಸಂಪತ್ತು ಯುರೋಪಿಯನ್‌ರಿಂದ ಲೂಟಿಗೆ ಒಳಗಾಗುತ್ತಲೇ ಇತ್ತು. ಇದು ಅಲ್ಲಿ ಕೈಗಾರಿಕೀಕರಣ ನಿಧಾನವಾಗಲು ಕಾರಣವಾಗಿದೆ. ಇದರೊಂದಿಗೆ ಕೈಗಾರಿಕೀಕರಣಕ್ಕೆ ಬೇಕಾದ ಮೂಲಭೂತ ಸೌಕರ್ಯಗಳ ಕೊರತೆ, ಕಡಿಮೆ ಬಂಡವಾಳ, ತಂತ್ರಜ್ಞಾನದ ಕೊರತೆ ನುರಿತ ಕಾರ್ಮಿಕರ ಕೊರತೆ, ಕಡಿಮೆ ಕೊಳ್ಳುವ ಶಕ್ತಿ, ಮತ್ತು ರಾಜಕೀಯ ಗೊಂದಲಗಳು ಆಫ್ರಿಕ ದೇಶಗಳಲ್ಲಿ ಕೈಗಾರಿಕಾ ಅಭಿವೃದ್ಧಿ ಕುಂಟಿತವಾಗಲು ಕಾರಣವಾಗಿವೆ.
- ಕಳೆದ ಕೆಲವು ದಶಕಗಳಲ್ಲಿ ಕೈಗಾರಿಕೀಕರಣಕ್ಕೆ ಒಳಗಾಗುತ್ತಿರುವ ದೇಶಗಳೆಂದರೆ ಜಿಂಬಾಬ್ವೆ, ನೈಜಿರಿಯ, ಈಜಿಪ್ಟ್, ಅಲ್ಜೀರಿಯ ಮತ್ತು ದಕ್ಷಿಣ ಆಫ್ರಿಕ ಸ್ವತಂತ್ರ ಪಡೆದ ನಂತರ ಬಹಳಷ್ಟು ಆಫ್ರಿಕದ ದೇಶಗಳು ಲಘು ಕೈಗಾರಿಕಾ ಬೆಳವಣಿಗೆಯಲ್ಲಿ ಆಸಕ್ತಿ ತೋರಿವೆ. ಜವಳಿ ಉದ್ಯಮ, ಔಷಧಿ ಮತ್ತು ಆಹಾರ ಸಂಸ್ಕರಣ ಹಾಗೂ ಪಾನೀಯ ಉದ್ದಿಮೆಗಳು ಜಾರಿಗೆ ಬರುತ್ತಿವೆ.
- ಬೃಹತ್ ಉದ್ದಿಮೆಗಳಾದ ಕಬ್ಬಿಣ ಮತ್ತು ಉಕ್ಕು, ರಬ್ಬರ್, ಸಿಮೆಂಟ್, ಮತ್ತು ಪೆಟ್ರೋ–ರಾಸಾಯನಿಕಗಳ ತಯಾರಿಕೆಗಳು ದಕ್ಷಿಣ ಆಫ್ರಿಕದಲ್ಲಿ ಕೇಂದ್ರೀಕರಣಗೊಳ್ಳುತ್ತಿವೆ. ಅಲ್ಜೀರಿಯ, ಟುನಿಸಿಯ, ಈಜಿಪ್ಟ್ ಮತ್ತು ಜಿಂಬಾಬ್ವೆ ದೇಶಗಳಲ್ಲಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಗಳು ಹಂಚಿಕೆಯಾಗಿವೆ. ಆಫ್ರಿಕದ ಇತರ ಪ್ರಮುಖ ಕೈಗಾರಿಕೆಗಳೆಂದರೆ ವಿದ್ಯುತ್‌ಯಂತ್ರ, ಸಾರಿಗೆ ಉಪಕರಣ, ಟ್ರಾಕ್ಟರ್ ತಯಾರಿಕೆ ಹಾಗೂ ಸಮರಕ್ಕೆ ಬಳಕೆಯಾಗುವ ವಿಮಾನ ಜೋಡಣೆ.

## 6. ಬೆಲೆಬಾಳುವ ಖನಿಜಗಳು

### ವಜ್ರ ಮತ್ತು ಬಂಗಾರ

ಆಫ್ರಿಕ ಖಂಡವು ಅಪಾರವಾದ ಖನಿಜ ಸಂಪತ್ತನ್ನು ಹೊಂದಿದೆ. ಆದರೆ ಬೆಲೆಬಾಳುವ ಖನಿಜಗಳಾದ ವಜ್ರ, ಬಂಗಾರ ಮತ್ತು ಪ್ಲಾಟಿನಮ್‌ಗಳನ್ನು ಹೆಚ್ಚು ಉತ್ಪಾದಿಸುತ್ತದೆ.

**ವಜ್ರ:** ಪ್ರಪಂಚದ ಒಟ್ಟು ವಜ್ರದ ನಿಕ್ಷೇಪದಲ್ಲಿ ಶೇ 80 ಭಾಗವು ಆಫ್ರಿಕ ಒಂದರಲ್ಲೇ ಕಂಡುಬರುತ್ತದೆ. ಬೋಸ್ಟ್‌ವಾನ, ಜೈರೆ ಮತ್ತು ದಕ್ಷಿಣ ಆಫ್ರಿಕಗಳು ಅತಿ ಹೆಚ್ಚು ವಜ್ರವನ್ನು

@KTBS NOT TO BE REPUBLISHED

ಉತ್ಪಾದಿಸುವ ದೇಶಗಳಾಗಿವೆ. ಅಂಗೋಲ, ನಮೀಬಿಯ ಮತ್ತು ಘಾನ ದೇಶಗಳು ಇತರೆ ಉತ್ಪಾದಕರು. ವಜ್ರವನ್ನು ಹರಳುವಜ್ರ ಮತ್ತು ಕೈಗಾರಿಕಾ ವಜ್ರವೆಂದು ವಿಂಗಡಿಸಲಾಗಿದೆ. ಕೈಗಾರಿಕಾ ವಜ್ರವು ಮುಖ್ಯವಾಗಿ ಉಜ್ಜು ಕಾಗದ ಮತ್ತು ಗಾಜು ಕತ್ತರಿಸುವ ಉಪಕರಣಗಳ ತಯಾರಿಕೆಗೆ ಬಳಕೆಯಾಗುತ್ತದೆ.




© KTBS NOT TO BE REPUBLISHED

ಪ್ರಮುಖ ಖನಿಜಗಳು

**ಬಂಗಾರ:** ಪ್ರಪಂಚದ ಅರ್ಧದಷ್ಟು ಬಂಗಾರದ ನಿಕ್ಷೇಪವು ದಕ್ಷಿಣ ಆಫ್ರಿಕ ಒಂದರಲ್ಲೇ ಕಂಡುಬರುತ್ತದೆ. ಬಂಗಾರ ಹಂಚಿಕೆಯಾಗಿರುವ ಮುಖ್ಯಸ್ಥಳಗಳೆಂದರೆ ವಿಟ್‌ವಾಟರ್ಸ್ರ್ಯಾಂಡ್ (ಟ್ರಾನ್ಸವಾಲ್) ಮತ್ತು ಆರೆಂಜ್ ಫ್ರೀ ಸ್ಟೇಟ್ ರಾಜ್ಯಗಳಾಗಿವೆ. ಈ ಖಂಡದ ಒಟ್ಟು ಬಂಗಾರದ ಉತ್ಪಾದನೆಯಲ್ಲಿ ಶೇ.50ಕ್ಕೂ ಹೆಚ್ಚಿನ ಭಾಗವು ದಕ್ಷಿಣ ಆಫ್ರಿಕ, ಜಿಂಬಾಬ್ವೆ ಮತ್ತು ಕಾಂಗೋ (ಜೈರೆ) ಗಣರಾಜ್ಯಗಳಿಂದ ಪೂರೈಕೆಯಾಗುತ್ತದೆ.

## 7. ಜನಸಂಖ್ಯೆ: ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆ

ಪ್ರಪಂಚದಲ್ಲಿ ಮೊಟ್ಟಮೊದಲು ಮನುಷ್ಯ ಕಾಣಿಸಿಕೊಂಡು ಉಪಕರಣಗಳನ್ನು ಬಳಸಲು ಕಲಿತದ್ದು ಆಫ್ರಿಕದಲ್ಲೇ ಎಂದು ಪರಿಗಣಿಸಲಾಗಿದೆ. ಮಾನವಶಾಸ್ತ್ರಜ್ಞರು ಮತ್ತು ವಿಜ್ಞಾನಿಗಳ ಅಭಿಪ್ರಾಯದಂತೆ ಹೋಮೋಸೇಪಿಯನ್ನರು ಆಫ್ರಿಕದ ಕೀನ್ಯ ಮತ್ತು ಇಥಿಯೋಪಿಯಗಳಲ್ಲಿಯ ಪೂರ್ವ ಸರೋವರದ ಬಳಿ ಕಾಣಿಸಿಕೊಂಡರೆಂದು ತಿಳಿದುಬರುತ್ತದೆ.

ಪ್ರಧಾನವಾಗಿ ನೀಗ್ರೊ ಹಾಗೂ ಅವರ ಮೂಲನಿವಾಸಿಗಳ ಗುಂಪುಗಳಿಂದ ಕೂಡಿದೆ. ಈಗ ಆಫ್ರಿಕವು ವಿವಿಧ ಜನಾಂಗ ಮತ್ತು ಕುಲವರ್ಗಗಳನ್ನು ಹೊಂದಿದೆ. ಈ ಖಂಡದಲ್ಲಿ ವಿವಿಧ ಜನರು, ಭಾಷೆ ಮತ್ತು ಸಂಸ್ಕೃತಿಗಳ ಮಿಲನವಾಗಿದೆ.

©KTBS NOT TO BE REPUBLISHED

ಸುಮಾರು 1051 ಮಿಲಿಯನ್ ಜನರು ಆಫ್ರಿಕ ಖಂಡದಲ್ಲಿ ವಾಸಿಸುತ್ತಾರೆ. ನೈಜೀರಿಯ, ಈಜಿಪ್ಟ್, ಇಥಿಯೋಪಿಯ, ಜೈರೆ ಮತ್ತು ದಕ್ಷಿಣ ಆಫ್ರಿಕಗಳು ಹೆಚ್ಚು ಜನಸಾಂದ್ರತೆಯನ್ನು ಹೊಂದಿವೆ. ಕಳೆದ ಮೂರು ದಶಕಗಳಲ್ಲಿ ಆಫ್ರಿಕದ ಕೆಲವು ರಾಷ್ಟ್ರಗಳಲ್ಲಿ ಮರಣ ಪ್ರಮಾಣವು ಕಡಿಮೆಯಾಗಿದೆ. ಅದಕ್ಕೆ ಕಾರಣ, ಆಹಾರದ ಹೆಚ್ಚು ಉತ್ಪಾದನೆ, ಔಷಧಿಯ ಸರಬರಾಜು ಮತ್ತು ಸ್ವಚ್ಛ ನಿರ್ವಹಣಾ ಸುಧಾರಣೆಗಳೇ ಆಗಿವೆ. ಆದರೆ ಜನನ ಪ್ರಮಾಣವು ಹೆಚ್ಚಾಗಿದ್ದು ಅಧಿಕ ಜನಸಾಂದ್ರತೆಗೆ ಕಾರಣವಾಗಿದೆ. ಆಫ್ರಿಕದ ಜನಸಂಖ್ಯಾ ಬೆಳವಣಿಗೆ ದರವು ಪ್ರಪಂಚದ ಸರಾಸರಿ ಅಥವಾ ಅದಕ್ಕೂ ಹೆಚ್ಚಾಗಿರುತ್ತದೆ.

ಕೆಲವು ದೇಶಗಳಾದ ಸೋಮಾಲಿಯ, ಇಥಿಯೋಪಿಯ, ಚಾಡ್, ನೈಜೀರಿಯ, ಮಾಲಿಗಳಲ್ಲಿ ಜೀವಿತಾವಧಿ ಬಹಳ ಕಡಿಮೆ. ಅಂದರೆ 50 ವರ್ಷಗಳು ಮಾತ್ರ.

ವಿಶೇಷವಾದ ಸಂಗತಿ ಎಂದರೆ ಜನಸಂಖ್ಯೆಯ ಹಂಚಿಕೆ ಅಸಮಾನವಾಗಿರುವುದು. ಅತಿ ಹೆಚ್ಚು ಜನಸಾಂದ್ರತೆಯು ಆಫ್ರಿಕದ ಗಿನಿಯ ಕರಾವಳಿ ಪ್ರದೇಶ, ನೈಲ್ ನದಿಯ ಕಣಿವೆ, ಪೂರ್ವ ಆಫ್ರಿಕದ ಎತ್ತರ ಪ್ರದೇಶ, ಮತ್ತು ಮಡಗಾಸ್ಕರ್ ಹಾಗೂ ಉತ್ತರದ ಕರಾವಳಿ ದಕ್ಷಿಣ ಆಫ್ರಿಕ, ಜಿಂಬಾಬ್ವೆ ಹಾಗೂ ಜೈರೆಗಳ ನಗರ ಮತ್ತು ಗಣಿ ಪ್ರದೇಶಗಳಲ್ಲಿ ತುಂಬಿಕೊಂಡಿದೆ.




@KTBS NOT TO BE REPUBLISHED

ಜನಸಂಖ್ಯೆಯ ಹಂಚಿಕೆ

ಕಡಿಮೆ ಜನಸಾಂದ್ರತೆಯು ಮರುಭೂಮಿ, ಪರ್ವತ ಪ್ರದೇಶಗಳು ಹಾಗೂ ಸಮಭಾಜಕವೃತ್ತದ ಅಭಯಾರಣ್ಯ ಭಾಗಗಳಲ್ಲಿ ಕಂಡುಬರುತ್ತದೆ. ಲಿಬಿಯದ ಸಹಾರಾ ಮತ್ತು ಅಲ್ಜೀರಿಯಗಳಲ್ಲಿ ಕಡಿಮೆ ಜನಸಾಂದ್ರತೆ ಇದೆ. ಇಲ್ಲಿಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ. ಗೆ 15 ಜನರು.

ಆಫ್ರಿಕದ ಜನರನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು :

1) ಪಿಗ್ಮಿಗಳು, ಬುಶ್‌ಮೆನ್ ಮತ್ತು ಮಸಾಯಿ. ಇವರು ಸಹಾರಾ ಮರುಭೂಮಿಯ ದಕ್ಷಿಣ ಭಾಗದಲ್ಲಿ ವಾಸಿಸುತ್ತಾರೆ.

2) ಅರಬ್ಬರು ಉತ್ತರ ಆಫ್ರಿಕದಲ್ಲಿ ವಾಸಿಸುತ್ತಾರೆ.

3) ಇಂಡಿಯನ್‌ರು ದಕ್ಷಿಣ ಮತ್ತು ಪೂರ್ವ ಆಫ್ರಿಕದಲ್ಲಿ ವಾಸಿಸುತ್ತಾರೆ.

4) ಯುರೋಪಿಯನ್ನರು ದಕ್ಷಿಣ ಆಫ್ರಿಕದಲ್ಲಿ ಹಾಗೂ ಇತರ ಫಲವತ್ತಾದ ನದಿ ಬಯಲುಗಳಲ್ಲಿ ವಾಸಿಸುತ್ತಾರೆ.

**ಹೊಸ ಪದಗಳು**

ಪರ್ಯಾಯ ದ್ವೀಪ, ಕೊಲ್ಲಿ, ಮರುಭೂಮಿ, ಸೀಳು ಕಣಿವೆ, ಸರೋವರಗಳು, ಜೀವಿತಾವಧಿ, ಜನಸಾಂದ್ರತೆ, ಪ್ರಧಾನ ರೇಖಾಂಶ, ಭೂಕಂಠ, ಕರ್ಕವೃತ್ತ, ಮಕರವೃತ್ತ, ಸವನ್ನ.

NOT TO BE REPUBLISHED @KTBS

**ನಿಮಗೆ ತಿಳಿದಿರಲಿ**

❖ ನೈಲ್ ನದಿಯ ಉದ್ದದ ಬಹುಭಾಗ ಸಹರ ಮರುಭೂಮಿಯಲ್ಲಿ ಸಾಗುತ್ತದೆ. ಆದರೂ ಅದು ಎಂದೂ ಬತ್ತಿ ಹೋಗುವುದಿಲ್ಲ ಇದಕ್ಕೆ ನೈಲ್ ನದಿಯ ಜಲಾನಯನ ಪ್ರದೇಶದಲ್ಲಿ ಸಾಕಷ್ಟು ಮಳೆ ಬೀಳುವುದೇ ಪ್ರಮುಖ ಕಾರಣ.

❖ ಸಹರ ಮರುಭೂಮಿಯು ಆಫ್ರಿಕದ ಉತ್ತರದ ಭಾಗವನ್ನು ಆವರಿಸಿದ್ದು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಮರುಭೂಮಿ.

❖ ಲಿಬಿಯಾದ ಇಲ್ ಅಜಿಜಿಯಾದಲ್ಲಿ ಪ್ರಪಂಚದಲ್ಲೇ ಅತಿಹೆಚ್ಚು ಉಷ್ಣಾಂಶ 500 ಸೆಲ್ಸಿಯಸ್ ದಾಖಲಾಗುತ್ತದೆ.

❖ ಅಡ್ಡಾಕ್ಷ ಎಂಬ ಪ್ರಾಣಿ ಉದ್ದವಾದ ತಿರುಚಲ್ಪಟ್ಟ ಕೋಡುಗಳುಳ್ಳ ಚಿಗರೆಯಾಗಿದೆ. ಇದು ನೀರು ಕುಡಿಯುವದಿಲ್ಲ. ಬದಲಾಗಿ ತನಗೆ ಬೇಕಾದ ನೀರನ್ನು ತಾನು ತಿನ್ನುವ ಹುಲ್ಲು ಮತ್ತು ಸಸ್ಯಗಳಿಂದ ಪಡೆದುಕೊಳ್ಳುತ್ತದೆ.

❖ ಆಫ್ರಿಕದಲ್ಲಿ ಬೆಯೋಬಾಬ್ ಎಂಬ ಮರ ಇದೆ. ಇದು ಬಾಟಲಿ ಆಕಾರದಲ್ಲಿ ಇದ್ದು ಇದರ ಕಾಂಡವು ನೀರನ್ನು ಹಿಡಿದಿಡಲು ಉಬ್ಬಿಕೊಂಡಿರುತ್ತದೆ. ಇದು 1000ದಿಂದ 12000 ಲೀಟರ್ ನೀರನ್ನು ಹಿಡಿದಿಡಬಲ್ಲದು. ನೀರು ಬೇಕಾದ ಪ್ರಯಾಣಿಕರು ಕೆಲವು ಸಲ ಈ ಮರದ ನೀರನ್ನು ಬಳಸುತ್ತಾರೆ.

❖ ಪ್ರಪಂಚದ ಶೇ.24 ಭಾಗದಷ್ಟು ಕಾಫಿ ಉತ್ಪನ್ನವು ಆಫ್ರಿಕದಿಂದ ಉತ್ಪಾದನೆಯಾಗುತ್ತದೆ.

❖ ಪ್ರಪಂಚದ ಶೇ.50 ಭಾಗಕ್ಕೂ ಹೆಚ್ಚು ಕೋಕೋವನ್ನು ಆಫ್ರಿಕ ಒಂದೇ ಉತ್ಪಾದಿಸುತ್ತದೆ.

❖ ಪಿಗ್ಮಿಗಳು ಪ್ರಪಂಚದಲ್ಲಿಯೇ ಅತಿ ಗಿಡ್ಡ ಜನರಾಗಿದ್ದಾರೆ. ಅವರು ಕಾಂಗೋ ಕಣಿವೆಯಲ್ಲಿ ವಾಸಿಸುತ್ತಾರೆ.

❖ ಆಫ್ರಿಕ ಖಂಡದ ಜನರು ಹೆಚ್ಚು ಫಲವಂತಿಕೆ ಶಕ್ತಿ ಹೊಂದಿದ್ದಾರೆ. ಆದರೆ ಅವರ ನಿರೀಕ್ಷಾ ವಯಸ್ಸು ಕಡಿಮೆ.

❖ ಆಫ್ರಿಕ ಖಂಡದಲ್ಲಿ 800ಕ್ಕೂ ಹೆಚ್ಚು ಭಾಷೆ ಮಾತನಾಡುವವರಿದ್ದಾರೆ.

❖ ಆಫ್ರಿಕದಲ್ಲಿ ಗ್ರಾಮೀಣ ಜನಸಂಖ್ಯೆ ಹೆಚ್ಚು. ಇದು ಕಡಿಮೆ ನಗರೀಕರಣವುಳ್ಳ ಖಂಡ.

@KTBS NOT TO BE REPUBLISHED

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 ಆಫ್ರಿಕವನ್ನು ಕತ್ತಲೆಯ ಖಂಡ ಎಂದು ಏಕೆ ಕರೆಯುತ್ತಿದ್ದರು?

2 ಆಫ್ರಿಕವನ್ನು ಕೇಂದ್ರೀಯ ಭೂಖಂಡ ಎನ್ನುವರು. ಏಕೆ?

3 ಭೂಕಂಠ ಎಂದರೇನು? ಆಫ್ರಿಕದ ಭೂಕಂಠ ಯಾವುದು?

4 ಆಫ್ರಿಕದ ತಗ್ಗು ಪ್ರದೇಶಗಳನ್ನು ಹೆಸರಿಸಿ.

5 ಆಫ್ರಿಕದ ಅತಿ ಎತ್ತರವಾದ ಪರ್ವತ ಶಿಖರ ಯಾವುದು?

6 ಆಫ್ರಿಕ ಖಂಡದ ವಿವಿಧ ಸಸ್ಯವರ್ಗಗಳನ್ನು ತಿಳಿಸಿ.

7 ಆಫ್ರಿಕದ ಅತ್ಯಂತ ಉದ್ದವಾದ ನದಿ ಯಾವುದು?

8 ಆಫ್ರಿಕದ ಪ್ರಮುಖ ಆಹಾರ ಬೆಳೆಗಳು ಯಾವುವು?

9 ಹೆಚ್ಚು ವಜ್ರದ ನಿಕ್ಷೇಪ ಉತ್ಪಾದಿಸುವ ಆಫ್ರಿಕದ ದೇಶಗಳು ಯಾವುವು?

### ಚಟುವಟಿಕೆಗಳು

1 ಆಫ್ರಿಕಖಂಡದ ಸೀಳು ಕಣಿವೆಯಲ್ಲಿ ಬರುವ ಪ್ರಮುಖ ಸರೋವರಗಳನ್ನು ಭೂಪಟದಲ್ಲಿ ಗುರುತಿಸಿ.

2 ಆಫ್ರಿಕದ ಪ್ರಮುಖ ನದಿಗಳು ಮತ್ತು ಪರ್ವತಗಳನ್ನು ಗುರುತಿಸಿ.

3 ಕರ್ನಾಟಕದಲ್ಲಿ ಬೆಯೋಬಾಬ್ (ಬಾಟಲಿ ಆಕಾರದ) ವೃಕ್ಷದ ಚಿತ್ರವನ್ನು ಸಂಗ್ರಹಿಸಿ.

4 ಆಫ್ರಿಕದ ಅಡಾಕ್ಸ ಮತ್ತು ನಮ್ಮ ಭಾರತದ ಚಿಗರೆಗಳೊಂದಿಗೆ ಹೋಲಿಕೆ ಮಾಡಿ ಬರೆಯಿರಿ.

@KTBS NOT TO BE REPUBLISHED